ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 21 ಗುರುವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 332 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ



ಕುಕ್ಕರಹಳ್ಳಿ ಪ್ರೌಢಶಾಲೆಗೆ ಡಿಡಿಪಿಐ ಹೆಚ್.ಕೆ.ಪಾಂಡು ಭೇಟಿ ನೀಡಿ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಯೋಜಿಸಿರುವ ವಿಶೇಷ ತರಗತಿ ಪರಿಶೀಲಿಸಿದ ದೃಶ್ಯ

ಮೈಸೂರು, ಮಾ.20(ಎಸ್‌ಪಿಎನ್)– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಶಿಕ್ಷಣ ಇಲಾಖೆ ವಿಶೇಷ ಒತ್ತು ನೀಡಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಹೆಚ್.ಕೆ.ಪಾಂಡು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ವಿಶೇಷ ತರಗತಿಗಳನ್ನು ಆಯೋಜಿಸಿದ್ದು, ವಿಷಯ ತಜ್ಞರ ಮೂಲಕ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ವೇಳಾಪಟ್ಟಿ ಪ್ರಕಾರ ಬೋಧನೆ ಮಾಡಲಾಗುತ್ತಿದೆ. ಅಲ್ಲದೆ, ವಿದ್ಯಾರ್ಥಿಗಳಿಗೆ ಮುಂಜಾನೆ 5 ಗಂಟೆ ಮತ್ತು ಸಂಜೆ 6 ಗಂಟೆಯಿಂದ ಓದಲು ಮೊಬೈಲ್ ಕರೆ ಮಾಡಿ ತಿಳಿಸಲಾಗುತ್ತಿದೆ ಎಂದರು.

ಮೂರು ತಿಂಗಳ ಹಿಂದೆ 5,776 ವಿದ್ಯಾರ್ಥಿಗಳು ಓದಿನಲ್ಲಿ ಹಿಂದುಳಿದಿದ್ದನ್ನು ಗುರುತಿಸಲಾಗಿತ್ತು. ಅವರಿಗೆ ಕಲಿಕಾಮೃತ ವಿಶೇಷ ತರಬೇತಿ ನೀಡಿದ ಬಳಿಕ 1800 ವಿದ್ಯಾರ್ಥಿಗಳು ಹಿಂದುಳಿವಿಕೆಯಲ್ಲಿ ಉಳಿದುಕೊಂಡಿದ್ದಾರೆ. ಈ ವಿದ್ಯಾರ್ಥಿಗಳು ಪರೀಕ್ಷೆ ತೇರ್ಗಡೆ ಹೊಂದಲು ಬೇಕಾದ ಎಲ್ಲಾ ತಯಾರಿ ನಡೆಸಲಾಗುತ್ತಿದೆ ಎಂದರು. ಇದರ ಭಾಗವಾಗಿ ಬಿಇಓ ಕಚೇರಿ ದಕ್ಷಿಣ ವಲಯ ವ್ಯಾಪ್ತಿಯ ಕುಕ್ಕರಹಳ್ಳಿ ಪ್ರೌಢಶಾಲೆಗೆ ವಿಶೇಷ ತರಗತಿಗಳು ನಡೆಯುತ್ತಿದ್ದ ಜಾಗಕ್ಕೆ ಮಂಗಳವಾರ ರಾತ್ರಿ ತೆರಳಿ, ಪರಿಶೀಲಿಸಿ, ಸಂಪನ್ಮೂಲ ಶಿಕ್ಷಕರಿಗೆ ಕೆಲ ಮಾರ್ಗದರ್ಶನ ಮಾಡಲಾಗಿದೆ ಎಂದು ತಿಳಿದರು. ಈ ವೇಳೆ ಬಿಇಓ ಸಿ.ಎನ್. ರಾಜು ಸೇರಿದಂತೆ ಇತರೆ ಸಂಪನ್ಮೂಲ ಶಿಕ್ಷಕರು ಉಪಸ್ಥಿತರಿದ್ದರು.

ತವರು ಮನೆಯಲ್ಲಿ ಸಂಸ್ಕಾರ, ಗಂಡನ ಮನೆಯಲ್ಲಿ ಸಹಕಾರ ದೊರೆತರೆ ಮಹಿಳಾ ದೌರ್ಜನ್ಯ ನಿಯಂತ್ರಣ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಪ್ರಾಧ್ಯಾಪಕಿ ಡಾ.ಜ್ಯೋತಿ ಅಭಿಪ್ರಾಯ

ಮೈಸೂರು, ಮಾ.20(ಬಿಎಲ್‌ಯು)– ಹೆಣ್ಣಿಗೆ ತವರು ಮನೆಯಲ್ಲಿ ಸಂಸ್ಕಾರ, ಗಂಡನ ಮನೆಯಲ್ಲಿ ಸಹಕಾರ ದೊರೆತರೆ ಮಹಿಳಾ ದೌರ್ಜನ್ಯ ಪ್ರಕರಣಗಳೇ ಇರುವುದಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಮಾಜಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ಹೆಚ್.ಪಿ.ಜ್ಯೋತಿ ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಇಂದು ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪುರುಷ ಹಾಗೂ ಮಹಿಳೆ ಪರಸ್ಪರ ಸಮಾನರಾಗಿ ಗೌರವಿಸಬೇಕು ಎಂದು ಸಲಹೆ ನೀಡಿದರು.

ಇನ್ನು ಕೂಡ ಪೂರ್ಣ ಪ್ರಮಾಣದಲ್ಲಿ ಮಹಿಳಾ ಸಬಲೀಕರಣವಾಗಿಲ್ಲ. ಮಹಿಳಾ ಸಬಲೀಕರಣ ಪ್ರಕ್ರಿಯೆ ಹಂತದಲ್ಲಿದೆ. ಇದು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳ್ಳಲು ಪುರುಷರು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.



ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ಜ್ಯೋತಿ ಉದ್ಘಾಟಿಸಿದರು.

ಯಾವ ಕ್ಷೇತ್ರದಲ್ಲೂ ಮಹಿಳೆಯರಿಗೆ ಶೇಕಡಾ 33ರಷ್ಟು ಮೀಸಲಾತಿ ದೊರಕಿಲ್ಲ. ಆದರೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಶೇಕಡ 62ರಷ್ಟು ಮಹಿಳೆಯರಿದ್ದಾರೆ. ಇದೇ ರೀತಿ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರಿಗೆ ಪ್ರಾಧಾನ್ಯತೆ ದೊರೆಯಬೇಕು ಎಂದು ಡಾ.ಜ್ಯೋತಿ ಸಲಹೆ ನೀಡಿದರು.

ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಿಳೆಯರು ಮಾತ್ರ ಭಾಗಿಯಾಗದೆ, ಪುರುಷರು ಕೂಡ ಹಾಜರಿರಬೇಕು. ಆಗ ಮಾತ್ರ ಮಹಿಳಾ ದಿನಾಚರಣೆ ಕಾರ್ಯಕ್ರಮ ಅರ್ಥಪೂರ್ಣವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

> ವೇದಗಳ ಕಾಲದಿಂದಲೂ ಮಹಿಳೆಯರಿಗೆ ಗೌರವ ಸ್ಥಾನವಿದೆ. ಮಹಾಭಾರತ ಮತ್ತು ರಾಮಾಯಣದಲ್ಲಿರುವ ಬಹಳಷ್ಟು ಸ್ತ್ರೀ ಪಾತ್ರಗಳಲ್ಲಿ ಪ್ರಬುದ್ಧತೆ ಇರುವುದನ್ನು ಕಾಣಬಹುದು. ಈ ಮೂಲಕ ಅನಾದಿ ಕಾಲದಿಂದಲೂ ಮಹಿಳೆ ಬುದ್ಧಿವಂತಳಾಗಿದ್ದಾಳೆ. ಭಾರತದಲ್ಲಿ ಹಿಂದಿನ ಕಾಲದಿಂದಲೂ ಮಹಿಳೆಯರಿಗೆ ಹೆಚ್ಚು ಪ್ರಾಧಾನ್ಯತೆ ದೊರೆಯುತ್ತಿದೆ. **–ಡಾ.ಹೆಚ್.ಪಿ.ಜ್ಯೋತಿ.**

ರಾಜ ಮಹಾರಾಜರ ಕಾಲದಿಂದಲೂ ಮಹಿಳೆಯರಿಗೆ ಗೌರವ ಭಾವನೆ ಇದೆ. ಆದರೆ ಮೊಘಲರ ನಂತರ ಮಹಿಳೆಯರ ಸ್ಥಾನಮಾನ ಹಾಗೂ ಹಕ್ಕಿಗೆ ಧಕ್ಕೆಯಾಯಿತು ಎಂದು ಡಾ.ಜ್ಯೋತಿ ತಿಳಿಸಿದರು.

ಯಾವ ಪುರುಷ ಬೇರೆ ಹೆಣ್ಣು ಮಕ್ಕಳನ್ನು ಗೌರವಿಸುವುದಿಲ್ಲವೊ, ಅಲ್ಲಿವರೆಗೆ ತನ್ನ ಮನೆಯ ಮಹಿಳೆಗೂ ಗೌರವ ಸ್ಥಾನ ಸಿಗುವುದಿಲ್ಲ. ಆದ ಕಾರಣ ಪುರುಷರು ಮಹಿಳೆಯರನ್ನು ಗೌರವ ಭಾವದಿಂದ ಕಾಣಬಹುದು ಎಂದು ಹೇಳಿದರು.

ಈ ವೇಳೆ ಮಾತನಾಡಿದ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎನ್.ಲಕ್ಷ್ಮಿ, ಮಹಿಳೆಯರು ತಮ್ಮ ಹಕ್ಕನ್ನು ಕೇಳಬೇಕು. ಹಕ್ಕಿಗಾಗಿ ಹೋರಾಟ ಮಾಡಬೇಕು. ಈ ಮೂಲಕ ಸ್ತ್ರೀಯರು ಬಲಿಷ್ಠಗೊಳ್ಳಬೇಕು. ಸ್ವಾಭಿಮಾನಕ್ಕೆ ಧಕ್ಕೆಯಾದರೆ ಹೋರಾಟ ಮಾಡಬೇಕು ಎಂದು ಸಲಹೆ ನೀಡಿದರು.

ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ್, ಡಾ.ರಾಮಸ್ವಾಮಿ ನಾಯ್ಡು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಾ.31ರಂದು ಮೈಸೂರಲ್ಲಿ ಕರ್ನಾಟಕ ಫ್ಯಾಷನ್ ಶೋ

ಮೈಸೂರು, ಮಾ.20(ಜಿಎ)–ಚಾಮರಾಜ ಮೊಹಲ್ಲಾ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್‌ನ ಮೊದಲನೇ ವಾರ್ಷಿಕೋತ್ಸವದ ಅಂಗವಾಗಿ ಕರ್ನಾಟಕ ಫ್ಯಾಷನ್ ಶೋ ಸ್ಪರ್ಧೆಯನ್ನು ಮಾ. 31ರಂದು ನಗರದ ಪುರಭವನದಲ್ಲಿ ಆಯೋಜಿಸಲಾಗಿದೆ ಎಂದು ನಗರಾಧ್ಯಕ್ಷೆ ಮೌಲ್ಯ ಜೈಕುಮಾರ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9ರವರೆಗೆ ಫ್ಯಾಷನ್ ಶೋ ಸ್ಪರ್ಧೆ ನಡೆಯಲಿದ್ದು, ವಿವಿಧ ವಿಭಾಗಗಳಲ್ಲಿ ಭಾಗವಹಿಸಬಹುದಾಗಿದೆ. ಜೊತೆಗೆ ಮಜಾ ಭಾರತ ಹಾಗೂ ಗಿಚ್ಚಿ ಗಿಲಿಗಿಲಿ ತಂಡದವರಿಂದ ಹಾಸ್ಯ ಕಾರ್ಯಕ್ರಮವಿದೆ. ಹೆಚ್ಚಿನ ಮಾಹಿತಿಗಾಗಿ 8897688976 ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಡಾ. ತೇಜಸ್ ಪೃಥ್ವಿರಾಜ್, ಹೇಮಲತಾ, ಮೂಗೂರು ಮಂಜು ಹಾಜರಿದ್ದರು.

ಮಾ.24, ಅಭಿವೃದ್ಧಿ ಸಹಕಾರ ಸಂಘದ ಸರ್ವ ಸದಸ್ಯರ ಸಭೆ

ಮೈಸೂರು, ಮಾ.20(ಜಿಎ)–ರಾಮಕೃಷ್ಣ ನಗರ ಎ ಮತ್ತು ಬಿ ಬ್ಲಾಕ್‌ನಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಜನೋದಯ ಅಭಿವೃದ್ಧಿ ಸಹಕಾರ ಸಂಘದ ಪ್ರಥಮ ಸರ್ವ ಸದಸ್ಯರ ಸಭೆಯನ್ನು ಮಾ.24ರಂದು ಬೆಳಗ್ಗೆ 11 ಗಂಟೆಗೆ ಸಿದ್ಧಾರ್ಥ ನಗರದ ಕನಕ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಪ್ರವರ್ತಕ ಹಾಗೂ ವಕೀಲ ರಾಮಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗೃಹ ನಿರ್ಮಾಣ, ನಿವೇಶನ ನೀಡಿಕೆ ಮೊದಲಾದ ವಿಷಯಗಳಿಂದ ಹೊರತುಪಡಿಸಿ ಇನ್ನಿತರ ಬ್ಯಾಂಕ್‌ಗಳಲ್ಲಿ ದೊರೆಯುವಂತಹ ಸಾಲ ಸೌಲಭ್ಯ ಸಂಘದಲ್ಲಿ ಲಭ್ಯವಿರಲಿದೆ. ಇದುವರೆಗೆ 973 ಮಂದಿ ಸದಸ್ಯರಾಗಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮುಖ್ಯ ಪ್ರವರ್ತಕ ಕೆ.ಎಸ್. ಚಿಕ್ಕೇಗೌಡ, ಪಿ.ಬಸವರಾಜು, ತಿಮ್ಮೇಗೌಡ, ಮಹದೇವಸ್ವಾಮಿ, ಮಧು, ವೀರೇಗೌಡ ಇದ್ದರು.



ಮೈಸೂರಿನ ನೇತ್ರಧಾಮ ಸೂಪರ್‌ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ವತಿಯಿಂದ ವಿಶ್ವ ಗ್ಲಾಕೋಮ ಸಪ್ತಾಹದ ಪ್ರಯುಕ್ತ ಗ್ಲಾಕೋಮ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಜಾಥಾ ನಡೆಸಲಾಯಿತು. ಈ ವೇಳೆ ಗ್ಲಾಕೋಮ ವಿಭಾಗದ ಡಾ. ಮೋನಿಕ್ ಆನಂದ್ ಮತ್ತಿತರರು ಹಾಜರಿದ್ದರು.

ನಿಧನ

ಶ್ರೀಮತಿ ಮೆಹಬೂಬ್ ಬೀ



ಮೈಸೂರು,ಮಾ.20–ಮೈಸೂರಿನ ಲಷ್ಕರ್ ಮೊಹಲ್ಲಾದ ಅಶೋಕ ರಸ್ತೆಯಲ್ಲಿರುವ ಇಸ್ಲಾಮಿಯ ಕ್ಯಾಪ್ ಮಾರ್ಟ್ ಮಾಲೀಕರಾದ ದಿವಂಗತ ಎಂ. ಅಬ್ದುಲ್ ಅಜೀಜ್ ಖಾನ್ ಅವರ ಪತ್ನಿ ಶ್ರೀಮತಿ ಮೆಹಬೂಬ್ ಬೀ (90) ಬುಧವಾರ ನಿಧನರಾದರು.

ಮೃತರು ಮೂವರು ಪುತ್ರಿಯರು, ಕೆನರಾ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕರಾದ ಅಬ್ದುಲ್ ಅಜೀಮ್ ಖಾನ್ ಸೇರಿದಂತೆ ಮೂವರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಬುಧವಾರ ಸಂಜೆ 5.15ಕ್ಕೆ ಅಸರ್ ಪ್ರಾರ್ಥನೆಯ ನಂತರ ಅಶೋಕ ರಸ್ತೆಯಲ್ಲಿರುವ ಮಸೀದಿ–ಇ–ಆಜ಼ಮ್ ಮರ್ಕಾಜ಼್ ಅಹಲೆ ಸುನ್ನತ್ ವಲ್ ಜಮಾತ್‌ನಲ್ಲಿ ನಮಾಜ಼್–ಎ–ಜನಾಜ಼ ನಡೆದ ನಂತರ ಮೈಸೂರಿನ ಟಿಪ್ಪು ಸರ್ಕಲ್ ಬಳಿ ಇರುವ ಬಡಾಮಕಾನ್ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಿ.ವಿ.ವೆಂಕಟೇಶ್



ಕೆನರಾ ಬ್ಯಾಂಕ್ ನಿವೃತ್ತ ಉದ್ಯೋಗಿ ಹಾಗೂ ರಾಮಕೃಷ್ಣನಗರ ಐ ಬ್ಲಾಕ್ ನಿವಾಸಿ ಪಿ.ವಿ.ವೆಂಕಟೇಶ್ (69) ನಿನ್ನೆ ನಿಧನರಾದರು.

ಇವರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ, ಪುತ್ರ ಅಮೆರಿಕಾದಿಂದ ವಾಪಸ್ಸಾಗುತ್ತಿದ್ದಂತೆ ನಾಳೆ (ಗುರುವಾರ) ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ನರಸಮ್ಮ



ಮೈಸೂರಿನ ಗೋಕುಲಂ ಬಡಾವಣೆಯ ಎರಡನೇ ಹಂತದಲ್ಲಿರುವ ಆದಿ ಪಂಪ ರಸ್ತೆ ನಿವಾಸಿ ಗೋವಿಂದಪ್ಪ ಅವರ ಪತ್ನಿ ಶ್ರೀಮತಿ ನರಸಮ್ಮ(70) ಬುಧವಾರ ನಿಧನರಾದರು.

ಮೃತರು ಪತಿ, ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 3 ಗಂಟೆಗೆ ಗೋಕುಲಂನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂಕಮ್ಮ ನಿಧನ



ಹೆಚ್.ಡಿ.ಕೋಟೆ, ಮಾ.20– ತಾಲೂಕಿನ ಬೆಳ್ತೂರು ಬಿ. ಕಾಲೋನಿ ನಿವಾಸಿ ಅಂಕಮ್ಮ(75) ಇಂದು ನಿಧನರಾಗಿದ್ದಾರೆ. ಮೃತರು ನಾಲ್ವರು ಪುತ್ರಿಯರು, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಗುರುವಾರ) ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದ ಅವರ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಸದ್ಗುರು ಜಗ್ಗಿ ವಾಸುದೇವ್‌ಗೆ ತಲೆಯಲ್ಲಿ ರಕ್ತಸ್ರಾವ; ತುರ್ತು ಬ್ರೇನ್ ಸರ್ಜರಿ



ನವದೆಹಲಿ: ಇಶಾ ಫೌಂಡೇಶನ್ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರು ದೆಹಲಿಯ ಖಾಸಗಿ ಆಸ್ಪತ್ರೆಯಲ್ಲಿ ತುರ್ತು ಮೆದುಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ ಎಂದು ಬುಧವಾರ ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ತಲೆಯಲ್ಲಿ ರಕ್ತಸ್ರಾವ ತಡೆಯಲು ಮಾರ್ಚ್ 17 ರಂದು ಶಸ್ತ್ರಚಿಕಿತ್ಸೆ ನಡೆಸಲಾಯಿತು. ಶಸ್ತ್ರಚಿಕಿತ್ಸೆಯ ನಂತರ ಸದ್ಗುರು ವೆಂಟಿಲೇಟರ್‌ನಿಂದ ಹೊರಬಂದಿದ್ದಾರೆ. ಅವರ ಮೆದುಳು, ದೇಹ ಮತ್ತು ಪ್ರಮುಖ ಅಂಗಗಳು ಚೇತರಿಸಿಕೊಳ್ಳುತ್ತಿವೆ ಎಂದು ಇಂದ್ರಪ್ರಸ್ಥದ ಅಪೋಲೋ ಆಸ್ಪತ್ರೆ ತಿಳಿಸಿದೆ.

66 ವರ್ಷದ ಆಧ್ಯಾತ್ಮಿಕ ಗುರು, ಇಶಾ ಫೌಂಡೇಶನ್‌ನ ಸಂಸ್ಥಾಪ ಸದ್ಗುರು ಜಗ್ಗಿ ವಾಸುದೇವ್ ಅವರು ಪರಿಸರ ಸಂರಕ್ಷಣೆಗಾಗಿ 'ಮಣ್ಣು ಉಳಿಸಿ' ಮತ್ತು 'ನದಿಗಳನ್ನು ಉಳಿಸಿ' ಸೇರಿದಂತೆ ಹಲವು ಅಭಿಯಾನಗಳನ್ನು ಕೈಗೊಂಡಿದ್ದರು. ಕಳೆದ ನಾಲ್ಕು ವಾರಗಳಿಂದ ತೀವ್ರ ತಲೆನೋವಿನಿಂದ ಬಳಲುತ್ತಿದ್ದ ಸದ್ಗುರು ಜಗ್ಗಿ ವಾಸುದೇವ್ ಅವರು, ತೀವ್ರ ನೋವಿನ ಹೊರತಾಗಿಯೂ, ಅವರು ತಮ್ಮ ಸಾಮಾನ್ಯ ದೈನಂದಿನ ಸಾಮಾಜಿಕ ಚಟುವಟಿಕೆಗಳನ್ನು ಮುಂದುವರೆಸಿದ್ದರು.

ಮಾರ್ಚ್ 15 ರ ಹೊತ್ತಿಗೆ ತಲೆನೋವು ತೀವ್ರವಾದ ನಂತರ ಅವರು ಆಸ್ಪತ್ರೆಯ ಹಿರಿಯ ಸಲಹೆಗಾರ ನರರೋಗ ತಜ್ಞ ಡಾ ವಿನಿತ್ ಸೂರಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದಾರೆ. ಸೂರಿ ಅವರು ತಕ್ಷಣವೇ ಎಂಆರ್ ಐ ಮಾಡಿಸುವಂತೆ ಸಲಹೆ ನೀಡಿದ್ದಾರೆ. ಎಂಆರ್ ಐನಲ್ಲಿ ತಲೆಯಲ್ಲಿ ರಕ್ತಸ್ರಾವ ಆಗುತ್ತಿರುವುದು ಕಂಡುಬಂದಿದ್ದು, ತಕ್ಷಣ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿಕಸಿತ ಭಾರತ ಸಂಕಲ್ಪ ಪತ್ರ ಸಲಹಾ ಸಂಗ್ರಹ ಅಭಿಯಾನ



ಮೈಸೂರು,ಮಾ.20–ಮೈಸೂರಿನ ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದ ಶಾರದಾದೇವಿನಗರದಲ್ಲಿ ಪಕ್ಷದ ಕಲೆ ಮತ್ತು ಸಾಂಸ್ಕೃತಿಕ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ರೂಪ ಅಯ್ಯರ್ ನೇತೃತ್ವದಲ್ಲಿ ವಿಕಸಿತ ಭಾರತ ಸಂಕಲ್ಪ ಪತ್ರ ಸಲಹಾ ಸಂಗ್ರಹ ಅಭಿಯಾನ ನಡೆಯಿತು.

ಈ ವೇಳೆ ಮಾತನಾಡಿದ ರೂಪ ಅಯ್ಯರ್, ಲೋಕಸಭಾ ಚುನಾವಣೆ ಗೆಲ್ಲುವ ಗುರಿ ನಮ್ಮ ಮುಂದಿದೆ. ಪ್ರತಿಯೊಬ್ಬ ಕಾರ್ಯಕರ್ತರು ತಮ್ಮ ಜವಾಬ್ದಾರಿ ಅರಿತು ವಿಶಾಲ ಮನಸ್ಸಿನಿಂದ ಪಕ್ಷ ಸಂಘಟನೆ ಕಾರ್ಯದಲ್ಲಿ ತೊಡಗಬೇಕು. ನರೇಂದ್ರ ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗುವುದನ್ನು ನೋಡಲು ನಾವೆಲ್ಲರೂ ಒಂದಾಗಿ ಶ್ರಮಿಸಬೇಕು. ಕೇಂದ್ರ ಸರ್ಕಾರ ಜಾರಿಗೊಳಿಸಿದ ಅಭಿವೃದ್ಧಿ ಕಾಮಗಾರಿಗಳ ಸಮಗ್ರ ಮಾಹಿತಿಯನ್ನು ಮನೆ ಮನೆಗೆ ತೆರಳಿ ಜನರಿಗೆ ತಲುಪಿಸುವ ಮೂಲಕ ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರಲು ಶ್ರಮಿಸುವುದು ಪ್ರತಿಯೊಬ್ಬ ಕಾರ್ಯಕರ್ತರ ಜವಾಬ್ದಾರಿ ಎಂದರು.

ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷ ರಾಕೇಶ್ ಭಟ್, ಉಪಾಧ್ಯಕ್ಷರಾದ ಹೆಚ್.ಜಿ ರಾಜಮಣಿ ಹಿರಿಯಣ್ಣ, ಲಲಿತಾ, ಕಾರ್ಯದರ್ಶಿಗಳಾದ ವಿನುತಾ, ತುಳಸಿ, ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮೀ ಜಯಶಂಕರ್, ಕಲಾವತಿ, ರವಿ ಅರಸ್, ಹೇಮಲತಾ, ಅನಿತಾ, ಸುಮಾ ಸೇರಿದಂತೆ ಸ್ಥಳೀಯರು ಭಾಗವಹಿಸಿ ವಿಕಸಿತ ಭಾರತ ಸಂಕಲ್ಪ ಪತ್ರದ ಮುಖೇನ ಅಭಿಪ್ರಾಯ ದಾಖಲಿಸಿದರು.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಭ್ಯರ್ಥಿ ಮೈಸೂರು ಲೋಕಸಭಾ ಕ್ಷೇತ್ರದಿಂದ ಕಣಕ್ಕೆ

ಮೈಸೂರು, ಮಾ.20(ಜಿಎ)–ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ನಗರದ ಚಾಮುಂಡೇಶ್ವರಿ ಕ್ಷೇತ್ರ ನಿವಾಸಿ ಹಾಗೂ ಪಕ್ಷದ ಸ್ಥಳೀಯ ಮುಖಂಡರಾದ ಮಾ.ಸ. ಪ್ರವೀಣ್ ಅವರನ್ನು ಕಣಕ್ಕಿಳಿಸಲಾಗುತ್ತಿದೆ ಎಂದು ರಾಜ್ಯ ಉಪಾಧ್ಯಕ್ಷ ಎಚ್.ಎಸ್.ಲಿಂಗೇಗೌಡ ಘೋಷಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ರಾಜ್ಯದಲ್ಲಿ ಇರುವ ಏಕೈಕ ಪ್ರಾದೇಶಿಕ, ಪ್ರಾಮಾಣಿಕ ರಾಜಕೀಯ ಪಕ್ಷ ತಮ್ಮದಾಗಿದೆ. ಜನಸಾಮಾನ್ಯರ ಕಷ್ಟ ಕಾರ್ಪಣ್ಯದ ಅರಿವು ಇರುವ ಕಾರಣ ಸಾಮಾನ್ಯ ಜನರು ರಾಜಕಾರಣಕ್ಕೆ ಬರಬೇಕು. ಅವರನ್ನು ಮತದಾರರು ಆಯ್ಕೆ ಮಾಡಬೇಕು ಎಂಬುದು ಪಕ್ಷದ ಉದ್ದೇಶವಾಗಿರುವುದರಿಂದ ಸಂದರ್ಶನ ಮೂಲಕ ಮಾ.ಸ. ಪ್ರವೀಣ್ ಅವರನ್ನು ಆಯ್ಕೆ ಮಾಡಿದ್ದು, ಮತದಾರರು ಬೆಂಬಲಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಭ್ಯರ್ಥಿ ಮಾ.ಸ.ಪ್ರವೀಣ್, ಶಿವಾರಿ ನಾಗರಾಜ್, ರಾಜೇಗೌಡ ಹಾಗೂ ಲಕ್ಷ್ಮಿ ಉಪಸ್ಥಿತರಿದ್ದರು.

ಶೇಷಾದ್ರಿಪುರಂ ಕಾಲೇಜಲ್ಲಿ ಅಭಿನಂದನಾ ಕಾರ್ಯಕ್ರಮ



ಶೇಷಾದ್ರಿಪುರಂ ಪದವಿ ಕಾಲೇಜು 2021–22ನೇ ಸಾಲಿನ B++ ಶ್ರೇಣಿ ಪಡೆದಿದ್ದು, ಇದರ ಅಂಗವಾಗಿ ಕಾಲೇಜಿನ ಸಭಾಂಗಣದಲ್ಲಿ ಅಭಿನಂದನಾ ಕಾರ್ಯಕ್ರಮ ನಡೆಯಿತು.

ಮೈಸೂರು, ಮಾ. 20– ಮೈಸೂರಿನ ಹೆಬ್ಬಾಳು ವರ್ತುಲ ರಸ್ತೆಯಲ್ಲಿರುವ ಶೇಷಾದ್ರಿಪುರಂ ಪದವಿ ಕಾಲೇಜಿಗೆ 2021–22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನ್ಯಾಕ್ ಸಮಿತಿಯು ಭೇಟಿ ನೀಡಿದ್ದು, ಕಾಲೇಜಿಗೆ B++ ಶ್ರೇಣಿಯನ್ನು ನೀಡಿದೆ. ಇದರ ಪ್ರಯುಕ್ತವಾಗಿ ಕಾಲೇಜಿನ ಸಭಾಂಗಣದಲ್ಲಿ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆಎಸ್.ರಂಗಪ್ಪ ದೀಪವನ್ನು ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮೊದಲ ಪ್ರಯತ್ನದಲ್ಲೇ ನ್ಯಾಕ್‌ನಿಂದ B++ ಶ್ರೇಣಿಯನ್ನು ಪಡೆದಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಶಿಕ್ಷಣ ಸಂಸ್ಥೆಗಳು ಭವಿಷ್ಯತ್ತಿನಲ್ಲಿ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲು ಪ್ರತಿಪಾದಿಸಿದರು ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಥಾನಮಾನವನ್ನು ಗಳಿಸುವ ನಿಟ್ಟಿನಲ್ಲಿ ಸಂಸ್ಥೆಗಳು ಕಾರ್ಯಗತಗೊಳ್ಳಬೇಕು. ಇಂತಹ ನಿಟ್ಟಿನಲ್ಲಿ ಮುಂದೆ ಇಂತಹ ಸ್ಥಾನಮಾನವನ್ನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ಪಡೆದುಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ. ವುಡೇ ಪಿ ಕೃಷ್ಣ ಅವರು ವಹಿಸಿದ್ದು, ಪ್ರೊ.ರಂಗಪ್ಪ ಅವರ ಸಾಧನೆಗಳ ಬಗ್ಗೆ ತಿಳಿಸುತ್ತಾ ಅವರ ಅಧಿಕಾರ ಅವಧಿಯಲ್ಲಿ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಸಬರಮತಿ ಆಶ್ರಮದ ರೀತಿಯಲ್ಲಿಯೇ ಮಾದರಿ ಸಬರಿಮತಿ ಆಶ್ರಮವನ್ನು ನಿರ್ಮಿಸುವುದಾಗಿ ತಿಳಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ನಿರ್ವಹಿಸುತ್ತಿರುವ ಉನ್ನತ ಮಟ್ಟದ ಕೆಲಸ ಕಾರ್ಯಗಳನ್ನು ತಿಳಿಸಿಕೊಟ್ಟರು.

ಇದೇ ವೇಳೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಸೌಮ್ಯ ಈರಪ್ಪ, IQAC ಸಂಯೋಜಕರಾದ ಪ್ರೊ. ಮೃದುಲ ಸೋಜನ ಹಾಗೂ ಆಡಳಿತ ಮಂಡಳಿ ಸದಸ್ಯ ಡಬ್ಲ್ಯೂ ಡಿ.ಅಶೋಕ್ ಅವರನ್ನು ಅಭಿನಂದಿಸಲಾಯಿತು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಟಿ.ಎಸ್.ಹೆಂಜಾರಪ್ಪ, ಡಬ್ಲ್ಯೂಎಚ್ ಅನಿಲ್‌ಕುಮಾರ್, ಆಡಳಿತ ಮಂಡಳಿ ಅಧ್ಯಕ್ಷ ಬಿ.ಎ.ಅನಂತ್ ರಾಮ್ ಹಾಗೂ ಆಡಳಿತ ಮಂಡಳಿ ಸದಸ್ಯ ಡಬ್ಲ್ಯೂ ಡಿ ಅಶೋಕ್ ಮತ್ತು ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳಿಂದ ಪ್ರಾಂಶುಪಾಲರು ಭಾಗವಹಿಸಿದ್ದರು.




ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯು ಮಾ.21ರಿಂದ 24ರವರಗೆ ಚೆನ್ನೈನ ಅಣ್ಣ ವಿಶ್ವವಿದ್ಯಾನಿಲಯದಲ್ಲಿ ನಡೆಯಲಿದೆ. ಈ ಪಂದ್ಯಾವಳಿಗೆ ಮೈಸೂರು ವಿವಿ ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು): ತೇಜಶ್ವಿನಿ , ಜಯಶ್ರೀ, ಪ್ರಿಯಾಂಕ ನಂಬಲ್ಕರ್, ಪಲ್ಲವಿ, ಗಾಯತ್ರಿ, ರಶ್ಮಿ, ನಿಮಿತ್ ಯಾದವ್, ಸಿಂಚನಾ, ಪೂರ್ಣಿಮ, (ಕುಳಿತಿರುವವರು): ಪುಷ್ಪ (ನಾಯಕಿ), ಅಶ್ವಿನಿ (ವ್ಯವಸ್ಥಾಪಕರು) ಡಾ.ಸಿ.ವೆಂಕಟೇಶ್, ನಿರ್ದೇಶಕರು, ಮೋಹನ್‌ಕುಮಾರ್ (ತರಬೇತುದಾರರು) ಅವರನ್ನು ಕಾಣಬಹುದು.

ಶ್ರೀಲಂಕಾ ಮಾಸ್ಟರ್ಸ್ ಅಥ್ಲೆಟಿಕ್ ಡುಯಲ್ ಚಾಂಪಿಯನ್‌ಶಿಪ್‌ಗೆ ಎಸ್.ಎಂ.ಉಮಾ ಆಯ್ಕೆ



ಮೈಸೂರು, ಮಾ. 20– ಉಡುಪಿ ಮಾಸ್ಟರ್ಸ್ ಅಥ್ಲೆಟಿಕ್ ಅಸೋಸಿಯೇಷನ್ ಸಹಯೋಗದಲ್ಲಿ ಇತ್ತೀಚೆಗೆ ಉಡುಪಿಯ ಅಜ್ಜರಕಾಡು ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಮೈಸೂರಿನ ಎಸ್.ಎಂ. ಉಮಾ ಭಾಗವಹಿಸಿ, 5 ಕಿ.ಮೀ. ಓಟ, 5 ಕಿ.ಮೀ. ನಡಿಗೆ, 1500 ಮೀ. ಓಟದಲ್ಲಿ ಚಿನ್ನದ ಪದಕ ಹಾಗೂ 4 ಷ 100 ಮೀ. ರಿಲೆಯಲ್ಲಿ ಕಂಚಿನ ಪದಕ ಪಡೆದುಕೊಂಡು ಜೂನ್ ತಿಂಗಳಲ್ಲಿ ಶ್ರೀಲಂಕಾದ ಕೊಲಂಬೋದಲ್ಲಿ ನಡೆಯಲಿರುವ ಭಾರತ ಮತ್ತು ಶ್ರೀಲಂಕಾ ಮಾಸ್ಟರ್ಸ್ ಅಥ್ಲೆಟಿಕ್ ಡುಯಲ್ ಚಾಂಪಿಯನ್‌ಶಿಪ್ 2024ಕ್ಕೆ ಆಯ್ಕೆಯಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.3.2024 ಗುರುವಾರ, ಮಳೆ ನಕ್ಷತ್ರ: ಉತ್ತರಾಭಾದ್ರ 17.03.2024ರಿಂದ 30.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ದಂಡಿಯಾತ್ರೆ 1930ರ ನೆನಪು, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ನೆನಪಿನ ಅನಾವರಣ : ಸಂಸ್ಕೃತಿ ಚಿಂತಕ ಪ್ರೊ. ಕೆ. ಕಾಳಚನ್ನೇಗೌಡ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ ಉಪಸ್ಥಿತರು : ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಮಹೇಶ್ ದಳಪತಿ, ಸ್ಥಳ: ಶ್ರೀ ನಟರಾಜ ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ವಿಕಲ ಚೇತನರ ಪಾಲಿಟೆಕ್ನಿಕ್:** ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಹೆಚ್.ಆರ್. ಸುರೇಶ್, ಜನಪದ ವಿದ್ವಾಂಸ ಪ್ರೊ. ಮೈಸೂರು ಕೃಷ್ಣಮೂರ್ತಿ, ಸಮಾಜ ಸೇವಕ ಎಂ. ಪ್ರಸನ್ನಕುಮಾರ್, ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್ ಪ್ರಾಂಶುಪಾಲ ವಿ.ಬಿ. ಲೋಕೇಶ್, ಅಧ್ಯಕ್ಷತೆ : ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಪ್ರಾಂಶುಪಾಲ ಬಿ. ಇಳಂಗೋವನ್, ಸ್ಥಳ: ಪಾಲಿಟೆಕ್ನಿಕ್ ಆವರಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಐಕ್ಯೂಎಸಿ ಮತ್ತು ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಕೋಶ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಉದ್ಘಾಟನೆ : ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ. ವಿದ್ಯಾನಾರಾಯಣ್, ಭಾಷಣಕಾರರು : ಸಹಾಯಕ ಪ್ರಾಧ್ಯಾಪಕರಾದ ಡಾ. ಕೆ.ಓ. ನಂದಾ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಡಾ. ಎಂ. ಪೂರ್ಣಿಮಾ, ಉಪಸ್ಥಿತರು : ಡೀನ್ (ಅಕಾಡೆಮಿಕ್) ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದಸಂಸ್ಕೃತಿ, ಪ್ರಸ್ತುತಿ – ಕೆ.ಎಲ್. ಪದ್ಮಿನಿ ಹೆಗಡೆ, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಡಾ. ಕೆ. ವಾಗೀಶ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆ–ರಾಧಿಕಾ ಐ ಭಟ್, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ರೈತರ ಆದಾಯ ದ್ವಿಗುಣಗೊಳಿಸುವಲ್ಲಿ ಕೃಷಿ ಪ್ರವಾಸೋದ್ಯಮದ ಪಾತ್ರ ಕುರಿತು ಮಾತನಾಡುತ್ತಾರೆ ಶ್ರೀವತ್ಸ ಗೋವಿಂದರಾಜು, 8.00 ಯುವವಾಣಿ– ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ನಡೆಸಿಕೊಡುತ್ತಾರೆ ಹೆಚ್.ನಿವೇದಿತಾ, 10.00 ನಾಟಕ ಉಳ್ಳಾಗಡ್ಡಿ ಉಳ್ಳ ಮಾಡ, ರಚನೆ– ಅರುಣ ದೇಶಪಾಂಡೆ, ನಿರ್ದೇಶನ– ರಮಾ ಎಸ್. ಹಿರೇಮಠ್, 10.30 ಸವಿನೆನಪು



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 21 ಗುರುವಾರ 2024

ಸಂಪುಟ: 44 | ಸಂಚಿಕೆ: 332 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಲೋಕಸಭಾ ಚುನಾವಣೆ–2024

ನಮ್ಮವರು-ತಮ್ಮವರಿಗೇ ಕಾಂಗ್ರೆಸ್ ಟಿಕೆಟ್

ಮೈಸೂರು–ಕೊಡಗು ಕ್ಷೇತ್ರದಿಂದ ಎಂ. ಲಕ್ಷ್ಮಣ್‌ಗೆ ಟಿಕೆಟ್?

● ಯಾವುದೇ ಕ್ಷಣದಲ್ಲಿ ಪಟ್ಟಿ ಪ್ರಕಟ ● ಮಂತ್ರಿಗಳು, ಪಕ್ಷದ ಹಿರಿಯ ನಾಯಕರ ಮಕ್ಕಳು, ಸಂಬಂಧಿಕರು, ನಾಯಕರಿಗೆ ಕೊಟ್ಟು ಉಳಿದವು ಕಾರ್ಯಕರ್ತರಿಗೆ

ಬೆಂಗಳೂರು, ಮಾ.20 (ಕೆಎಂಶಿ)– ಮಂತ್ರಿಗಳು, ಪಕ್ಷದ ಹಿರಿಯ ಮುಖಂಡರ ಸಂಬಂಧಿಕರೇ ರಾಜ್ಯದ ಬಹುತೇಕ ಲೋಕಸಭಾ ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಏಳು ಕ್ಷೇತ್ರಗಳಿಗೆ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದ ಕಾಂಗ್ರೆಸ್, ಉಳಿದ 21 ಕ್ಷೇತ್ರಗಳಿಗೆ ಸಮರ್ಥ ಅಭ್ಯರ್ಥಿಗಳೇ ದೊರೆಯದೆ ತಮ್ಮ ತಮ್ಮ ಕುಟುಂಬದವರಿಗೆ ಮಣೆ ಹಾಕಿದ್ದಾರೆ.



ಎಂ. ಲಕ್ಷ್ಮಣ್

ಶೇಕಡ 60 ರಷ್ಟು ಕ್ಷೇತ್ರಗಳಲ್ಲಿ ಸಚಿವರು ಮತ್ತು ಅಧಿಕಾರಸ್ಥರ ಮಕ್ಕಳು ಮತ್ತು ಸಂಬಂಧಿಕರಿಗೆ ಟಿಕೆಟ್ ನೀಡಲಾಗಿದೆ. ಮೊದಲ ಪಟ್ಟಿಯಲ್ಲೂ ಎರಡು ಕ್ಷೇತ್ರಗಳಲ್ಲಿ ಕುಟುಂಬ ರಾಜಕಾರಣಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಪಕ್ಷದ ಕಾರ್ಯಕರ್ತರಿಗೆ ದೊರೆತಿರುವುದು ಬೆರಳೆಣಿಕೆ ಕ್ಷೇತ್ರಗಳು ಮಾತ್ರ. ಉಳಿದವೆಲ್ಲವೂ ನಾಯಕರ ಕುಟುಂಬಗಳವರಿಗೆ ದೊರೆತಿದೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಕ್ಷದ ವರಿಷ್ಠರೊಂದಿಗೆ ಚರ್ಚಿಸಿ, ರಾಜ್ಯದ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಿ ನಗರಕ್ಕೆ ಹಿಂತಿರುಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಮ್ಮ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರನ್ನು ಕಲಬುರಗಿ ಕ್ಷೇತ್ರದಿಂದ ಕಣಕ್ಕಿಳಿಸಿದ್ದಾರೆ. ಸಚಿವರಾದ ರಾಮಲಿಂಗಾರೆಡ್ಡಿ ಪುತ್ರಿ ಸೌಮ್ಯರೆಡ್ಡಿ (ಬೆಂಗಳೂರು ದಕ್ಷಿಣ), ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ (ಚಿಕ್ಕೋಡಿ), ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಬ್ಬಾಳ್ಕರ್ (ಬೆಳಗಾವಿ), ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತಾ ಶಿವಾನಂದ ಪಾಟೀಲ್ (ಬಾಗಲಕೋಟೆ), ಎಸ್.ಎಸ್. ಮಲ್ಲಿಕಾರ್ಜುನ್ ಪತ್ನಿ ಡಾ. ಪ್ರಭಾ ಮಲ್ಲಿಕಾರ್ಜುನ್ (ದಾವಣಗೆರೆ) ಈಶ್ವರ್ ಖಂಡ್ರೆ ಪುತ್ರ ಸಾಗರ್ ಖಂಡ್ರೆ (ಬೀದರ್) ಕಣಕ್ಕಿಳಿಯಲಿದ್ದಾರೆ. ಸಚಿವರಾದ ಕೃಷ್ಣಬೈರೇಗೌಡ, ಡಾ. ಸುಧಾಕರ್ ಅವರ ಸೋದರ ಸಂಬಂಧಿ ಪ್ರೊ.ರಾಜೀವ್ ಗೌಡ (ಬೆಂಗಳೂರು ಉತ್ತರ) ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಮಹಾರಾಷ್ಟ್ರ ಕಾಂಗ್ರೆಸ್‌ನ ಪ್ರಭಾವಿ ನಾಯಕರ ಪುತ್ರಿ ಹಾಗೂ ಪೊಲೀಸ್ ಅಧಿಕಾರಿ ಹೇಮಂತ್ ನಿಂಬಾಳ್ಕರ್ ಪತ್ನಿ ಅಂಜಲಿ ನಿಂಬಾಳ್ಕರ್ (ಉತ್ತರ ಕನ್ನಡ) ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್‌ನ ಹಿರಿಯ ಸದಸ್ಯ ಹಾಗೂ ಉಪ ಸಭಾಪತಿಯಾಗಿದ್ದ ಕೆ ರೆಹಮಾನ್ ಖಾನ್ ಪುತ್ರ ಮನ್ಸೂರ್ ಅಲಿ ಖಾನ್ (ಬೆಂಗಳೂರು ಕೇಂದ್ರ) ಕಣದಲ್ಲಿದ್ದಾರೆ.

ಪಕ್ಷಕ್ಕೆ ದುಡಿದ ಕೆಲವೇ ಕಾರ್ಯಕರ್ತರಿಗೆ ಅವಕಾಶ ಮಾಡಿಕೊಟ್ಟಿದ್ದು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ವಕ್ತಾರ ಲಕ್ಷ್ಮಣ್ ಕಣಕ್ಕಿಳಿಯುತ್ತಿದ್ದಾರೆ. ಇನ್ನು ದಕ್ಷಿಣ ಕನ್ನಡದಿಂದ ಪದ್ಮರಾಜ್ ● 6ನೇ ಪುಟಕ್ಕೆ

ಕಾಂಗ್ರೆಸ್ ಸಂಭಾವ್ಯ ಪಟ್ಟಿ

ಮೈಸೂರು–ಕೊಡಗು: ಎಂ.ಲಕ್ಷ್ಮಣ್
ಕಲಬುರಗಿ: ರಾಧಾಕೃಷ್ಣ
ಬೆಂಗಳೂರು ದಕ್ಷಿಣ: ಸೌಮ್ಯ ರೆಡ್ಡಿ
ಬೆಂ.ಉತ್ತರ: ಪ್ರೊ. ರಾಜೀವ್‌ಗೌಡ
ಬೆಂ.ಕೇಂದ್ರ: ಮನ್ಸೂರ್ ಅಲಿಖಾನ್
ಉತ್ತರ ಕನ್ನಡ: ಅಂಜಲಿ ನಿಂಬಾಳ್ಕರ್
ದಕ್ಷಿಣ ಕನ್ನಡ: ಪದ್ಮರಾಜ್ ಪಾಟೀಲ್
ಉಡುಪಿ–ಚಿಕ್ಕಮಗಳೂರು: ಜಯಪ್ರಕಾಶ್ ಹೆಗಡೆ
ಕೊಪ್ಪಳ: ರಾಜಶೇಖರ್ ಹಿಟ್ನಾಳ್
ಚಿತ್ರದುರ್ಗ: ಚಂದ್ರಪ್ಪ
ಹುಬ್ಬಳ್ಳಿ–ಧಾರವಾಡ: ವಿನೋದ್ ಅಸೂಟಿ
ರಾಯಚೂರು: ಕುಮಾರ ನಾಯಕ್
ಚಿಕ್ಕೋಡಿ: ಪ್ರಿಯಾಂಕ ಜಾರಕಿಹೊಳಿ
ಬೆಳಗಾವಿ: ಮೃಣಾಳ್ ಹೆಬ್ಬಾಳ್ಕರ್
ಬಾಗಲಕೋಟೆ: ಸಂಯುಕ್ತ ಪಾಟೀಲ್
ದಾವಣಗೆರೆ: ಡಾ. ಪ್ರಭಾ ಮಲ್ಲಿಕಾರ್ಜುನ್
ಬೀದರ್: ಸಾಗರ್ ಖಂಡ್ರೆ

ಕುಂಬಾರಕೊಪ್ಪಲಲ್ಲಿ ಮನೆಗೆ ಆಕಸ್ಮಿಕ ಬೆಂಕಿ

● ಎಲೆಕ್ಟ್ರಿಕ್ ಸ್ಕೂಟರ್, ಬೈಕ್, ಮಹೀಂದ್ರ ಎಕ್ಸ್‌ಯುವಿ ಕಾರು, ಪೀಠೋಪಕರಣ ಸೇರಿ ಲಕ್ಷಾಂತರ ರೂ. ಮೌಲ್ಯದ ಪದಾರ್ಥ ಅಗ್ನಿಗಾಹುತಿ ● ನೆರೆಹೊರೆಯವರಿಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡರು, ಅವರ ಕುಟುಂಬ ರಕ್ಷಣೆ



ಬೆಂಕಿ ಹೊತ್ತಿ ಉರಿಯುತ್ತಿರುವ ಮನೆ



ಎಲೆಕ್ಟ್ರಿಕ್ ಸ್ಕೂಟರ್ ಮತ್ತು ಇನ್ನಿತರ ವಾಹನಗಳು ಸುಟ್ಟು ಕರಕಲಾಗಿರುವುದು.

ಮೈಸೂರು, ಮಾ. 20 (ಆರ್‌ಕೆ)– ಮನೆಯಲ್ಲಿ ಉಂಟಾದ ಆಕಸ್ಮಿಕ ಬೆಂಕಿ ಅವಘಡದಲ್ಲಿ ಕಾರು, ದ್ವಿಚಕ್ರ ವಾಹನ, ಪೀಠೋಪಕರಣ, ಎಲೆಕ್ಟ್ರಾನಿಕ್ ಉಪಕರಣಗಳು ಸೇರಿ ಲಕ್ಷಾಂತರ ರೂ. ಮೌಲ್ಯದ ಪದಾರ್ಥಗಳು ಅಗ್ನಿಗಾಹುತಿಯಾಗಿರುವ ಘಟನೆ ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಕುಂಬಾರಕೊಪ್ಪಲಿನ ಸ್ಮಶಾನ ರಸ್ತೆ (60 ಅಡಿ ರಸ್ತೆ)ಯಲ್ಲಿರುವ ವಿದ್ಯಾವರ್ಧಕ ಸಂಘ (ವಿವಿಎಸ್)ದ ಅಧ್ಯಕ್ಷ ಗುಂಡಪ್ಪಗೌಡ ಅವರ ಮನೆಯಲ್ಲಿ ಇಂದು ಮುಂಜಾನೆ ಆಕಸ್ಮಿಕ ಅಗ್ನಿ ದುರಂತ ಸಂಭವಿಸಿದೆ. ನೆರೆಹೊರೆಯವರು ನೆರವಿಗೆ ಬಂದು ಕ್ಷಿಪ್ರ ಕಾರ್ಯಾಚರಣೆ ನಡೆಸಿ ಮನೆಯ ನೆಲಮಹಡಿಯಲ್ಲಿ ಮಲಗಿದ್ದ ಗುಂಡಪ್ಪಗೌಡರು, ಅವರ ಪತ್ನಿ ನಾಗಮ್ಮ, ಮೊದಲ ಮಹಡಿಯಲ್ಲಿದ್ದ ಮಗ ನರೇಂದ್ರ, ಸೊಸೆ ಸೌಮ್ಯ ಹಾಗೂ ಇಬ್ಬರು ಮೊಮ್ಮಕ್ಕಳನ್ನು ಪಾರು ಮಾಡಿದ್ದಾರೆ. ಇಂದು ಮುಂಜಾನೆ 2.30ರ ವೇಳೆ ಎದುರು ಮನೆಯ ನಿವಾಸಿಯೊಬ್ಬರಿಗೆ ಎಚ್ಚರವಾದಾಗ ಗುಂಡಪ್ಪಗೌಡರ ಮನೆಯ ಕಿಟಕಿಯಲ್ಲಿ ಬೆಂಕಿ ಜ್ವಾಲೆ ಹರಡುತ್ತಿರುವುದು ಕಂಡುಬಂದಿದೆ. ಎಚ್ಚೆತ್ತ ಅವರು, ನೆರೆಹೊರೆಯವರನ್ನು ಎಬ್ಬಿಸಿದ್ದಾರೆ. ಎಲ್ಲರೂ ಗುಂಡಪ್ಪಗೌಡರ ಮನೆ ಬಳಿ ಹೋಗುತ್ತಿದ್ದಂತೆಯೇ ಕಾಂಪೌಂಡ್ ಒಳಗೆ ನಿಂತಿದ್ದ ಎಲೆಕ್ಟ್ರಿಕ್ ಸ್ಕೂಟರ್, ಬೈಕ್ ಮತ್ತು ಮಹೀಂದ್ರ ಎಕ್ಸ್‌ಯುವಿ ಕಾರು ಹೊತ್ತಿ ಉರಿಯುತ್ತಿರುವುದು ಕಂಡುಬಂದಿದೆ.

ಮೊದಲು ಅವರು ಪಕ್ಕದ ಮನೆಯ ತಾರಸಿಯಿಂದ ಗುಂಡಪ್ಪಗೌಡರ ಮನೆಯ ಮೊದಲ ಮಹಡಿಗೆ ಹೋಗಿ ಬಾಗಿಲು ತಟ್ಟಿ ಮಗನನ್ನು ಎಬ್ಬಿಸಿ ಅಲ್ಲಿಂದ ನೆಲಮಹಡಿಗೆ ಹೋಗಿ, ಅಲ್ಲಿನ ಕೊಠಡಿಯಲ್ಲಿ ಮಲಗಿದ್ದ ಗುಂಡಪ್ಪಗೌಡರು ಮತ್ತು ಪತ್ನಿಯನ್ನು ಎಬ್ಬಿಸಿ, ಎಲ್ಲರನ್ನೂ ಸುರಕ್ಷಿತವಾಗಿ ಹೊರಕ್ಕೆ ಕರೆ ತಂದರು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಹೆಬ್ಬಾಳು ಅಗ್ನಿಶಾಮಕ ದಳದ ಸಿಬ್ಬಂದಿ ಸುಮಾರು 2 ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಅಷ್ಟರಲ್ಲಿ ● 6ನೇ ಪುಟಕ್ಕೆ

ಬಿಜೆಪಿ ಬಾಕಿ ಐದು ಸ್ಥಾನಕ್ಕೆ ನಾಳೆ ಅಭ್ಯರ್ಥಿ ಘೋಷಣೆ

ಉಳಿದ ಮೂರು ಜೆಡಿಎಸ್ ಪಾಲಿಗೆ

ಬೆಂಗಳೂರು, ಮಾ.20(ಕೆಎಂಶಿ)– ಕರ್ನಾಟಕ ಲೋಕಸಭೆಗೆ ಉಳಿದಿರುವ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಮಾರ್ಚ್ 22ರ ಶುಕ್ರವಾರ ಬಿಡುಗಡೆ ಮಾಡಲಿದೆ. ಅಭ್ಯರ್ಥಿಗಳ ಆಯ್ಕೆ ರಾಜ್ಯ ಜೆಡಿಎಸ್ ಜೊತೆಗಿನ ನಂಟನ್ನು ಮತ್ತಷ್ಟು ಗಟ್ಟಿಗೊಳಿಸಲು ಪಕ್ಷದ ನಾಯಕ ಬಿ.ಎಸ್. ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ದೆಹಲಿಯಲ್ಲಿ ಮೊಕ್ಕಾಂ ಹೂಡಿದ್ದಾರೆ.

ರಾಜ್ಯದ 28 ಕ್ಷೇತ್ರಗಳ ಪೈಕಿ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಬಿಜೆಪಿ, ಜೆಡಿಎಸ್‌ಗೆ ಮೂರು ಸ್ಥಾನಗಳನ್ನು ನೀಡಿದರೆ, ಉಳಿದ ಐದು ಸ್ಥಾನಗಳಿಗಷ್ಟೇ ಅಭ್ಯರ್ಥಿಗಳನ್ನು ಪ್ರಕಟಿಸಬೇಕಿದೆ. ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ವರಿಷ್ಠರೊಂದಿಗೆ ಚರ್ಚೆ ನಡೆಸುವ ಸಂಬಂಧ ● 6ನೇ ಪುಟಕ್ಕೆ

ಮೊದಲ ಹಂತದ ಚುನಾವಣೆ; ನಾಮಪತ್ರ ಸಲ್ಲಿಕೆ ಆರಂಭ

ತಮಿಳುನಾಡಿನ 39 ಸೇರಿದಂತೆ 21 ರಾಜ್ಯಗಳ 102 ಕ್ಷೇತ್ರಗಳಿಗೆ ಅಧಿಸೂಚನೆ

ನವದೆಹಲಿ: ದೇಶದಲ್ಲಿ ಹೊಸ ಸರ್ಕಾರ ರಚನೆಗೆ ಲೋಕಸಭೆ ಚುನಾವಣೆಯ ದಿನಾಂಕ ಪ್ರಕಟವಾಗಿದ್ದು ತಮಿಳುನಾಡಿನ 39 ಕ್ಷೇತ್ರಗಳೂ ಸೇರಿದಂತೆ 21 ರಾಜ್ಯಗಳ 102 ಲೋಕಸಭಾ ಕ್ಷೇತ್ರಗಳಿಗೆ ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆಗೆ ಚಾಲನೆ ದೊರೆತಿದೆ.

ಏಪ್ರಿಲ್ 19 ರ ಮೊದಲ ಹಂತದಲ್ಲಿ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು 102 ಸ್ಥಾನಗಳಿಗೆ ಮತದಾನ ನಡೆಯಲಿದೆ. ನಾಮಪತ್ರ ಸಲ್ಲಿಕೆ ಕಾರ್ಯಕ್ಕೆ ಚುನಾವಣಾ ಆಯೋಗ ಅಧಿಸೂಚನೆ ಪ್ರಕಟಿಸಿದೆ. ರಾಷ್ಟ್ರಪತಿಗಳ ಪರವಾಗಿ ಚುನಾವಣಾ ಆಯೋಗ ಹೊರಡಿಸಿದ ಅಧಿಸೂಚನೆಯ ಪ್ರಕಾರ, ನಾಮಪತ್ರ ಸಲ್ಲಿಸಲು ಮಾರ್ಚ್ 27 ಕೊನೆಯ ದಿನಾಂಕವಾಗಿದೆ.

ಮುಂಬರುವ ಹಬ್ಬಗಳ ಕಾರಣ, ಲೋಕಸಭೆ ಸ್ಥಾನಗಳಿಗೆ ನಾಮಪತ್ರ ಸಲ್ಲಿಸಲು ಮಾರ್ಚ್ 28 ಅಂತಿಮ ದಿನವಾಗಿದೆ. ಬಿಹಾರದಲ್ಲಿ ಮೊದಲ ಹಂತದ ಮತದಾನಕ್ಕೆ ಸಜ್ಜಾಗಿದ್ದು, ಬಿಹಾರ ತನ್ನ 40 ಸ್ಥಾನಗಳ ಪೈಕಿ ನಾಲ್ಕು ಸ್ಥಾನಗಳಿಗೆ ಆರಂಭಿಕ ಹಂತದಲ್ಲಿ ಮತ ದಾನ ನಡೆಯಲಿದೆ. ಬಿಹಾರದಲ್ಲಿ ಪ್ರಕ್ರಿಯೆ ಮಾರ್ಚ್ 30 ಕ್ಕೆ ನಿಗದಿಪಡಿಸಲಾಗಿದೆ. ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂಪಡೆಯಲು ಏ.2ರ ಅಂತಿಮ ಗಡುವು ನೀಡಲಾಗಿದೆ. ● 6ನೇ ಪುಟಕ್ಕೆ

ಬಿಹಾರ ಸಿಎಂ ನಿತೀಶ್‌ಕುಮಾರ್

ಮೈಸೂರಿಗೆ ದಿಢೀರ್ ಭೇಟಿ

ಲಕ್ಷ್ಮಿಪುರಂನ ನಂಜುಮಳಿಗೆ ಸರ್ಕಲ್ ಬಳಿಯ ನ್ಯೂರೋ ಕೇರ್‌ಗೆ ಭೇಟಿ ನಂತರ ವಿಶೇಷ ವಿಮಾನದಲ್ಲಿ ವಾಪಸ್



ಮೈಸೂರು, ಮಾ.20(ಆರ್‌ಕೆ)– ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇಂದು ಮೈಸೂರಿಗೆ ದಿಢೀರ್ ಭೇಟಿ ನೀಡಿದ್ದರು.

ಜೆಡಿ(ಯು) ರಾಜ್ಯಸಭಾ ಸಂಸದ ಸಂಜಯ್ ಕುಮಾರ್ ಜ್ಹಾ, ಜೆಡಿ(ಯು) ಶಾಸಕ ಸಂಜೀವ್ ಕುಮಾರ್ ಮತ್ತು ಬಿಹಾರ ಬಿಜೆಪಿ ಮುಖಂಡ ರಜನೀಶ್ ಕುಮಾರ್ ಅವರೊಂದಿಗೆ ವಿಶೇಷ ವಿಮಾನದಲ್ಲಿ ಬೆಳಗ್ಗೆ 11.15ಕ್ಕೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ನಿತೀಶ್‌ಕುಮಾರ್ ಅವರು, ಅಲ್ಲಿಂದ ಪೊಲೀಸ್ ಭದ್ರತೆಯಲ್ಲಿ ನೇರವಾಗಿ ಲಕ್ಷ್ಮಿಪುರಂನ ನಂಜುಮಳಿಗೆ ಬಳಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ನ್ಯೂರೋ ಕೇರ್‌ಗೆ ಭೇಟಿ ನೀಡಿ, ಅಲ್ಲಿ ಒಂದು ಗಂಟೆ ಕಾಲ ಇದ್ದು, ನಂತರ ವಾಪಸ್ಸಾದರು. ಇದಕ್ಕೂ ಮುನ್ನ ನಿತೀಶ್‌ಕುಮಾರ್ ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಕೆಲ ಬಿಜೆಪಿ ಮುಖಂಡರು, ವಿಮಾನ ನಿಲ್ದಾಣದ ನಿರ್ದೇಶಕರು ಬರಮಾಡಿ ಕೊಂಡರು. ಕೆ.ಆರ್. ಎಸಿಪಿ ನೇತೃತ್ವದಲ್ಲಿ ಪೊಲೀಸರು ಬೆಂಗಾವಲಿದ್ದು, ಅವರು ಮಧ್ಯಾಹ್ನ 1 ಗಂಟೆ ವೇಳೆಗೆ ವಿಶೇಷ ವಿಮಾನದಲ್ಲಿ ಹಿಂದಿರುಗುವವರೆಗೆ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದರು. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಅಧಿಕಾರಿಗಳು ಯಾವುದೇ ಅಧಿಕೃತ ಶಿಷ್ಟಾಚಾರವಿಲ್ಲದ್ದರೂ ಸುರಕ್ಷಿತವಾಗಿ ಬಿಹಾರ ಮುಖ್ಯಮಂತ್ರಿಗಳನ್ನು ಬೀಳ್ಕೊಟ್ಟರು. ಅವರದು ಸಂಪೂರ್ಣ ಖಾಸಗಿ ಭೇಟಿಯಾಗಿದ್ದು, ಯಾವುದೇ ರಾಜಕೀಯ ಉದ್ದೇಶವಾಗಲೀ, ಯಾವ ಪ್ರಭಾವಿ ನಾಯಕರ ಭೇಟಿ ಕಾರ್ಯಕ್ರಮವಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಲೋಕಸಭಾ ಚುನಾವಣೆ ಹಿನ್ನೆಲೆ

ಮೈಸೂರಲ್ಲಿ ಮತಯಂತ್ರ ವಿಂಗಡಣೆ

▶ ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳಲ್ಲಿ 2,925 ಇವಿಎಂ ಬಳಕೆ ▶ ಭಾರಿ ಭದ್ರತೆಯಲ್ಲಿ ತಾಲೂಕುವಾರು ಇವಿಎಂ ರವಾನೆಗೆ ಕ್ರಮ ▶ ವಿವಿಧ ರಾಜಕೀಯ ಮುಖಂಡರ ಸಮ್ಮುಖದಲ್ಲಿ ಭದ್ರತಾ ಕೊಠಡಿ ತೆರೆದು, ಪರಿಶೀಲನೆ



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಚುನಾವಣಾ ಆಯೋಗದ ಭದ್ರತಾ ಕೊಠಡಿ(ವೇರ್‌ಹೌಸ್)ಯಲ್ಲಿರುವ ವಿದ್ಯುನ್ಮಾನ ಮತಯಂತ್ರಗಳ ಕೊಠಡಿಯನ್ನು ಸರ್ವಪಕ್ಷಗಳ ಮುಖಂಡರ ಸಮ್ಮುಖದಲ್ಲಿ ತೆರೆದು ಮತಯಂತ್ರಗಳ ವಿಂಗಡಣೆಗೆ ಚಾಲನೆ ನೀಡಲಾಯಿತು.

ಮೈಸೂರು,ಮಾ.20(ಎಂಟಿವೈ)– ಲೋಕಸಭಾ ಚುನಾವಣೆಗೆ ದಿನಗಣನೆ ಆರಂಭವಾಗಿದೆ. ವಿದ್ಯುನ್ಮಾನ ಮತಯಂತ್ರಗಳನ್ನು ಜಿಲ್ಲೆಯ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ 11 ವಿಧಾನಸಭಾ ಕ್ಷೇತ್ರದ 2,925 ಮತಗಟ್ಟೆಗಳಿಗೆ ಸಾಗಿಸಲು ವಿಂಗಡಣಾ ಕಾರ್ಯ ಆರಂಭಿಸಲಾಗಿದೆ.

ಲೋಕಸಭಾ ಚುನಾವಣೆಗೆ ಉಮೇದುವಾರಿಕೆ ಸಲ್ಲಿಕೆಗೆ ಕೇವಲ ಒಂದು ವಾರವಷ್ಟೇ ಇದ್ದು, ಈ ಹಿನ್ನೆಲೆಯಲ್ಲಿ ಅಗತ್ಯ ಸಿದ್ಧತೆಯಲ್ಲಿ ಜಿಲ್ಲಾಡಳಿತ ತೊಡಗಿದೆ. ಮೈಸೂರು–ಬನ್ನೂರು ಮುಖ್ಯ ರಸ್ತೆಯ ಸಿದ್ಧಾರ್ಥನಗರದಲ್ಲಿರುವ ಚುನಾವಣಾ ಆಯೋಗದ ಭದ್ರತಾ ಕೊಠಡಿ(ವೇರ್‌ಹೌಸ್)ಯಲ್ಲಿರುವ ವಿದ್ಯುನ್ಮಾನ ಮತಯಂತ್ರಗಳ ಕೊಠಡಿಯನ್ನು ಸರ್ವಪಕ್ಷಗಳ ಮುಖಂಡರ ಸಮ್ಮುಖದಲ್ಲಿ ತೆರೆದು ಮತಯಂತ್ರಗಳ ವಿಂಗಡಣೆಗೆ ಚಾಲನೆ ನೀಡಲಾಯಿತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಳಸಿದ ಬಳಿಕ ವಿದ್ಯುನ್ಮಾನ ಮತಯಂತ್ರಗಳನ್ನು ವೇರ್‌ಹೌಸ್‌ನ ಮೂರು ಕೊಠಡಿಗಳಲ್ಲಿಟ್ಟು ಸರ್ವಪಕ್ಷಗಳ ಮುಖಂಡರ ಸಮ್ಮುಖದಲ್ಲಿ ಸೀಲ್ ಮಾಡಿ, ಸಿಸಿ ಕ್ಯಾಮರಾ ಕಣ್ಗಾವಲು ಹಾಕಲಾಗಿತ್ತು. 11 ವಿಧಾನಸಭಾ ಕ್ಷೇತ್ರಗಳಲ್ಲಿ ಬಳಕೆಯಾದ ಮತಯಂತ್ರಗಳನ್ನು ಒಂದೇ ಸ್ಥಳದಲ್ಲಿ ಜೋಡಣೆ ಮಾಡಿರುವುದರಿಂದ ಎಲ್ಲಾ ಕ್ಷೇತ್ರಗಳ ಮತಯಂತ್ರಗಳು ಮಿಶ್ರಣಗೊಂಡಿರುವ ಹಿನ್ನೆಲೆಯಲ್ಲಿ ಇಂದು ವಿಂಗಡಣಾ ಕಾರ್ಯ ನಡೆಸಲಾಯಿತು.

ಮೂರು ಕೊಠಡಿಗಳ ಬಾಗಿಲನ್ನು ತೆರೆದ ಬಳಿಕ ಒಂದೊಂದೇ ಮತಯಂತ್ರವನ್ನು ಸ್ಕ್ಯಾನ್ ಮಾಡಿ ಯಾವ ಕ್ಷೇತ್ರದ ಮತಯಂತ್ರ ● 6ನೇ ಪುಟಕ್ಕೆ



DGF JEWELLERS
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ. (T&C)
ಒಂದು ಗ್ರಾಂ ಚಿನ್ನಕ್ಕೆ 7000
8884171888

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 20,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
8884304444





ನಕ್ಕರೆ ಅದೇ ಸ್ವರ್ಗ

ಗುಂಡ : "ನಂಗೇನಾಗಿದೆ ಡಾಕ್ಟ್ರೇ?"
ಡಾಕ್ಟರ್ : "ಸಾರಿ ಗುಂಡ... ನೀವು ಇನ್ನು ಎರಡು ಗಂಟೇಲಿ ಸಾಯ್ತೀರಿ. ಅದಕ್ಕೂ ಮುಂಚೆ ಯಾರನ್ನಾದ್ರೂ ನೋಡ್ಬೇಕಾ?"
ಗುಂಡ : "ಹೌದು ಸಾರ್... ಒಳ್ಳೆ ಡಾಕ್ಟರನ್ನು ನೋಡ್ಬೇಕು ಅಂತಿದ್ದೀನಿ!"

ಮೈಸೂರು ಮಿತ್ರ
ಗುರುವಾರ, 21 ಮಾರ್ಚ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಜೀವನದಲ್ಲಿ ಎರಡು ರೀತಿಯ ದುರಂತಗಳಿವೆ, ಒಂದು ನಮ್ಮ ಆಸೆ ಕೈಗೂಡುವುದು. ಎರಡು ನಮ್ಮ ಆಸೆಗಳು ಕೈಗೂಡದಿರುವುದು. –ಜಾರ್ಜ್ ಬರ್ನಾಡ್ ಷಾ

ವೇದ ಸುಳ್ಳಾದರೂ { ಭಾವಾರ್ಥ ಕೇಳಿ
ಗಾದೆ ಸುಳ್ಳಾಗದು { ಮೂಲಾರ್ಥ ಮರೆತ

ನಿಮ್ಮ ಪತ್ರಗಳು

ಬಸ್ ತಂಗುದಾಣದಲ್ಲಿ ನಿಲ್ಲದ ಬಸ್



ಮಾನ್ಯರೆ,

ಮೈಸೂರಿನ ಹೃದಯ ಭಾಗದಲ್ಲಿರುವ ಜನಜಂಗುಳಿಯಿಂದ ಸದಾ ವಾಹನ ದಟ್ಟಣೆಯಿಂದ ಕೂಡಿರುವ ಮೈಸೂರು–ನೀಲಗಿರಿ ಮುಖ್ಯರಸ್ತೆಯ ಹಾರ್ಡಿಂಜ್ ವೃತ್ತದಲ್ಲಿ ಹೊಸದಾಗಿ ಬಸ್ ತಂಗುದಾಣ ನಿರ್ಮಿಸಲಾಗಿದೆ. ಆದರೆ ಅದು ಪ್ರಯಾಣಿಕರಿಲ್ಲದೆ ಬಣಗುಡುತ್ತಿದೆ. ನಿತ್ಯ ನೂರಾರು ಕೆಎಸ್‌ಆರ್‌ಟಿಸಿ ಬಸ್‌ಗಳು ನಂಜನಗೂಡು, ಗುಂಡ್ಲುಪೇಟೆ, ಊಟಿ, ಮಡಿಕೇರಿ ಹಾಗೂ ಹಾಸನ ಮುಂತಾದ ಊರುಗಳಿಗೆ ತೆರಳುವ ಮುಖ್ಯ ರಸ್ತೆಯಾಗಿದೆ. ಆದರೆ ಬಸ್ ಚಾಲಕರು ವೃತ್ತದ ಸನಿಹದಲ್ಲಿರುವ (ಚಿತ್ರದಲ್ಲಿ ಕಾಣುವಂತೆ) ಅಪಾಯಕಾರಿಯಾದ ಸ್ಥಳದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಇದರಿಂದ ಇತರೆ ವಾಹನ ಸವಾರರಿಗೆ ತುಂಬಾ ಕಿರಿಕಿರಿ ಉಂಟಾಗುತ್ತಿದೆ.

ಇದೇ ಸ್ಥಳದಲ್ಲಿ ಸಂಚಾರಿ ಪೊಲೀಸರು ನಿತ್ಯ ವಾಹನ ತಪಾಸಣೆ ಮಾಡುತ್ತಿರುತ್ತಾರೆ. ಈ ಅವ್ಯವಸ್ಥೆ ಕಂಡರೂ ಕಾಣದಂತಿರುವ ಪೊಲೀಸರು ಬಸ್ ಚಾಲಕರಿಗೆ ಹಾಗೂ ಪ್ರಯಾಣಿಕರಿಗೆ ಜನರ ತೆರಿಗೆ ಹಣದಿಂದ ನಿರ್ಮಿಸಿರುವ ಹೊಸ ಬಸ್ ತಂಗುದಾಣದಲ್ಲಿ ನಿಂತುಕೊಳ್ಳಲು ಮಾರ್ಗದರ್ಶನ ನೀಡದಿರುವುದು ಬೇಸರದ ಸಂಗತಿ. ಈ ಕೂಡಲೇ ಕೆಎಸ್‌ಆರ್‌ಟಿಸಿಯ ಹಿರಿಯ ಅಧಿಕಾರಿಗಳು ಹಾಗೂ ನಗರ ಪೊಲೀಸ್ ಆಯುಕ್ತರು ಬಸ್ ತಂಗುದಾಣದಲ್ಲಿ ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಕ್ರಮ ಕೈಗೊಳ್ಳಬೇಕಾಗಿ ಮನವಿ.

–ಎಸ್. ರಾಜಗೋಪಾಲ್, ಗಾಂಧಿನಗರ, ಮೈಸೂರು.

■ ಕನಕದಾಸನಗರದಲ್ಲಿ ನಾಮಫಲಕ ಸರಿಪಡಿಸಿ

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿ 3ನೇ ಹಂತ, ಕನಕದಾಸನಗರದ ಮುಖ್ಯರಸ್ತೆ, ಅಡ್ಡ ರಸ್ತೆಗಳಿಗೆ ಅಳವಡಿಸಿರುವ ನಾಮಫಲಕಗಳಲ್ಲಿರುವ ಅಕ್ಷರಗಳು ಬಹುತೇಕ ಎಲ್ಲವೂ ಅಳಿಸಿ ಹೋಗಿವೆ. ಹೊಸಬರಿಗೆ ಪತ್ತೆ ಹಚ್ಚಲು ಕ್ರಾಸ್, ಬ್ಲಾಕ್, ಮೈನ್ ಇತ್ಯಾದಿಗಳು ತಿಳಿಯದೇ ಸಮಸ್ಯೆಯಾಗಿದೆ. ಸಂಬಂಧಪಟ್ಟವರು ಸದರಿ ನಾಮಫಲಕಗಳನ್ನು ಹೊಸದಾಗಿ ಬರೆಸಲು ಕೋರಲಾಗಿದೆ. ಅಲ್ಲದೇ, ನಂದಿ ಸರ್ಕಲ್‌ನಿಂದ ಜೋಡಿ ರಸ್ತೆಯಲ್ಲಿ ನ್ಯಾಯಾಂಗ ಬಡಾವಣೆ ಕಡೆಗೆ ರಾತ್ರಿ ಸಮಯದಲ್ಲಿ ಸಮರ್ಪಕವಾದ ದಾರಿದೀಪಗಳಿಲ್ಲದೆ ತಿರುಗಾಡಲು ಕಷ್ಟವಾಗಿದೆ. ದಯವಿಟ್ಟು ದಾರಿದೀಪಗಳನ್ನು ಅಳವಡಿಸಬೇಕಾಗಿ ಕೋರಿದೆ.

–ಬಿ.ಟಿ. ರಾಮಶೇಷ, ಕನಕದಾಸನಗರ, ಮೈಸೂರು.

■ ಗ್ರಾಮೀಣ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಸರ್ಕಾರಿ ಉದ್ಯೋಗ ಗಗನಕುಸುಮ

ಮಾನ್ಯರೆ,

ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುತ್ತಿರುವ ಪರೀಕ್ಷೆಗಳು ಕಳೆದ 2016ರಿಂದ ನೂತನ ನಿಯಮ ಅಳವಡಿಸಿಕೊಂಡಿರುವುದರಿಂದ ಗ್ರಾಮೀಣ ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗ ಗಿಟ್ಟಿಸಿಕೊಳ್ಳುವ ಪ್ರಮಾಣ ಕಡಿಮೆಯಾಗುತ್ತಿದೆ.

ಪರೀಕ್ಷೆಯಲ್ಲಿ 1st paper (ಮೊದಲ ಪತ್ರಿಕೆ):– GK (ಸಾಮಾನ್ಯ ಜ್ಞಾನ), 2ನೇ ಪತ್ರಿಕೆ (2nd paper) ಕನ್ನಡ ಅಥವಾ ಯಾವುದೇ ಇಲಾಖೆಗೆ ಸಂಬಂಧವಿರುವ 100 ಅಂಕಗಳ ಪತ್ರಿಕೆ ಇತ್ತು.

2ನೇ 100 ಅಂಕಗಳ ಪತ್ರಿಕೆಗೆ ಪ್ರಸ್ತುತವಾಗಿ ಕನ್ನಡ 35 ಅಂಕ, ಇಂಗ್ಲೀಷ್ 35 ಅಂಕ, ಕಂಪ್ಯೂಟರ್ 30 ಅಂಕ ನಿರ್ದಿಷ್ಟಗೊಳಿಸಲಾಗಿದ್ದು, ಗ್ರಾಮೀಣ ಭಾಗದಲ್ಲಿ ಕಲಿತಿರುವ ವಿದ್ಯಾರ್ಥಿಗಳು ಇಂಗ್ಲೀಷ್, ಕಂಪ್ಯೂಟರ್ ಜ್ಞಾನದಲ್ಲಿ ಕಡಿಮೆ ಜ್ಞಾನ ಹೊಂದಿರುವುದರಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಸರ್ಕಾರಿ ಉದ್ಯೋಗ ಗಗನ ಕುಸುಮವಾಗಿದೆ.

ಈ ನಿಯಮದಿಂದ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತಿರುವ ಅದರಲ್ಲೂ ಇಂಜಿನಿಯರ್ ವಿಭಾಗದ ವಿದ್ಯಾರ್ಥಿಗಳಿಗೆ ಅತೀ ಹೆಚ್ಚಿನ ಅನುಕೂಲವಾಗುತ್ತಿರುವುದರಿಂದ, 2016ರಿಂದ ಇಲ್ಲಿಯವರೆಗೆ ಗ್ರಾಮೀಣ ವಿದ್ಯಾರ್ಥಿಗಳು ಉದ್ಯೋಗ ಗಿಟ್ಟಿಸಿಕೊಂಡಿರುವವರ ಸಂಖ್ಯೆಯ ಪ್ರಮಾಣ ತೀರಾ ಕಡಿಮೆಯಾಗಿದೆ.

ಕನ್ನಡ ಮಾಧ್ಯಮದ ಉತ್ತೇಜನಕ್ಕೆ ಹಲವು ಕಾರ್ಯಕ್ರಮಗಳನ್ನು ರೂಪಿಸುವ ಸರ್ಕಾರದ ಈ ನೀತಿಯ ಧೋರಣೆಯಿಂದ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. ಆದ್ದರಿಂದ, ಗ್ರಾಮೀಣ ವಿದ್ಯಾರ್ಥಿಗಳನ್ನು ಮನದಲ್ಲಿಟ್ಟುಕೊಂಡು ಈ ಹಿಂದೆ ಇದ್ದಂತಹ ನಿಯಮದ ಪ್ರಕಾರವೇ ಪರೀಕ್ಷೆ ಮುಂದುವರೆಸುವಂತೆ ಗ್ರಾಮೀಣ ಉದ್ಯೋಗಾಕಾಂಕ್ಷಿಗಳ ಒತ್ತಾಯವಾಗಿದೆ.

–ಶಿವಕುಮಾರ, ತುಂಬಸೋಗೆ, ಹೆಚ್.ಡಿ.ಕೋಟೆ ತಾ.

■ ಭಾರತ ದೇಶ ಕನಿಷ್ಠವೇ? ಯದುವೀರ್‌ಗೆ ಪ್ರಶ್ನೆ

ಮಾನ್ಯರೆ,

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರು ಈಗಾಗಲೇ ತಮ್ಮ ಚುನಾವಣಾ ಪ್ರಚಾರ ಆರಂಭಿಸಿದ್ದು, ಹೋದ ಕಡೆಯಲ್ಲೆಲ್ಲಾ ಶ್ರೇಷ್ಠ ಭಾರತಕ್ಕಾಗಿ ಮೋದಿ ಬೆಂಬಲಿಸಿ ಬಿಜೆಪಿಗೆ ಮತ ನೀಡಿ ಎಂದು ಹೇಳಿಕೆ ನೀಡುತ್ತಿದ್ದಾರೆ. ಮಾನ್ಯರಿಗೆ ನನ್ನ ಪ್ರಶ್ನೆ ಇಷ್ಟೆ, ನಿಮ್ಮ ಪ್ರಕಾರ ಭಾರತ ಈಗ ಕನಿಷ್ಠವೇ? ಮೋದಿ ಇನ್ನು ಒಂದು ಬಾರಿಯೂ ಪ್ರಧಾನಿಯಾಗಿಲ್ಲವೇ? ಎರಡು ಬಾರಿ ಪ್ರಧಾನಿಯಾಗಿ ಹತ್ತು ವರ್ಷದ ಅವಧಿಯಲ್ಲಿ ಶ್ರೇಷ್ಠ ಭಾರತ ಮಾಡಲು ಯಾಕೆ ಶ್ರಮಿಸಲಿಲ್ಲ. ಈ ಬಾರಿ ನೀವು ಗೆದ್ದರಷ್ಟೆ ಶ್ರೇಷ್ಠ ಭಾರತ ಮಾಡುತ್ತೇನೆ ಎಂದು ಹೇಳಿದ್ದಾರೆಯೇ? ಮೊದಲು ನಿಮ್ಮ ಕನಿಷ್ಠ ಮನಸ್ಥಿತಿಯನ್ನು ಶ್ರೇಷ್ಠ ಮನಸ್ಥಿತಿಗೆ ಬದಲಾಯಿಸಿಕೊಂಡರೆ ಭವ್ಯ ಭಾರತ ಶ್ರೇಷ್ಠವಾಗಿ ಕಾಣುತ್ತದೆ. ದೇಶಾಭಿಮಾನ ಇರಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಈ ಪರಿಯ ಸೊಬಗ ಬೇರಾವ ದೇವರಲು ನಾ ಕಾಣೆ

ಮೇಲುಕೋಟೆಯ ಚಲುವನಿಗೆ ವೈರಮುಡಿಯ ಸಂಭ್ರಮ



ಶ್ರೀರಂಗದಲ್ಲಿ ಮಂಗಳಕಾರಕ ಶ್ರೀರಂಗನಾಗಿ, ತಿರುಮಲೆಯ ಕರಿಮೋಡದಲ್ಲಿ ಶ್ರೀನಿವಾಸನಂತೆ ಹೊಳಪಾಗಿರುವ, ಕಂಚಿಯ ಶಿಖರದಲ್ಲಿ ಪಾರಿಜಾತದಂತಿರುವ ವರದರಾಜ, ಯದುಶೈಲದ ದೀಪದಂತಿರುವ ತಿರುನಾರಾಯಣಪುರದ ಶ್ರೀಮನ್ನಾರಾಯಣ ಮೇಲುಕೋಟೆಯ ಚಲುವರಾಯ.

ಶ್ರೀರಂಗದ ನಡೆ, ತಿರುಪತಿಯ ವಡೆ, ಕಂಚಿಯ ಕೊಡೆ, ಮೇಲುಕೋಟೆಯ ಮುಡಿ ಭೂಲೋಕವನ್ನು ವೈಕುಂಠವಾಗಿಸಿದೆ. ಶ್ರೀರಂಗ ಭೋಗ ಮಂಟಪವಾದರೆ, ತಿರುಪತಿ ಪುಷ್ಪ ಮಂಟಪ, ಕಂಚಿಯು ತ್ಯಾಗ ಮಂಟಪವಾದರೆ ಮೇಲುಕೋಟೆಯು ಜ್ಞಾನ ಮಂಟಪವಾಗಿದೆ.

ಪೌರಾಣಿಕ ಐತಿಹ್ಯ

ದತ್ತಾತ್ರೇಯ ಸ್ವಾಮಿಯು ಕೃತಯುಗದಲ್ಲಿ ವೇದಗಳನ್ನು ಉಪದೇಶ ಮಾಡಿದ್ದರಿಂದ ವೇದಾದ್ರಿಯೆಂದು, ತ್ರೇತಾಯುಗದಲ್ಲಿ ನಾರಾಯಣಾದ್ರಿಯೆಂದು ದಕ್ಷಿಣದ ಬದರಿಯೆಂದು ಕರೆಯಲ್ಪಟ್ಟು ಸೀತಾರಾಮ ಲಕ್ಷ್ಮಣರ ಪಾದಸ್ಪರ್ಶದಿಂದ ಪುನೀತವಾಗಿ ಚಲುವನಾರಾಯಣ ಮತ್ತು ಬೆಟ್ಟದ ಮೇಲಿನ ಯೋಗಾನರಸಿಂಹ ದೇವಾಲಯಗಳು ಶ್ರೀಕೃಷ್ಣನಿಂದ ಸ್ಥಾಪಿಸಲ್ಪಟ್ಟಿವೆಯೆಂದು ನಂಬಲಾಗಿದೆ.

ಇತಿಹಾಸ

ಮಂಡ್ಯ ಜಿಲ್ಲೆಯ ಮೇಲುಕೋಟೆಯ ಪ್ರಾಚೀನ ಹೆಸರು ತಿರುನಾರಾಯಣಪುರ. ಗಂಗರ ಕಾಲದಿಂದಲೂ ವಿದ್ಯಾಕೇಂದ್ರವಾಗಿದೆ. ಹೊಯ್ಸಳರ ಕಾಲದಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಶ್ರದ್ಧಾಕೇಂದ್ರವಾಗಿತ್ತು.

ಯೋಗನರಸಿಂಹ ದೇವಾಲಯ

ದೇವಾಲಯದ ಯೋಗಾನರಸಿಂಹನ ವಿಗ್ರಹವನ್ನು ಪ್ರಹ್ಲಾದನು ಸ್ಥಾಪಿಸಿದನೆಂಬ ಐತಿಹ್ಯವಿದೆ. ಬೆಟ್ಟದ ಮೇಲಿನ ದೊಡ್ಡ ಬಂಡೆಯ ಮೇಲೆ ನಿರ್ಮಿಸಲಾಗಿರುವ ದೇವಾಲಯವು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸವಾಲಾಗಿದೆ. ದೇವಾಲಯದ ರಾಜಗೋಪುರದ ಎತ್ತರ 150 ಅಡಿಗಳಷ್ಟಿದೆ. ಈ ಬೆಟ್ಟದಿಂದ ಮೇಲುಕೋಟೆಯು ಬಹಳ ಸುಂದರವಾಗಿ ಕಾಣಿಸುತ್ತದೆ. ದೇವಾಲಯದಲ್ಲಿ 1853ರಿಂದಲೂ ಸಂಸ್ಕೃತ ಪಾಠಶಾಲೆಯಿದೆ. ಚಿಕ್ಕದೇವರಾಜರು ಯೋಗಾನರಸಿಂಹಸ್ವಾಮಿ ಬೆಟ್ಟಕ್ಕೆ ರಾಜಗೋಪುರವನ್ನು, 300 ಮೆಟ್ಟಿಲುಗಳನ್ನು, ದೇವರಿಗೆ ಒಡವೆಗಳನ್ನು ಮಾಡಿಸಿದ್ದಾರೆ.

ಚಲುವನಾರಾಯಣಸ್ವಾಮಿ ದೇವಾಲಯ

ಮೇಲುಕೋಟೆಯ ಮುಖ್ಯ ಆಕರ್ಷಣೆಯೇ ಚಲುವರಾಯಸ್ವಾಮಿಯಾಗಿದ್ದಾನೆ. ಗರ್ಭಗುಡಿಯ ಸುತ್ತಲೂ ಕತ್ತಲೆ ಪ್ರದಕ್ಷಿಣಾ ಪಥವಿದ್ದು ವೈರಮುಡಿ ಉತ್ಸವದಂದು ತೆರೆಯಲಾಗುತ್ತದೆ. ನವರಂಗಕ್ಕೆ ಮೂರು ಕಡೆ ಪ್ರವೇಶ ದ್ವಾರವಿದೆ. ದೇಗುಲದಲ್ಲಿ ಸುಂದರವಾಗಿ ಕೆತ್ತಿದ ಕಂಬದ ಮಂಟಪಗಳಿವೆ, ದೇವಾಲಯದಿಂದ 300 ಮೀಟರ್ ದೂರದಲ್ಲಿ ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿರುವ ರಾಯಗೋಪುರವನ್ನು, ಗೋಪಾಲರಾಯ ಪ್ರವೇಶದ್ವಾರವೆಂದು ಕರೆಯುತ್ತಾರೆ. ಮೈಸೂರು ಹುಲಿ ಟಿಪ್ಪುವು 1785ರಲ್ಲಿ 12 ಆನೆಗಳನ್ನು, 1786ರಲ್ಲಿ ನಗಾರಿಗಳನ್ನು ಕೊಡಿಸಿದ್ದಾನೆ. ದಸರೆಯ ಸಮಯದಲ್ಲಿ ಚಲುವನಾರಾಯಣನನ್ನು ಮಹಾರಾಜನಂತೆ ಅಲಂಕರಿಸಲಾಗುತ್ತದೆ. ನಾರಾಯಣಸ್ವಾಮಿ ದೇವಾಲಯವು ಚತುರ್ಮುಖ ರಾಜಗೋಪುರವನ್ನು ಹೊಂದಿದೆ. ನೂರಾರು ಕಲ್ಲಿನ ಕಂಬಗಳಲ್ಲಿ ರಾಮಾಯಣ ಮತ್ತು ಮಹಾಭಾರತದ ಚಿತ್ರಗಳಿವೆ.

ಶ್ರೀರಾಮಾನುಜರು

12 ವರ್ಷಗಳ ಕಾಲ ಶ್ರೀರಾಮಾನುಜರು ಕರ್ನಾಟಕದಲ್ಲಿ ನೆಲೆಸಿದ್ದರೆಂದು ಗುರು ಪರಂಪರ ಪ್ರಭಾವ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಸಾ.ಶ. ವ. 1098ರಲ್ಲಿ ದೊರೆ ಕುಲೋತ್ತುಂಗ ಚೋಳನ ದಾಳಿಯಿಂದ ತಪ್ಪಿಸಿಕೊಂಡು ಶ್ರೀರಂಗಂನಿಂದ ನೇರವಾಗಿ ಮೇಲುಕೋಟೆಗೆ ಬಂದು ಜೈನ ಬಿಟ್ಟಿದೇವನನ್ನು ಹೊಯ್ಸಳ ವಿಷ್ಣುವರ್ಧನನ್ನಾಗಿಸಿದರು. ಇಲ್ಲಿನ ಚಲುವನಾರಾಯಣ ದೇವಾಲಯವನ್ನು ವಿಷ್ಣುವರ್ಧನನ ಸಹಾಯದಿಂದ ಪುನಶ್ಚೇತನಗೊಳಿಸುತ್ತಾರೆ. ಇದನ್ನು ಜ್ಞಾನ ಮಂಟಪವೆಂದು ಕರೆದು ವೈಷ್ಣವಧರ್ಮವನ್ನು ಪ್ರಚಾರ ಮಾಡಿದರು.

14ನೆಯ ಶತಮಾನದಲ್ಲಿ ಮೇಲುಕೋಟೆ ಮುಸ್ಲಿಂ ದಾಳಿಗೆ ತುತ್ತಾಗಿತ್ತು. ವಿಜಯನಗರದ ಮಹಾರಾಜ ಮಲ್ಲಿಕಾರ್ಜುನನ ಮಂತ್ರಿ ತಿಮ್ಮಣ್ಣನು 1460ರಲ್ಲಿ ಜೀರ್ಣೋದ್ಧಾರ ಮಾಡಿಸಿ ಮತ್ತು ಚಕ್ರಾಳ್ವರ್ ಸನ್ನಿಧಿ ಮತ್ತು ಯದುಗಿರಿ ಅಮ್ಮನವರ ಸನ್ನಿಧಿಯ ಮುಂದಿನ ಮಂಟಪವನ್ನು ನಿರ್ಮಿಸಿದನೆಂದು ಮಂಟಪದ ಕಲ್ಲಿನ ಶಾಸನ ತಿಳಿಸುತ್ತದೆ. 1771ರಲ್ಲಿ ಈ ದೇಗುಲ ಮರಾಠರಿಂದ ಲೂಟಿಯಾಗಿತ್ತು. ಹೀಗಾಗಿ ಮತ್ತೆ ದೇಗುಲವನ್ನು ಜೀರ್ಣೋದ್ಧಾರ ಮಾಡಿ ಮೇಲುಕೋಟೆಯನ್ನು ಮರು ನಿರ್ಮಾಣ ಮಾಡಲಾಯಿತು.

ಬೀಬೀ ನಾಚಿಯಾರ್

ಘಜ್ನಿ ಮಹಮದ್‌ನ 2ನೆಯ ಮಗ ದಕ್ಷಿಣ ಭಾರತದ ದಂಡಯಾತ್ರೆಯ ಸಮಯದಲ್ಲಿ ಉತ್ಸವ ಮೂರ್ತಿ ಕಳೆದು ಹೋಗಿ ದೆಹಲಿ ಸುಲ್ತಾನನ ಮಹಮ್ಮದ್ ಷಾನ ಮಗಳು ಬೀಬಿ ನಾಚಿಯಾರ್ ಚಲುವರಾಯಸ್ವಾಮಿಯ ಮುದ್ದಾದ ಉತ್ಸವ ಮೂರ್ತಿಗೆ ಮನಸೋತು ಅದನ್ನು ತನ್ನ ಹತ್ತಿರ ಇಟ್ಟುಕೊಂಡಿದ್ದಳು. ಈ ವಿಷಯ ರಾಮಾನುಜರಿಗೆ ತಿಳಿದು ಸುಲ್ತಾನನ ಮನವೊಲಿಸಿ ದೆಹಲಿಯಿಂದ ಮೇಲುಕೋಟೆಗೆ ವಾಪಾಸ್ ತಂದರು. ಈ ವಿಷಯ ಬೀಬಿ ನಾಚಿಯಾರ್‌ಗೆ ಗೊತ್ತಾಗಿ ಅವಳು ಅದನ್ನು ಮತ್ತೆ ಪಡೆಯಲೇಬೇಕೆಂಬ ಹಂಬಲದಿಂದ ಮೇಲುಕೋಟೆಗೆ ಬಂದು ಅಸುನೀಗಿದಳು. ರಾಮಾನುಜರು ಇವಳ ಪುಟ್ಟ ವಿಗ್ರಹವನ್ನು ಮಾಡಿಸಿ ಚಲುವರಾಯನ ಪಾದದ ಬಳಿಯಿಟ್ಟು ಪೂಜಿಸಲು ತಿಳಿಸಿದರು. ನಮ್ಮ ಜನಪದರು ಬೀಬೀ ನಾಚಿಯಾರ್‌ಗೆ ವರನಂದಿಯೆಂದು ಹೆಸರಿಟ್ಟು ಚಲುವರಾಯನ ಮತ್ತು ವರನಂದಿ ಪ್ರೇಮವನ್ನು ಹಾಡಿ ಹೊಗಳಿದ್ದಾರೆ. ಉತ್ಸವ ಮೂರ್ತಿ ತರಲು ರಾಮಾನುಜರಿಗೆ ಸಹಾಯ ಮಾಡಿದ ಹರಿಜನರಿಗೆ ದೇವಾಲಯದ ಪ್ರವೇಶದ ಮುಕ್ತ ಅವಕಾಶ ಕಲ್ಪಿಸಿದರು ಮತ್ತು ರಥವನ್ನು ಎಳೆಯುವ ಹಕ್ಕನ್ನೂ ನೀಡಿದರು.

ವೈರಮುಡಿ ಬ್ರಹ್ಮೋತ್ಸವ

ಸಂಸ್ಕೃತ ಪದವಾದ ವಜ್ರ ಸ್ಥಳೀಯವಾಗಿ ವೈರ ಎಂದು, ಮುಡಿ ಎಂದರೆ ಕಿರೀಟ. ಹೀಗಾಗಿ ವೈರಮುಡಿಯೆಂದರೆ ವಜ್ರಖಚಿತವಾದ ಕಿರೀಟ ಎಂದರ್ಥ. ಇದಕ್ಕೊಂದು ಪುರಾಣದ ಕಥೆಯಿದೆ. ಒಮ್ಮೆ ಭಕ್ತಪ್ರಹ್ಲಾದನ ಮಗ ವೀರೋಚಕ ವೈರಮುಡಿಯನ್ನು ಅಪಹರಿಸಿ ಪಾತಾಳದಲ್ಲಿ ಅಡಗಿಸಿಟ್ಟಿದ್ದ. ಇದನ್ನು ತಿಳಿದ ವಿಷ್ಣು ವಾಹನ ವೈನತೇಯ (ಗರುಡ) ವೀರೋಚಕನನ್ನು ಸೋಲಿಸಿ ವೈರಮುಡಿಯನ್ನು ತರುವಾಗ ಶ್ರೀಕೃಷ್ಣನೆ ಚಲುವರಾಯನ ಶಿರಕ್ಕೆ ತೊಡಿಸಲು ಹೇಳುತ್ತಾನೆ. ಅದು ಚಲುವರಾಯನ ಶಿರಕ್ಕೆ ಸರಿ ಹೊಂದುತ್ತದೆ. ಇದರಿಂದ ಸಂತೋಷಗೊಂಡ ವೈನತೇಯ ಖುಷಿಯಿಂದ ಹೆಗಲ ಮೇಲೆ ಹೊತ್ತು ಕುಣಿಯುತ್ತಾನೆ. ಇದಕ್ಕಾಗಿಯೆ ಇಂದಿಗೂ ವೈರಮುಡಿ ಉತ್ಸವ ಗರುಡ ವಾಹನದ ಮೇಲೆ ಆಗುತ್ತದೆ. ಇದೇ ವೈರಮುಡಿ ಬ್ರಹ್ಮೋತ್ಸವ.

ಅಂದು ರಾಜ ಒಡೆಯರ್ ಕೊಟ್ಟಿರುವ ರಾಜಮುಡಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಕೊಟ್ಟಿರುವ ಕೃಷ್ಣಮುಡಿ ಮತ್ತು ನವರತ್ನ ಖಚಿತ ಪದ್ಮ ಪೀಠ ಅರಳೆಲೆ ಪದಕ ಮುತ್ತುರತ್ನಗಳ ಕರ್ಣಕುಂಡಲ ಮುತ್ತಿನ ಮಣಿಕಟ್ಟು ಗಂಡಭೇರುಂಡದ ವಜ್ರಾಹಾರ, ಶಂಕ–ಚಕ್ರ, ಗದೆ ಮುಂತಾದ 24 ಆಭರಣಗಳನ್ನು ಮಂಡ್ಯ ಜಿಲ್ಲಾ ಖಜಾನೆಯಿಂದ ವಿಶೇಷ ಪೆಟ್ಟಿಗೆಯಲ್ಲಿ ತಂದು ರಾಮಾನುಜರ ಗುಡಿಯಲ್ಲಿಡಲಾಗುತ್ತದೆ. ಅಂದು ಸಂಜೆ ಶುಭ ಮುಹೂರ್ತದಲ್ಲಿ ಮುಖ್ಯ ಅರ್ಚಕರು ಕಣ್ಣಿಗೆ ರೇಷ್ಮೆ ಬಟ್ಟೆ ಕಟ್ಟಿಕೊಂಡು ವೈರಮುಡಿಯನ್ನು ಚಲುವನಾರಾಯಣನ ಶಿರದ ಮೇಲಿಟ್ಟು ಇತರ ಆಭರಣಗಳಿಂದ ಅಲಂಕರಿಸುತ್ತಾರೆ. ವೈರಮುಡಿ ಬ್ರಹ್ಮೋತ್ಸವ ರಾತ್ರಿ 9ಕ್ಕೆ ಪ್ರಾರಂಭವಾಗಿ ಬೆಳಗ್ಗೆ 4ಕ್ಕೆ ಮುಗಿಯುತ್ತದೆ.

ವೈರಮುಡಿಯು ದೆಹಲಿ ಸುಲ್ತಾನರ ವಶವಾಗಿತ್ತು. ಸ್ವತಃ ರಾಮಾನುಜರೇ ಇದನ್ನು ವಾಪಸ್ ದೆಹಲಿಯಿಂದ ಮೇಲುಕೋಟೆಗೆ ತಂದರೆಂದು ಹೇಳಲಾಗುತ್ತದೆ. ಶ್ರೀ ರಾಮಾನುಜರಿಂದ ಆರಂಭಗೊಂಡ ವೈರಮುಡಿ ಉತ್ಸವ ಇಂದಿಗೂ ಸಾಂಗೋಪಾಂಗವಾಗಿ ನಡೆದು ಬರುತ್ತಿದೆ.

ವೈರಮುಡಿ ಬ್ರಹ್ಮೋತ್ಸವ ಹತ್ತು ದಿನಗಳ ಕಾಲ ನಡೆಯುತ್ತದೆ. ಮೊದಲ ದಿನ ಸಂಜೆ ಕಲ್ಯಾಣೋತ್ಸವ ನಡೆಯುವ ಮೂಲಕ ಉತ್ಸವ ಪ್ರಾರಂಭವಾಗಿ ಗರುಡನಿಗೆ ಪೂಜೆ ಸಲ್ಲಿಸಿ ಧ್ವಜಾರೋಹಣದೊಂದಿಗೆ ದೇವತೆಗಳನ್ನು ಬ್ರಹ್ಮೋತ್ಸವಕ್ಕೆ ಆಮಂತ್ರಿಸಿ ಹಂಸ ವಾಹನದಲ್ಲಿ ಚಲುವ ರಾಯಸ್ವಾಮಿಯನ್ನು ಪೂಜಿಸಲಾಗುತ್ತದೆ. 2ನೆಯ ದಿನ ಶ್ರೀದೇವಿ ಭೂದೇವಿಯೊಂದಿಗೆ ಶೇಷವಾಹನದಲ್ಲೂ, 3ನೆಯ ದಿನ ಕಲ್ಯಾಣ ನಾಯಕಿಯೊಂದಿಗೆ ಚಿನ್ನದ ಪಲ್ಲಕ್ಕಿಯಲ್ಲಿಯು, 4ನೆಯ ದಿನವೇ ಬಹಳ ಮಹತ್ವದ್ದು. ಈ ದಿನ ಶ್ರೀದೇವಿ ಭೂದೇವಿಯರೊಂದಿಗೆ ಗರುಡಾರೂಢ ನಾಗಿ ವೈರಮುಡಿ ಧರಿಸಿ ಮೆರೆಯುತ್ತಾನೆ. ಬ್ರಾಹ್ಮಿ ಮುಹೂರ್ತದಲ್ಲಿ ರಾಜಮುಡಿ ಕಿರೀಟಧಾರಿಯಾಗಿ ಕಂಗೊಳಿಸುತ್ತಾನೆ. 5ನೆಯ ದಿನ ಪ್ರಹ್ಲಾದ ಪರಿಪಾಲನೋತ್ಸವ ನಡೆದು ಚಿನ್ನದ ಗರುಡವಾಹನದಲ್ಲಿ ದರ್ಶನ ನೀಡುತ್ತಾನೆ. 6ನೆಯ ದಿನ ಗಜೇಂದ್ರ ಮೋಕ್ಷಾಲಂಕಾರ, 7ನೆಯ ಕಲ್ಯಾಣನಾಯಕಿ, ಶ್ರೀದೇವಿ, ಭೂದೇವಿ ಮತ್ತು ರಾಮಾನುಜರೊಂದಿಗೆ ಮಹಾರಥೋತ್ಸವ ಹಾಗೂ ಚಿನ್ನದ ಪಲ್ಲಕ್ಕಿ ಸೇವೆ ನಡೆಯುತ್ತದೆ. 8ನೆಯ ದಿನ ಕಲ್ಯಾಣಿಯಲ್ಲಿ ತೆಪ್ಪೋತ್ಸವ, 9ನೆಯ ದಿನ ಪರಕಾಲ ಮಠದಲ್ಲಿ ಪಟ್ಟಾಭಿಷೇಕವಾಗಿ, 10ನೆಯ ದಿನ ಶ್ರೀ ಚಲುವನಾರಾಯಣನಿಗೆ ಮಹಾಭಿಷೇಕ ನಡೆದು ದಶದಿನಗಳ ವೈರಮುಡಿ ಬ್ರಹ್ಮೋತ್ಸವ ಸಂಪನ್ನಗೊಳ್ಳುತ್ತದೆ.

ಕವಿ ಪುತಿನ ಹುಟ್ಟೂರು

ಗೋಕುಲ ನಿರ್ಗಮನದ ಮಹಾಕವಿ ಪು.ತಿ. ನರಸಿಂಹಾಚಾರ್ ಹುಟ್ಟೂರು ಮೇಲುಕೋಟೆಯಾಗಿದ್ದು, ಅವರ ನಿವಾಸವನ್ನು ಪುತಿನ ಆಶಯದಂತೆ 1996ರಲ್ಲಿ ರಾಷ್ಟ್ರೀಯ ಸ್ಮಾರಕವನ್ನಾಗಿಸಲಾಗಿದೆ.

ಮೇಲುಕೋಟೆ ಪುಳಿಯೋಗರೆ

ಮೇಲುಕೋಟೆಯ ಪುಳಿಯೋಗರೆ ಎಂಥವರ ಬಾಯಲ್ಲೂ ನೀರೂರಿಸುತ್ತದೆ. ಇದನ್ನು ಆವಿಷ್ಕರಿಸಿದವರು ಶ್ರೀರಾಮಾನುಜರು. ಭಕ್ತ ಜನರಿಗೆ ಪ್ರಸಾದದ ರೂಪದಲ್ಲಿ ಏನಾದರು ಕೊಡಬೇಕೆಂದು ಯತಿ ಶ್ರೇಷ್ಠ ರಾಮಾ ನುಜರು ಬಯಸಿ ಹುಣಸೆಹಣ್ಣಿನ ರಸಕ್ಕೆ ಕಬ್ಬಿನ ಹಾಲನ್ನು ಸೇರಿಸಿ ಕುದಿಸಿ ಬಿಸಿ ಅನ್ನವನ್ನು ಕಲಸಿ ನೀಡಿದರು. ಭಕ್ತರು ಇದನ್ನು ಬಹಳ ಖುಷಿಯಿಂದ ಸ್ವೀಕರಿಸಿ, ಸಂತೃಪ್ತಗೊಂಡರು. ಈಗ ಹುಣಸೆ ರಸ ಮಸಾಲೆ ಕಡ್ಲೇಬೀಜ, ಕರಿಬೇವು ಸೇರಿ ಪ್ರಸಿದ್ಧ ಪುಳಿಯೋಗರೆ ಗೊಜ್ಜಾಗಿದೆ. ಪುಳಿಯೋಗರೆಗೆ ಮಾತ್ರವಲ್ಲದೆ, ಸಕ್ಕರೆ ಪೊಂಗಲ್, ಕದಂಬ ಮೊಸರನ್ನಕ್ಕು ವಿಶ್ವ ಪ್ರಸಿದ್ಧವಾಗಿದೆ.



ಬ್ಯಾ.ರಾ.ಪ್ರಸನ್ನಕುಮಾರ್
ಮೊ. 9206376889

ಬಿಇಎಂಎಲ್‌ನಲ್ಲಿ 1500 ಹಾರ್ಸ್‌ಪವರ್ ಇಂಜಿನ್ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

•ದೇಶಿಯ ತಂತ್ರಜ್ಞಾನದಿಂದ ನಿರ್ಮಾಣಗೊಂಡ ಮೊದಲ ಇಂಜಿನ್: ಕೇಂದ್ರ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ವೀಕ್ಷಣೆ •ಬಿಇಎಂಎಲ್‌ನಿಂದ ಹೊಸ ಮೈಲಿಗಲ್ಲು •ಆತ್ಮ ನಿರ್ಭರ್, ಮೇಕ್ ಇನ್ ಇಂಡಿಯಾ ಪರಿಕಲ್ಪನೆ •ಲಡಾಕ್, ರಾಜಸ್ಥಾನದಲ್ಲಿ ಫೀಲ್ಡ್ ಟೆಸ್ಟ್ ಬಾಕಿ •ಬಿಇಎಂಎಲ್‌ನಲ್ಲಿ ಇನ್ನು 20 ಇಂಜಿನ್ ತಯಾರು



ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಬಡಾವಣೆಯ ಬಿಇಎಂಎಲ್ ಕಾರ್ಖಾನೆಯಲ್ಲಿ ಹೊಸದಾಗಿ ತಯಾರಿಸಿರುವ 1500 ಹಾರ್ಸ್ ಪವರ್ ಇಂಜಿನ್ ಪರೀಕ್ಷಾರ್ಥ ಪ್ರಯೋಗದಲ್ಲಿ ಕೇಂದ್ರ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಬುಧವಾರ ಪಾಲ್ಗೊಂಡಿದ್ದರು.

ಮೈಸೂರು, ಮಾ.20(ಬಿಎಲ್‌ಯು)– ಮೈಸೂರಿನ ಬಿಇಎಂಎಲ್ (ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್), ಭಾರತದ ರಕ್ಷಣಾ ಪಡೆಯ ಯುದ್ಧ ಟ್ಯಾಂಕರ್‌ಗಳಿಗೆ ಅಳವಡಿಸುವ 1500 ಹಾರ್ಸ್ ಪವರ್ ಇಂಜಿನ್ ತಯಾರಿಸಿ ಇಂದು ಯಶಸ್ವಿ ಪ್ರಯೋಗ ನಡೆಸಿದೆ. ಇದು ದೇಶಿ ನಿರ್ಮಿತ ಮೊದಲ ಭಾರೀ ಇಂಜಿನ್ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಬಡಾವಣೆಯ ಕೆಆರ್‌ಎಸ್ ರಸ್ತೆಯ ಬಿಇಎಂಎಲ್ ಘಟಕದಲ್ಲಿ ಕೇಂದ್ರ ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಉಪಸ್ಥಿತಿಯಲ್ಲಿ ಇಂಜಿನ್ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಯಿತು.

ಯುದ್ಧ ಟ್ಯಾಂಕರ್ ಸೇರಿದಂತೆ ಇತರೆ ವಾಹನಗಳಿಗೆ ಅಳವಡಿಸಲು ಇದನ್ನು ತಯಾರಿಸಲಾಗಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆತ್ಮನಿರ್ಭರ ಪರಿಕಲ್ಪನೆಯಲ್ಲಿ ದೇಶೀಯವಾಗಿ ಇದನ್ನು ತಯಾರಿಸಲಾಗಿದೆ. ಅದರಲ್ಲೂ ಮೈಸೂರಿನ ಬಿಇಎಂಎಲ್ ಕಾರ್ಖಾನೆಯ ತಾಂತ್ರಿಕ ತಜ್ಞರು ಇದನ್ನು ನಿರ್ಮಿಸಿದ್ದಾರೆ.

ನವದೆಹಲಿಯಿಂದ ಇಂದು ಮೈಸೂರಿನ ಬಿಇಎಂಎಲ್‌ಗೆ ಆಗಮಿಸಿದ್ದ ಗಿರಿಧರ್ ಅರಮನೆ, 1500 ಹಾರ್ಸ್ ಪವರ್ ಇರುವ ಇಂಜಿನ್ ಯಶಸ್ವಿ ಪ್ರಯೋಗ ವೀಕ್ಷಿಸಿದರು. ತರುವಾಯ ಇಂಜಿನ್ ಕಾರ್ಯ ನಿರ್ವಹಣೆ ಸೇರಿದಂತೆ ಮಾಹಿತಿ ಪಡೆದರು.

ಯುದ್ಧ ಟ್ಯಾಂಕರ್ ಹಾಗೂ ಇತರೆ ಭಾರೀ ವಾಹನಗಳಿಗೆ ಇದನ್ನು ಅಳವಡಿಸಲಾಗುತ್ತದೆ. ಇಂಜಿನ್ ತಯಾರಿಕೆಗೆ 2017ರಲ್ಲಿ ಬಿಇಎಂಎಲ್ ಹಾಗೂ ರಕ್ಷಣಾ ಇಲಾಖೆ ನಡುವೆ ಒಪ್ಪಂದ ಏರ್ಪಟ್ಟಿತ್ತು. ತರುವಾಯ 2020ರಲ್ಲಿ ಇಂಜಿನ್ ತಯಾರಿಕೆಯ ಪ್ರಕ್ರಿಯೆ ಆರಂಭವಾಯಿತು. ಇಂಜಿನ್ ತಯಾರಿಕೆ ಬಹಳ ತ್ವರಿತವಾಗಿ ನಡೆಯಬೇಕಿತ್ತಾದರೂ ಮಧ್ಯೆ ಕೊರೊನಾ ಎದುರಾದ ಕಾರಣ ಅಡ್ಡಿಯುಂಟಾಗಿತ್ತು.

ಈಗ ತಯಾರು ರೂಪಿಸಿರುವ ಹೊಸ ಇಂಜಿನ್ ಅನ್ನು ಯುದ್ಧ ಟ್ಯಾಂಕರ್‌ಗೆ ಅಳವಡಿಸಿ ಫೀಲ್ಡ್ ಟೆಸ್ಟಿಂಗ್ ಮಾಡಲಾಗುತ್ತದೆ. ಈ ಇಂಜಿನ್ ಎಲ್ಲಾ ಹವಾಮಾನಕ್ಕೂ ಒಗ್ಗಿಕೊಳ್ಳಬೇಕಿದೆ. ಅಂದರೆ ಮೈನಸ್ 50 ರಷ್ಟು ಉಷ್ಣಾಂಶವಿರುವ ಲಡಾಕ್ ಹಾಗೂ 50 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿರುವ ರಾಜಸ್ಥಾನದ ಮರಳುಗಾಡಿನಲ್ಲಿ ಕಾರ್ಯ ನಿರ್ವಹಿಸಬೇಕಿದೆ. ಈ ಮೂಲಕ ಫೀಲ್ಡ್ ಟೆಸ್ಟಿಂಗ್‌ನಲ್ಲೂ ಯಶಸ್ವಿ ಪ್ರಯೋಗವಾದ ನಂತರ ಇಂತಹ ಇನ್ನು 20 ಇಂಜಿನ್ ತಯಾರಿಸಲು ರಕ್ಷಣಾ ಇಲಾಖೆ ಬಿಇಎಂಎಲ್ ಜೊತೆ ಮತ್ತೊಂದು ಒಪ್ಪಂದ ಮಾಡಿಕೊಳ್ಳಲಿದೆ.

ಹೊಸದಾಗಿ ಅಳವಡಿಸುವ ಇಂಜಿನ್‌ಗಳ ಫೀಲ್ಡ್ ಟೆಸ್ಟಿಂಗ್ ಕಾರ್ಯ ಪೂರ್ಣಗೊಂಡು ಅದು ಯಶಸ್ವಿಯಾದ ನಂತರ ಮೈಸೂರಿನ ಬಿಇಎಂಎಲ್ ಇಂತಹ 20 ಇಂಜಿನ್ ತಯಾರಿಸಲಿದೆ. ತರುವಾಯ ವಿದೇಶಿ ಇಂಜಿನ್‌ಗಳ ಆಮದು ಸ್ಥಗಿತಗೊಳಿಸಿ ದೇಶೀಯವಾಗಿ ರೂಪಿಸುವ ಕಾರ್ಯ ಆರಂಭಿಸಲಾಗುವುದು.

ಇದರಿಂದ ರಕ್ಷಣಾ ಇಲಾಖೆಗೆ ಬಹಳಷ್ಟು ಉಳಿತಾಯವಾಗಿದೆ. ಜೊತೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗಾವಕಾಶ ಸೃಷ್ಟಿಯಾಗಿ ವಹಿವಾಟು ವೃದ್ಧಿಯಾಗಲಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಲ್ಲಿ ಇಂಜಿನ್ ತಯಾರು ಮಾಡಲು ಬಳಸಿರುವ ಯಂತ್ರೋಪಕರಣಗಳು ಶೇಕಡ 90 ರಷ್ಟು ದೇಶಿಯ ತಂತ್ರಜ್ಞಾನದಿಂದ ತಯಾರಾಗಿವೆ. ಭಾರತದಲ್ಲಿ ಲಭ್ಯವಿಲ್ಲದ ಉಳಿದ ಶೇಕಡ 10 ರಷ್ಟು ತಾಂತ್ರಿಕ ಉಪಕರಣವನ್ನು ವಿದೇಶದಿಂದ ಆಮದು ಮಾಡಿಕೊಳ್ಳಲಾಗಿದೆ.

ಈ ವೇಳೆ ಮಾತನಾಡಿದ ಗಿರಿಧರ್ ಅರಮನೆ, ಭಾರತದ ಮಿಲಿಟರಿ ಪಡೆಯ ತಾಂತ್ರಿಕ ಸಂಸ್ಥೆಯಲ್ಲಿ ಮೈಸೂರಿನ ಬಿಇಎಂಎಲ್ ತಯಾರಿಸಿರುವ ಇಂಜಿನ್ ಪ್ರದರ್ಶಿಸಲಾಗುವುದು. ಇದು ಭಾರತದ ಆತ್ಮ ನಿರ್ಭರ್ ಪರಿಕಲ್ಪನೆಯ ಯಶಸ್ವಿಗೆ ಹಿಡಿದ ಕೈಗನ್ನಡಿ ಎಂದು ಹೇಳಿದರು.

ಯುದ್ಧ ಟ್ಯಾಂಕರ್ ಅಲ್ಲದೆ ರಕ್ಷಣಾ ಇಲಾಖೆಯ ಹಲವು ವಾಹನಗಳಿಗೆ ಈ ಇಂಜಿನ್ ಅಳವಡಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಪ್ರಯೋಗಗಳು ನಡೆಯಲಿದೆ ಎಂದರು.

ಯುದ್ಧ ಟ್ಯಾಂಕರ್ ಸೇರಿದಂತೆ ಇತರೆ ವಾಹನಗಳಿಗೆ ಅಳವಡಿಸಲು ಇಂತಹ ಇಂಜಿನ್‌ಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಈಗ ದೇಶೀಯವಾಗಿ ತಯಾರು ಮಾಡುತ್ತಿರುವ ಉನ್ನತ ತಂತ್ರಜ್ಞಾನದ ಇಂಜಿನ್ ಮೂಲಕ ಭಾರತ ದೊಡ್ಡ ಸಾಧನೆ ಮಾಡಿದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಮೈಸೂರಿನ ಬಿಇಎಂಎಲ್ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ಶಂತಾನೊ ರೈ, ದೇಶಿಯವಾಗಿ ನಿರ್ಮಾಣ ಮಾಡಿರುವ ಇಂಜಿನ್‌ನಿಂದ ಬಿಇಎಂಎಲ್‌ಗೆ ಇದು ಹೊಸ ಮೈಲಿ ಸೃಷ್ಟಿಸಿದೆ. ಈ ಮೂಲಕ ಸಾಧನೀಯ ಕಾರ್ಯ ಮಾಡಿದೆ ಎಂದು ಅಭಿಪ್ರಾಯಪಟ್ಟರು. ಈ ಮೂಲಕ ಮೈಸೂರಿನ ಬಿಇಎಂಎಲ್ ಭಾರತದ ರಕ್ಷಣಾ ಪಡೆಯಲ್ಲಿ ದೊಡ್ಡ ಪಾತ್ರ ವಹಿಸಿದೆ ಎಂದು ಹೇಳಿದರು.

ಖಾಸಗಿಕರಣದಿಂದ ಪಾರಾಗಲು ಮೂರು ಟಿಪ್ಸ್

ಮೈಸೂರಿನ ಬಿಇಎಂಎಲ್ ಸೇರಿದಂತೆ ದೇಶದ ಇತರೆಡೆ ಇರುವ ಬಿಇಎಂಎಲ್ ಕಾರ್ಖಾನೆಯ ಕಾರ್ಮಿಕರು ಖಾಸಗಿಕರಣದಿಂದ ಪಾರಾಗಲು ಮೂರು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕು ಎಂದು ಕೇಂದ್ರ ರಕ್ಷಣಾ ಇಲಾಖೆಯ ಕಾರ್ಯದರ್ಶಿ ಗಿರಿಧರ್ ಅರಮನೆ ಸಲಹೆ ನೀಡಿದ್ದಾರೆ.

ಮೈಸೂರಿನ ಬಿಇಎಂಎಲ್ ತಯಾರಿಸಿರುವ 1,500 ಹಾರ್ಸ್ ಪವರ್ ಇಂಜಿನ್ ಯಶಸ್ವಿ ಪ್ರಯೋಗದ ನಂತರ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿ, ಮೂರು ಟಿಪ್ಸ್‌ಗಳನ್ನು ನೀಡಿದರು. ಮಾನವ ಸಂಪನ್ಮೂಲ ಶಕ್ತಿ ಸಮರ್ಥವಾಗಿರಬೇಕು, ವಿದೇಶಿ ಗುಣಮಟ್ಟವನ್ನು ಮೀರಿಸುವ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು, ಇಲ್ಲಿ ತಯಾರು ಮಾಡುವ ವಾಹನಗಳು ಅತ್ಯಾಕರ್ಷಕವಾಗಿ ಕಾಣುವುದರ ಜೊತೆಗೆ ಗುಣಮಟ್ಟ ಹೊಂದಿರಬೇಕು ಎಂದು ಸಲಹೆ ನೀಡಿದರು.


ಈ ಮೂರು ವಿಚಾರದಲ್ಲಿ ಬದಲಾವಣೆ ಮಾಡಿಕೊಂಡರೆ ನೀವು ಖಾಸಗೀಕರಣದಿಂದ ಪಾರಾಗಬಹುದು. ಜೊತೆಗೆ ನಿಮ್ಮ ಉದ್ಯೋಗದಲ್ಲಿ ಯಾವುದೇ ಅಭದ್ರತೆ ಕಾಡುವುದಿಲ್ಲ ಎಂದು ಸಲಹೆ ನೀಡಿದರು.

ಮೈಸೂರಿನ ಬಿಇಎಂಎಲ್‌ನಲ್ಲಿ ಈಗಲೂ ಕೂಡ ಖಾಸಗೀಕರಣ ವಿರೋಧಿಸಿ ಫಲಕಗಳನ್ನು ಹಾಕಲಾಗಿದೆ. ಆಗಾಗ ಕಾರ್ಮಿಕರು ಪ್ರತಿಭಟನೆ ಕೂಡ ನಡೆಸುತ್ತಾರೆ. ಈಗ ದೇಶೀಯವಾಗಿ ಮೊದಲ ಬಾರಿಗೆ ನಿರ್ಮಾಣ ಮಾಡಿರುವ ಇಂಜಿನ್ ನಂತಹ ಹೊಸ ಆವಿಷ್ಕಾರಗಳು ನಡೆದರೆ ಪ್ರಾಯಶಃ ಖಾಸಗೀಕರಣ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಕೈ ಬಿಡುವ ಸಾಧ್ಯತೆ ಇದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visheswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಗುರುವಾರ 21 ಮಾರ್ಚ್ 2024

ಏ.1ರಿಂದ ಈಜು ತರಬೇತಿ ಶಿಬಿರ



ಮೈಸೂರು,ಮಾ.20–ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ನಗರದ ಯುವ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು 2024ನೇ ಸಾಲಿನ ವಿವಿಧ ಕ್ರೀಡೆಗಳ 29ನೇ ಬೇಸಿಗೆ ಶಿಬಿರಗಳನ್ನು ನುರಿತ ತರಬೇತುದಾರರಿಂದ 07 ವರ್ಷದಿಂದ 18 ವರ್ಷದೊಳಗಿನವರಿಗೆ ಏ.1ರಿಂದ 30 ರವರೆಗೆ ಆಯೋಜಿಸಲಾಗುತ್ತಿದೆ. ಶಿಬಿರದಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಮಾ.21ರಿಂದ ಕಚೇರಿ ವೇಳೆಯಲ್ಲಿ ಅರ್ಜಿಗಳನ್ನು ಪಡೆದು ನಿಗದಿತ ಶುಲ್ಕವನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ. (ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ.ಸಂಖ್ಯೆ:–0821–2419288 ಸಂಪರ್ಕಿಸುವುದು).

ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಈಜುಪಟುಗಳನ್ನು ಪ್ರೋತ್ಸಾಹಿಸಲು ಮಾ.27ರಿಂದ ಏ.25ರವರೆಗೆ 7 ವರ್ಷಕ್ಕೂ ಮೇಲ್ಪಟ್ಟ (ಬಾಲಕ, ಬಾಲಕಿಯರಿಗೆ ಮತ್ತು ಪುರುಷ, ಮಹಿಳೆಯರಿಗೆ) ವಿಶೇಷ ಈಜು ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿದೆ ಈಜು ತರಬೇತಿ ಶಿಬಿರದ ಅರ್ಜಿಯನ್ನು ಪಡೆದು ನಿಗದಿತ ಶುಲ್ಕವನ್ನು ಪಾವತಿಸಿ ನೋಂದಣಿಯನ್ನು ಈಜುಕೊಳದಲ್ಲಿಯೇ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ಕೆ.ಜಯಕುಮಾರ್, ಮೊ. 8892407462 ಸಂಪರ್ಕಿಸುವುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ವಿದ್ವತ್–2024 ಸ್ಪರ್ಧೆಗಳು

ಮೈಸೂರು, ಮಾ.20(ಜಿಎ)–ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ ವಿಭಾಗದ ವತಿಯಿಂದ ಮಾ.22 ಮತ್ತು 23 ರಂದು ಕಾಲೇಜಿನ ಸಭಾಂಗಣದಲ್ಲಿ ವಿದ್ವತ್–2024 ಎಂಬ ಶೀರ್ಷಿಕೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ.ಎಸ್.ಮರಿಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ವಾಣಿಜ್ಯ, ನಿರ್ವಹಣಾ, ತಂತ್ರಜ್ಞಾನ ಮತ್ತು ಕಲಾ ಕೌಶಲ್ಯ ಬೆಳೆಸಲು ಈ ಸ್ಪರ್ಧೆ ಉತ್ತಮ ವೇದಿಕೆ ಆಗಲಿದೆ. ಮಾ.22ರ ಬೆಳಗ್ಗೆ 9.30 ಗಂಟೆಗೆ ಎಲ್ ಅಂಡ್ ಟಿ ಕಂಪನಿಯ ಹಿರಿಯ ಅಧಿಕಾರಿ ಶಶಿಧರ ಡೋಂಗ್ರೆ ಉದ್ಘಾಟಿಸುವರು. ಕ್ವಾಲಿಟಿ ರೋಸ್ಸೆಲ್ ಟೆಕ್ ಸಿಸ್ಟಮ್‌ನ ಉಪಾಧ್ಯಕ್ಷ ಬಿ.ಪಿ.ಪ್ರಸಾದ್ ಅತಿಥಿಗಳಾಗಿರುವರು, ಸಂಸ್ಥೆಯ ಗೌರವ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸುವರು ಎಂದರು. ಮಾ.23ರ ಸಂಜೆ 4.30ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸ್ಯೆಯೆಂಟ್ ಡಿಎಲ್‌ಎಂ ಕಂಪನಿ ಪ್ರಧಾನ ವ್ಯವಸ್ಥಾಪಕ ಸುರೇಶ್ ನಾರಾಯಣ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಎರಡೂ ದಿನ ಹಣಕಾಸು, ತೆರಿಗೆ, ಉತ್ತಮ ಉದ್ಯಮಿ, ಮಾರ್ಕೆಟಿಂಗ್, ಮಾನವ ಸಂಪನ್ಮೂಲ ನಿರ್ವಹಣೆ, ಬಹುಮಾಧ್ಯಮ ಮತ್ತು ಅನಿಮೇಷನ್ ಮೊದಲಾದ ವಿಭಾಗಗಳಲ್ಲಿ ಸ್ಪರ್ಧೆಯೊಡನೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳೂ ನಡೆಯಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಎನ್.ಹರಿಪ್ರಸಾದ್, ಪ್ರೊ.ಆರ್.ವಿದ್ಯಾ, ಸೌಮ್ಯ, ಪ್ರೊ.ಎನ್.ಗೀತಾ, ಎನ್.ಹರೀಶ್ ಇದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿರುವ 23ನೇ ವಾರ್ಡ್‌ನ ಗಾಣಿಗೇರಿ ಬೀದಿ ಮಾರಮ್ಮನ ಜಾತ್ರೆಯಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ಕಾಂಗ್ರೆಸ್ ಮುಖಂಡರಾದ ರಾಜೀವ್, 23ನೇ ವಾರ್ಡ್ ಅಧ್ಯಕ್ಷ ಆನಂದ್, ಜ್ಞಾನೇಶ್, ಕಾರ್ತಿಕ್, ಕಿರಣ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಪವನ್ ಮತ್ತಿತರರು ಸೇವೆಯಲ್ಲಿ ಪಾಲ್ಗೊಂಡಿದ್ದರು.

ಇಂದು ನೇರ ಸಂದರ್ಶನ, ಫೋನ್–ಇನ್

ಮೈಸೂರು,ಮಾ.20–ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿರುವ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂನ ಸಮುದಾಯ ಬಾನುಲಿ ಕೇಂದ್ರದಲ್ಲಿ ಉಪ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜು ಮತ್ತು ಉಪಅರಣ್ಯ ಸಂರಕ್ಷಣಾಧಿಕಾರಿ ಶ್ರೀಮತಿ ಪಿ.ಎ.ಸೀಮಾ ಅವರೊಂದಿಗೆ ಬೇಸಿಗೆಯಲ್ಲಿ ಅರಣ್ಯ ಸಂರಕ್ಷಣೆ ಮತ್ತು ವಿಶ್ವ ಅರಣ್ಯ ದಿನ ಕುರಿತು ಸಂದರ್ಶನ ಫೋನ್–ಇನ್ ಕಾರ್ಯಕ್ರಮವನ್ನು ನಾಳೆ (ಮಾ.21) ಬೆಳಗ್ಗೆ 11.30ರಿಂದ 12.30ರವರೆಗೆ ಏರ್ಪಡಿಸಲಾಗಿದೆ. ಸಾರ್ವಜನಿಕರು ಬೇಸಿಗೆ ಸಮಯದಲ್ಲಿ ಅರಣ್ಯ ಸಂರಕ್ಷಣೆ ಮತ್ತು ಜವಾಬ್ದಾರಿಗಳು ಹಾಗೂ ವಿಶ್ವ ಅರಣ್ಯ ದಿನದ ಮಹತ್ವ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಸಲಹೆಗಳು ಇದ್ದಲ್ಲಿ ಕರೆಮಾಡಿ ನೇರವಾಗಿ ಅಧಿಕಾರಿಗಳ ಜೊತೆ ಹಂಚಿಕೊಳ್ಳಬಹುದು. ಅದಕ್ಕಾಗಿ ನೀವು ಕರೆಮಾಡಬಹುದಾದ ನಮ್ಮ ದೂ.ಸಂಖ್ಯೆ: 8296725912, 0821–2546563



ಡಾ.ಬಸವರಾಜು



ಪಿ.ಎ.ಸೀಮಾ



ಪೇರೆಂಟ್ಸ್ ಅಸೋಸಿಯೇಶನ್ ಆಫ್ ಡೆಫ್ ಚಿಲ್ಡ್ರನ್ ನಡೆಸುತ್ತಿರುವ ಇನ್ಸ್‌ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯ ಸಂಸ್ಥಾಪಕ ವಿಂಗ್ ಕಮಾಂಡರ್ ಕೆ.ಕೆ.ಶ್ರೀನಿವಾಸನ್ ಅವರ ಹುಟ್ಟುಹಬ್ಬವನ್ನು ಸಂಸ್ಥಾಪಕ ದಿನವನ್ನಾಗಿ ಆಚರಿಸಲಾಯಿತು. ಸಂಸ್ಥೆಯ ಪದಾಧಿಕಾರಿಗಳಾದ ಪ್ರಭಾಕರಯ್ಯ, ಜಲಜ ಗೋವಿಂದಪ್ಪ, ಶಿಕ್ಷಕಿಯರಾದ ಪರಿಮಳ ಮೂರ್ತಿ, ವಿಜಯ, ಅಶ್ವಿನಿ, ಸ್ವಾತಿ, ಮೀನಾಕ್ಷಿ, ರಘುವೀರ್, ಮಕ್ಕಳು ಹಾಗೂ ತಾಯಂದಿರು ಪಾಲ್ಗೊಂಡಿದ್ದರು.

ಸಖಿ ಫೌಂಡೇಷನ್‌ನಿಂದ ಮಹಿಳಾ ದಿನಾಚರಣೆ

ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು

ಮೈಸೂರು,ಮಾ.20–ಮೈಸೂರಿನ ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಅತ್ತೆ ಸೊಸೆಯರಿಗಾಗಿ ವಿಶೇಷವಾಗಿ 'ಸೂಪರ್ ಅತ್ತೆ–ಸಖತ್ ಸೊಸೆ', ಎಲ್ಲಾ ಮಹಿಳೆಯರಿಗಾಗಿ ದೇಸಿ ಪಾನೀಯ ಸ್ಪರ್ಧೆ, ಮನರಂಜನಾ ಸ್ಪರ್ಧೆ, ರಂಗೋಲಿ ಸ್ಪರ್ಧೆ ಜೊತೆಗೆ 'ಸಖಿಗೊಂದು ಸ್ಯಾರಿ' ಕಾರ್ಯಕ್ರಮವನ್ನು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮಾ.26ರ ಬೆಳಗ್ಗೆ 9.30ರಿಂದ 1.30ರವರೆಗೆ ಏರ್ಪಡಿಸಲಾಗಿದೆ. ಅದೇ ದಿನ ಸಭಾ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸುಧಾ ಯೋಗಣ್ಣ, ಪುಷ್ಪಾ ಅಯ್ಯಂಗಾರ್, ಜಯಲಕ್ಷ್ಮಿ ವೆಂಕಟರಾಮು, ಸುಮಾ ಸುಬ್ರಹ್ಮಣ್ಯ ಹಾಗೂ ವಿದುಷಿ ನೇತ್ರಾ ನಂದನ್ ಅವರಿಗೆ 'ಸ್ಫೂರ್ತಿ ಸಖಿ' ಪ್ರಶಸ್ತಿಯನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಸಮಾಜ ಸೇವಕ ರಘುರಾಂ ವಾಜಪೇಯಿ ಪ್ರದಾನ ಮಾಡಲಿದ್ದಾರೆ. ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಮಾ.24ರೊಳಗೆ 8310306882, 9964790442ಗೆ ಕರೆಮಾಡಿ ನೋಂದಾಯಿಸಿಕೊಳ್ಳಬಹುದು.

ಶಿವಶಂಕರ್‌ಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ರುದ್ರನಾಯಕ್ ಮತ್ತು ಡಾ.ಎಂ.ಜಿ.ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಶಿವಶಂಕರ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಪರ್ಫಾರ್ಮೆನ್ಸ್ ಸ್ಟಡೀಸ್ ಆಫ್ ಗ್ರಿಂಡಿಂಗ್ ವೀಲ್ ವಿಥ್ ನ್ಯಾನೋ ಅಬ್ರ್ಯಾಸಿವ್ ಪಾರ್ಟಿಕಲ್ಸ್ ಮಹಾಪ್ರಬಂಧವನ್ನು ಬೆಂಗಳೂರಿನ ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಬಿಜೆಪಿ, ಜೆಡಿಎಸ್ ಮೈತ್ರಿಯಲ್ಲಿ ಯಾವುದೇ ಗೊಂದಲವಿಲ್ಲ

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಡಾ.ಅಶ್ವಥ್ ನಾರಾಯಣ್ ಸ್ಪಷ್ಟನೆ

● ಮೈಸೂರಿನ ಆದಿಚುಂಚನಗಿರಿ ಶಾಖಾ ಮಠಕ್ಕೆ ಭೇಟಿ ● ಶ್ರೀಗಳ ಆಶೀರ್ವಾದ ಪಡೆದ ಮಾಜಿ ಡಿಸಿಎಂ ● ಬಿಜೆಪಿ, ಜೆಡಿಎಸ್ ಒಟ್ಟಾಗಿ ಪ್ರಚಾರ



ಮೈಸೂರಿನ ಲಕ್ಷ್ಮಿಕಾಂತನಗರದಲ್ಲಿರುವ ಆದಿಚುಂಚನಗಿರಿ ಶಾಖಾ ಮಠದಲ್ಲಿ ಬುಧವಾರ ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವಥ್ ನಾರಾಯಣ್, ಆದಿಚುಂಚನಗಿರಿ ಶಾಖಾ ಮಠದ ಮುಖ್ಯಸ್ಥರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಸ್ಥಳೀಯ ಬಿಜೆಪಿ ಮುಖಂಡರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.20(ಬಿಎಲ್‌ಯು)–ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಯಲ್ಲಿ ಯಾವುದೇ ಗೊಂದಲವಿಲ್ಲ. ಸೀಟು ಹಂಚಿಕೆ ಸಂಬಂಧ ವರಿಷ್ಠರ ಹಂತದಲ್ಲಿ ಎಲ್ಲಾ ತೀರ್ಮಾನವಾಗಲಿದೆ ಎಂದು ಮಾಜಿ ಉಪ ಮುಖ್ಯಮಂತ್ರಿಗಳೂ ಆದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಉಸ್ತುವಾರಿ ಡಾ.ಅಶ್ವಥ್ ನಾರಾಯಣ್ ಸ್ಪಷ್ಟಪಡಿಸಿದರು.

ಮೈಸೂರಿನ ಲಕ್ಷ್ಮಿಕಾಂತನಗರದಲ್ಲಿರುವ ಆದಿಚುಂಚನಗಿರಿ ಶಾಖಾ ಮಠದಲ್ಲಿ ಇಂದು ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರನ್ನು ಭೇಟಿ ಮಾಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಎಲ್ಲಾ ನಾಯಕರನ್ನು ಪ್ರಚಾರಕ್ಕೆ ಆಹ್ವಾನಿಸಲಾಗುವುದು. ಈ ಮೂಲಕ ಬಿಜೆಪಿ ಹಾಗೂ ಜೆಡಿಎಸ್ ಜೊತೆಯಾಗಿ ಪ್ರಚಾರ ಕಾರ್ಯಗಳಲ್ಲಿ ಭಾಗಿಯಾಗಲಿವೆ ಎಂದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಶಾಸಕ ಜಿ.ಟಿ.ದೇವೇಗೌಡರನ್ನು ಖುದ್ದಾಗಿ ಭೇಟಿ ಮಾಡಿ ಬೆಂಬಲ ಕೇಳಿದ್ದಾರೆ. ತರುವಾಯ ಸಭೆ ನಡೆಸಿ ಒಟ್ಟಿಗೆ ಪ್ರಚಾರ ಆರಂಭಿಸಲು ತೀರ್ಮಾನಿಸಲಾಗಿತ್ತು. ಈ ನಡುವೆ ಏನಾಗಿದೆ ಎಂಬ ಮಾಹಿತಿ ನನಗೆ ತಿಳಿದಿಲ್ಲ ಎಂದು ಡಾ.ಅಶ್ವಥ್ ನಾರಾಯಣ್ ತಿಳಿಸಿದರು.

ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಮಹದೇವ್ ಸೇರಿದಂತೆ ಎಲ್ಲಾ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪ್ರಚಾರ ಮಾಡುತ್ತೇವೆ. ಮೈಸೂರು ರಾಜಮನೆತನದ ಬಗ್ಗೆ ಜನರಿಗೆ ಗೌರವ ಭಾವನೆ ಇದ್ದು, ಯದುವೀರ್ ಗೆದ್ದೇ ಗೆಲ್ಲುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಾಪ್ ಸಿಂಹ ಬಗ್ಗೆ ಅನುಮಾನ ಸಲ್ಲದು: ಬಿಜೆಪಿ ಟಿಕೆಟ್ ಕೈ ತಪ್ಪಿರುವ ಕಾರಣ ಸಂಸದ ಪ್ರತಾಪ್ ಸಿಂಹ ಅವರಿಗೆ ಸಹಜವಾಗಿಯೇ ಬೇಜಾರಾಗಿದೆ. ಹಾಗೆಂದು ಪ್ರತಾಪ್ ಸಿಂಹ ಬಗ್ಗೆ ಅನುಮಾನ ಪಡುವ ಅಗತ್ಯವಿಲ್ಲ ಎಂದು ಡಾ.ಅಶ್ವಥ್ ನಾರಾಯಣ್ ಸ್ಪಷ್ಟಪಡಿಸಿದರು.

ಟಿಕೆಟ್ ಕೈ ತಪ್ಪಿರುವ ಕಾರಣ ಪ್ರತಾಪ್ ಸಿಂಹಗೆ ನೋವಿದೆ. ಈ ಮೂಲಕ ಸಣ್ಣಪುಟ್ಟ ವ್ಯತ್ಯಾಸಗಳಿರುವುದು ಸಹಜ. ಆದರೆ ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಹೋರಾಟ ಇದನ್ನೆಲ್ಲಾ ಮೀರಿದೆ. ಆದ ಕಾರಣ ಪ್ರತಾಪ್ ಸಿಂಹ ಅವರ ಮಾತುಗಳಲ್ಲಿ ತಪ್ಪು ಕಂಡುಹಿಡಿಯುವುದು ಸರಿಯಲ್ಲ ಎಂದರು.

ಪ್ರತಾಪ್ ಸಿಂಹ ತಾವು ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಹೇಳಿದ್ದಾರೆ. ಜೊತೆಗೆ ಬಿಜೆಪಿ ಪರವಾಗಿ ಕೆಲಸ ಮಾಡುತ್ತೇನೆ, ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಹೋರಾಟದಲ್ಲಿ ಭಾಗಿಯಾಗುತ್ತೇನೆ ಎಂದು ಕೂಡ ಹೇಳಿದ್ದಾರೆ. ಟಿಕೆಟ್ ದೊರೆಯದ ಕಾರಣ ಅವರ ಬೇಜಾರು ಬೆಳಿಗ್ಗೆ ಆಗುವಷ್ಟರಲ್ಲಿ ಸರಿ ಹೋಗುವುದಿಲ್ಲ. ಅವರಿಗೆ ಸ್ವಲ್ಪ ಸಮಯ ಬೇಕಿದೆ. ಯದುವೀರ್ ಹಾಗೂ ಪ್ರತಾಪ್ ಸಿಂಹ ಒಳ್ಳೆಯ ಜೋಡಿಯಾಗಿ ಜೊತೆಯಾಗಿ ಪ್ರಚಾರ ಮಾಡುತ್ತಾರೆ ಎಂದು ಹೇಳಿದರು.

ರಾಜಮನೆತನದ ಬಗ್ಗೆ ಒಕ್ಕಲಿಗ ಸಮುದಾಯಕ್ಕೆ ಅಭಿಮಾನವಿದೆ. ಕೃಷ್ಣರಾಜಸಾಗರ ನಿರ್ಮಾಣಕ್ಕೆ ಮೈಸೂರು ಮಹಾರಾಜರು ಅರಮನೆಯಲ್ಲಿದ್ದ ಚಿನ್ನಾಭರಣ ಮಾರಾಟ ಮಾಡಿದ್ದಾರೆ. ಅವರ ಇಂತಹ ಹಲವು ಕೊಡುಗೆ ಸ್ಮರಿಸಿ ಎಲ್ಲರೂ ಯದುವೀರ್ ಬೆಂಬಲಿಸುತ್ತಾರೆ ಹೇಳಿದರು.

ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ಮಹಾರಾಜ ಯಾರು ಎಂಬ ದುರಹಂಕಾರದ ಮಾತು ಬಿಡಿ

ಮೈಸೂರು ಮಹಾರಾಜ ಯಾರು ಎಂಬ ದುರಹಂಕಾರದ ಮಾತುಗಳನ್ನು ಮೊದಲು ಬಿಡಿ ಎಂದು ಡಾ.ಅಶ್ವಥ್ ನಾರಾಯಣ್ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಲಹೆ ನೀಡಿದ್ದಾರೆ.

ಮೈಸೂರು ಮಹಾರಾಜರು ಮಾಡಿರುವ ಎಳ್ಳಷ್ಟು ಅಭಿವೃದ್ಧಿ ಕಾರ್ಯ ಸಿದ್ದರಾಮಯ್ಯ ಮಾಡಿಲ್ಲ. ಆರೋಗ್ಯ, ಶಿಕ್ಷಣ ಸೇರಿದಂತೆ ಮೈಸೂರಿಗೆ ಯಾವುದೇ ಕೊಡುಗೆ ನೀಡಿಲ್ಲ. ತಮ್ಮ ತವರು ಜಿಲ್ಲೆಗೆ ಯಾವುದೇ ಸ್ಮರಣೀಯ ಕೊಡುಗೆ ನೀಡದ ಸಿದ್ದರಾಮಯ್ಯ ಮೈಸೂರು ಮಹಾರಾಜರ ಬಗ್ಗೆ ಹೀಗೆ ದುರಹಂಕಾರದ ಮಾತುಗಳನ್ನಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೊದಲು ದುರಹಂಕಾರದ ಮಾತುಗಳನ್ನಾಡುವುದನ್ನು ಬಿಡಿ. ಬಾಯಿಗೆ ಬಂದಂತೆ ಇಂತಹ ಹೇಳಿಕೆಗಳನ್ನು ನೀಡುವುದನ್ನು ಮೊದಲು ನಿಲ್ಲಿಸಿ ಎಂದು ಸಲಹೆ ನೀಡಿದರು. ನಾನು ವೀಕ್ ಸಿಎಂ ಅಲ್ಲ ಎಂಬ ಸಿದ್ದರಾಮಯ್ಯ ಹೇಳಿಕೆಗೆ ವ್ಯಂಗ್ಯವಾಡಿದ ಡಾ.ಅಶ್ವಥ್ ನಾರಾಯಣ್, ಸಿದ್ದರಾಮಯ್ಯ ತಮಗೆ ತಾವೇ ಬಿಲ್ಡಪ್ ತೆಗೆದುಕೊಳ್ಳುತ್ತಾರೆ. ತಮ್ಮ ಸಚಿವರನ್ನು ನಿಯಂತ್ರಿಸದ ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ. ನಾನು ಕೂಡ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಬಹಳಷ್ಟು ಸಚಿವರು ಹೇಳುತ್ತಾರೆ. ಅವರನ್ನು ಕಂಟ್ರೋಲ್ ಮಾಡಲು ಸಿದ್ದರಾಮಯ್ಯಗೆ ಸಾಧ್ಯವಾಗುತ್ತಿಲ್ಲ. ಆದರೂ ನಾನು ಸ್ಟ್ರಾಂಗ್ ಸಿಎಂ ಎಂದು ತಮಗೆ ತಾವೆ ಬಿಲ್ಡಪ್ ತೆಗೆದುಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು. ತಮ್ಮ ತವರು ಜಿಲ್ಲೆಯ ಲೋಕಸಭಾ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿ ಸ್ಪರ್ಧೆಗಿಳಿಸಲು ಸಿದ್ದರಾಮಯ್ಯ ಹುಡುಕಾಟದಲ್ಲಿದ್ದಾರೆ ಎಂದರು.

ಡಾ.ಮಂಜುನಾಥ್ ಸುನಾಮಿಯಂತೆ ಗೆದ್ದು ಬರುತ್ತಾರೆ

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಸುನಾಮಿ ತರಹ ಭರ್ಜರಿ ಗೆಲುವು ಸಾಧಿಸುತ್ತಾರೆ ಎಂದು ಡಾ.ಅಶ್ವಥ್ ನಾರಾಯಣ್ ವಿಶ್ವಾಸ ವ್ಯಕ್ತಪಡಿಸಿದರು.

ಈ ಮೂಲಕ ಆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರನ್ನು ಸುಲಭವಾಗಿ ಡಾ.ಮಂಜುನಾಥ್ ಸೋಲಿಸುತ್ತಾರೆ. ಡಾ.ಮಂಜುನಾಥ್ ಜನಸಾಮಾನ್ಯರ ಡಾಕ್ಟರ್ ಆಗಿ ಪ್ರಖ್ಯಾತಿ ಪಡೆದಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸುತ್ತಾರೆ. ಇದರಿಂದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಮತದಾರರು ಡಾ.ಮಂಜುನಾಥ್ ಅವರನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾರೆ ಎಂದು ಹೇಳಿದರು.

ತಮ್ಮನ್ನು ಟೀಕಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಆಗದಂತಹ ದುರ್ಬಲ ಮುಖ್ಯಮಂತ್ರಿ ಸಿದ್ದರಾಮಯ್ಯ

ವಿಪಕ್ಷ ನಾಯಕ ಅಶೋಕ್ ವಾಗ್ದಾಳಿ

ಬೆಂಗಳೂರು, ಮಾ.20(ಕೆಎಂಶಿ)–ತಮ್ಮ ಕಾಂಗ್ರೆಸ್ ಪಕ್ಷದವರೇ ಟೀಕಿಸುತ್ತಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗದ ಸಿದ್ದರಾಮಯ್ಯ ಕರ್ನಾಟಕ ಕಂಡ ಅತ್ಯಂತ ದುರ್ಬಲ, ಅಸಹಾಯಕ ಮುಖ್ಯಮಂತ್ರಿ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್‌ನ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ತಮ್ಮ ಮೇಲೆ ಪದೇ ಪದೇ ವಾಗ್ದಾಳಿ ನಡೆಸಿದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಾಗದಷ್ಟು, ಕನಿಷ್ಠ ಪಕ್ಷ ಪ್ರತ್ಯುತ್ತರ ಕೂಡ ನೀಡಲಾಗದಷ್ಟು ಸಿದ್ದರಾಮಯ್ಯ ಅಸಹಾಯಕರಾಗಿದ್ದಾರೆ ಎಂದಿದ್ದಾರೆ. ಇಷ್ಟೇ ಅಲ್ಲದೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಣ ಅವಕಾಶ ಸಿಕ್ಕಾಗಲೆಲ್ಲಾ ಬಂಡಾಯದ ಬಾವುಟ ಹಾರಿಸಿ ಮುಖ್ಯಮಂತ್ರಿ ಗಾದಿ ಕಿತ್ತುಕೊಳ್ಳುವ ಮಾತನಾಡುತ್ತಾ ಕಾಲೆಳೆಯುತ್ತಿದ್ದರೂ ಏನೂ ಮಾಡಲಾಗದ ಅಸಹಾಯಕ ಸ್ಥಿತಿ ಸಿದ್ದರಾಮಯ್ಯ ಅವರದ್ದಾಗಿದೆ. ನಿಮಗೆ ತಾಕತ್ತಿದ್ದರೆ, ನೀವು ಹೇಳಿಕೊಳ್ಳುವಂತೆ ಸ್ಟ್ರಾಂಗ್ ಮುಖ್ಯಮಂತ್ರಿಯೇ ಆಗಿದ್ದರೆ, 'ನಾನೇ ಐದು ವರ್ಷ ಮುಖ್ಯಮಂತ್ರಿ' ಎಂಬುದಾಗಿ ಒಮ್ಮೆ ಹೇಳಿ ನೋಡೋಣ ಎಂದು ಅಶೋಕ್ ಸವಾಲು ಹಾಕಿದ್ದಾರೆ.



ಬಿಜೆಪಿ ನಾಯಕರಿಗೆ ನರೇಂದ್ರ ಮೋದಿ ಅವರೇ ಮತ್ತೊಮ್ಮೆ ಐದು ವರ್ಷಕ್ಕೆ ದೇಶದ ಬಲಿಷ್ಠ ಪ್ರಧಾನಿಯಾಗಿ ಮುಂದುವರೆಯುತ್ತಾರೆ ಎಂಬುದಾಗಿ ವಿಶ್ವಾಸದಿಂದ ಹೇಳುವ ಧೈರ್ಯ ಇದೆ ಎಂದು ಅಶೋಕ್ ಕುಟುಕಿದ್ದಾರೆ.

ಈ ರೀತಿ ನಿಮಗೆ ಹೇಳಲು ಖಂಡಿತ ಆಗಲ್ಲ, ಅದಕ್ಕೆ ತಮ್ಮನ್ನು ಈ ರಾಜ್ಯ ಕಂಡ ಅತ್ಯಂತ ದುರ್ಬಲ ಮುಖ್ಯಮಂತ್ರಿ ಎಂಬುದಾಗಿ ಜನ ಮಾತಾಡಿಕೊಳ್ಳುವುದು ಎಂದು ಟೀಕಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ವಿಷಯದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಖಂಡನೆ

ಮೈಸೂರು, ಮಾ.20(ಜಿಎ)–ರಾಜ್ಯ ಸರ್ಕಾರ ನೂತನ ರಾಷ್ಟ್ರೀಯ ಶಿಕ್ಷಣ (ಎನ್‌ಇಪಿ)ನೀತಿ ಜಾರಿ ವಿಷಯದಲ್ಲಿ ರಾಜಕೀಯ ಹಸ್ತಕ್ಷೇಪ ನಡೆಸುತ್ತಿದೆ ಎಂದು ಪೀಪಲ್ಸ್ ಫೋರಮ್ ಫಾರ್ ಕರ್ನಾಟಕ ಎಜುಕೇಷನ್‌ನ ಸಂಚಾಲಕ ಡಾ.ಈ.ಸಿ. ನಿಂಗರಾಜು ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರವೂ ಸರ್ಕಾರಿ ಅಥವಾ ಸರ್ಕಾರಿ ಸ್ವಾಮ್ಯದ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಮಕ್ಕಳನ್ನು ಬಲಿ ತೆಗೆದುಕೊಳ್ಳುವ ನಿರ್ಧಾರ ಕೈಗೊಳ್ಳುವ ಮೂಲಕ ಜನಾಗ್ರಹದ ವಿರುದ್ಧ ಸಾಗಿದ್ದು, ಕಳೆದ ವಿಧಾನಸಭಾ ಚುನಾವಣೆ ನಂತರ ರಾಜ್ಯದಲ್ಲಿ ಬದಲಾದ ಪರಿಸ್ಥಿತಿಯಲ್ಲಿ ಮತ್ತೆ ಪಠ್ಯ ಪರಿಷ್ಕರಿಸಲು ಮುಂದಾಗಿರುವುದು ಸರಿಯಲ್ಲ. ರಾಜ್ಯದಲ್ಲಿ ಬಡಮಕ್ಕಳೇ ಹೆಚ್ಚಾಗಿರುವ ಶಾಲೆಗಳತ್ತಲೇ ಸರ್ಕಾರ ರಾಜಕೀಯ ಹಸ್ತಕ್ಷೇಪ ನಡೆಸುತ್ತಿದೆ ಎಂದು ನಿಂಗರಾಜು ದೂರಿದರು.

ಮೇಲಿಂದ ಮೇಲೆ ಪಠ್ಯ ಪರಿಷ್ಕರಣೆಯತ್ತ ಸಾಗಿರುವ ಸರ್ಕಾರ, ಸರ್ಕಾರಿ ಶಾಲೆಗಳಲ್ಲಿರುವ ಮೂಲಸೌಲಭ್ಯ ಕೊರತೆ ನಿವಾರಣೆ, ಶಿಕ್ಷಕರ ತರಬೇತಿಗಾಗಿ ಹಣ ವ್ಯಯಿಸಬೇಕು. ಒಳಗೊಳ್ಳುವಿಕೆಯ ಸೋಗಿನಲ್ಲಿ, ಕನ್ನಡ ಭಾಷಾ ಪಠ್ಯಪುಸ್ತಕಗಳಲ್ಲಿ ಕಳಪೆ ಗುಣಮಟ್ಟದ ಸಾಹಿತ್ಯವನ್ನು ಮತ್ತೆ ಪರಿಚಯಿಸಲಾಗುತ್ತಿದೆ. ಸರಿಯಾದ ಪ್ರಕ್ರಿಯೆಯಿಲ್ಲದೇ ಏಕಪಕ್ಷೀಯವಾಗಿ ಅಧ್ಯಾಯಗಳನ್ನು ತೆಗೆದುಹಾಕುವ ಸಿಎಂ ಸಿದ್ದರಾಮಯ್ಯ ಅವರ ಸರ್ವಾಧಿಕಾರಿ ಆದೇಶವು ಸಾಂವಿಧಾನಿಕ ಮಾನದಂಡಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತದೆ. ಶೌರ್ಯದ ಸಾಕಾರ ರೂಪವಾದ ಭಗತ್ ಸಿಂಗ್, ಪ್ರಬಲ ನಾಯಕ, ಸ್ವಾತಂತ್ರ್ಯ ಹೋರಾಟಗಾರರಾದ ಸಾವರ್ಕರ್ ಅವರನ್ನು ಇತಿಹಾಸ ಪಾಠದಿಂದ ತೆಗೆದು ಹಾಕಿ ರುವುದು ಸರ್ಕಾರದ ದೇಶದ್ರೋಹಿ ರಾಜಕೀಯ ನಿಲುವನ್ನು ಪ್ರತಿಬಿಂಬಿಸುತ್ತದೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಸಂಚಾಲಕ ಪ್ರೊ.ಜಿ.ಸಿ.ರಾಜಣ್ಣ, ಎ.ಬಿ.ಜಯಣ್ಣ, ಡಾ.ಕೆ.ವಸಂತಕುಮಾರ್, ಪ್ರಜ್ವಲ್ ಉಪಸ್ಥಿತರಿದ್ದರು.

ಈಗಾಗಲೇ ದೇಶಾದ್ಯಂತ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಿದೆ. ಹಲವು ರಾಜ್ಯಗಳು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಒಪ್ಪಿಕೊಂಡಿವೆ. ಇದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗುತ್ತಿದೆ. ರಾಜ್ಯದ ಮಕ್ಕಳು ಮಾತ್ರ ಇದರಿಂದ ಹಿಂದೆ ಉಳಿದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ನಂತರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿ ಮಾಡದೇ ಮಕ್ಕಳಿಗೆ ಅನ್ಯಾಯ ಮಾಡುತ್ತಿದೆ. ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡುವುದು ಬೇಡ. ರಾಜ್ಯದಲ್ಲೂ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಯಾಗಲಿ.

–ಡಾ. ಈ.ಸಿ. ನಿಂಗರಾಜು

ವಿಶ್ಲೇಷಣಾತ್ಮಕ ಉಪಕರಣದ ತರಬೇತಿ, ಕಾರ್ಯಾಗಾರ



ಮೈಸೂರು, ಮಾ. 20– ಮೈಸೂರು ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಫಾರ್ಮಾಸ್ಯುಟಿಕಲ್ ಕೆಮಿಸ್ಟ್ರಿ ಮತ್ತು ಫಾರ್ಮಕಾಲಜಿ ವಿಭಾಗದಿಂದ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ವಿಶ್ಲೇಷಣಾತ್ಮಕ ಉಪಕರಣಗಳ ಬಗ್ಗೆ ತರಬೇತಿ ಮತ್ತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಡಾ.ಟಿ.ಎಂ.ಪ್ರಮೋದ್ ಕುಮಾರ್ ಉದ್ಘಾಟಿಸಿ ಮಾತನಾಡಿ, ಗಿಡಮೂಲಿಕೆಗಳ ಮಾದರಿ ವಿಶ್ಲೇಷಣೆಯಲ್ಲಿ ವಿಶ್ಲೇಷಣಾತ್ಮಕ ಉಪಕರಣಗಳ ಪ್ರಾಮುಖ್ಯತೆ ಬಗ್ಗೆ ವಿವರಿಸಿದರು. ಔಷಧೀಯ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಬಿ.ಎಂ.ಗುರುಪಾದಯ್ಯ, ಪ್ರಾಧ್ಯಾಪಕ ಡಾ.ಕೆ.ಎಲ್.ಕೃಷ್ಣ, ಪ್ರಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನ್ಯಾಯಾಲಯಗಳಿಗೆ ಸಂಧಾನಕಾರರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಮಾ.20–2024ನೇ ಸಾಲಿಗೆ ಮೈಸೂರಿನ ಕೌಟುಂಬಿಕ ನ್ಯಾಯಾಲಯಗಳಿಗೆ ಸಂಧಾನಕಾರರಾಗಿ ಕರ್ತವ್ಯ ನಿರ್ವಹಿಸಲು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಅನುಭವ ಹೊಂದಿರುವಂತಹ ವ್ಯಕ್ತಿಗಳು, ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಇಚ್ಛೆಯುಳ್ಳವರು ತಮ್ಮ ಅನುಭವದ ಸ್ವ–ವಿವರಗಳನ್ನೊಳಗೊಂಡ ಇತ್ತೀಚಿನ ಭಾವಚಿತ್ರದೊಂದಿಗೆ ವಿದ್ಯಾಭ್ಯಾಸ ಮತ್ತು ಅನುಭವದ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಮಾ.30ರಂದು ಸಂಜೆ 4 ಗಂಟೆಯೊಳಗೆ ಜಯನಗರದ ಮಳಲವಾಡಿಯಲ್ಲಿರುವ ಹೊಸ ನ್ಯಾಯಾಲಯಗಳ ಸಂಕೀರ್ಣದ ಕೌಟುಂಬಿಕ ನ್ಯಾಯಾಲಯದ ಕಚೇರಿಗೆ ಸಲ್ಲಿಸಬೇಕು. ಸದರಿ ಅವಧಿಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕುಡಿಯುವ ನೀರಿನ ಸಮಸ್ಯೆ: ಸಹಾಯವಾಣಿ ಸ್ಥಾಪನೆ



ಮೈಸೂರು: ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮೈಸೂರು ತಾಲೂಕು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಮೈಸೂರು ತಾಲೂಕು ಕೇಂದ್ರದಲ್ಲಿ ಜಲ ಸೇವಾ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದ್ದು, ಸಹಾಯವಾಣಿ ಸ್ಥಿರ ದೂ.ಸಂ: 0821–2414433 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಳಿವಿನಂಚಿನಲ್ಲಿರುವ ಗುಬ್ಬಿ ಸಂತತಿಯನ್ನು ಸಂರಕ್ಷಿಸಿ

ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪಕ್ಷಿ ತಜ್ಞ ಎಂ.ಕೆ. ಸಪ್ತ ಗಿರೀಶ್ ಸಲಹೆ



ಮೈಸೂರು, ಮಾ. 20– ಇತ್ತೀಚಿನ ದಿನಗಳಲ್ಲಿ ಗುಬ್ಬಚ್ಚಿ ಅಳಿವಿನಂಚಿನಲ್ಲಿದೆ. ಗುಬ್ಬಚ್ಚಿ ಉಳಿದರೆ ಉತ್ತಮ ಪರಿಸರ ನೋಡಲು ಸಾಧ್ಯ. ಪರಿಸರ ಸಮತೋಲನ ಬಹಳ ಮುಖ್ಯ. ಗುಬ್ಬಚ್ಚಿ ಮಾತ್ರವಲ್ಲ ಎಲ್ಲಾ ಪಕ್ಷಿಗಳು ಕೂಡ ಅಳಿವಿನಂಚಿನಲ್ಲಿವೆ. ಆದ್ದರಿಂದ ಮುಂದಿನ ಪೀಳಿಗೆಗೂ ಗುಬ್ಬಿ ಸಂತತಿ ಉಳಿಸಿ ಎಂದು ಪಕ್ಷಿ ತಜ್ಞ ಹಾಗೂ ಪರಿಸರವಾದಿ ಎಂ.ಕೆ.ಸಪ್ತ ಗಿರೀಶ್ ಸಲಹೆ ನೀಡಿದ್ದಾರೆ.

ಕೃಷ್ಣಮೂರ್ತಿಪುರಂನಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ (ಗುಬ್ಬಚ್ಚಿ ಶಾಲೆ) ಆವರಣದಲ್ಲಿ ಕೆಎಂಪಿಕೆ ಟ್ರಸ್ಟ್ ವತಿಯಿಂದ ವಿಶ್ವ ಗುಬ್ಬಚ್ಚಿ ದಿನಾಚರಣೆ ಅಂಗವಾಗಿ ಗುಬ್ಬಚ್ಚಿ ಹಬ್ಬ ಆಚರಿಸಲಾಯಿತು. ಪಕ್ಷಿಗಳಿಗೆ ನೀರಿನ ಬೌಲು ಅಳವಡಿಸಿ ನೀರನ್ನು ಹಾಕುವ ಮೂಲಕ ಚಾಲನೆ ನೀಡಲಾಯಿತು.

ಗುಬ್ಬಚ್ಚಿ ಉಳಿಸಿದರೆ ಪರಿಸರದ ಉಳಿವು. ಮನುಷ್ಯರು ತಾವು ಮಾತ್ರ ಬದುಕದೆ, ಎಲ್ಲಾ ಜೀವಿಗಳು ಬದುಕಲು ಅವಕಾಶ ಮಾಡಿಕೊಡಬೇಕೆಂದು ಹೇಳಿದರು. ಸುಮಾರು 25ಕ್ಕೂ ಅಧಿಕ ಗುಬ್ಬಚ್ಚಿಗಳ ಪ್ರಭೇದವಿದೆ. ಆದರೆ ಗುಬ್ಬಚ್ಚಿ ಸಂತತಿ ಇಂದು ಅಳಿವಿನಂಚಿನಲ್ಲಿದೆ ಗುಬ್ಬಚ್ಚಿ ಸಂಕುಲವನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಗುಬ್ಬಚ್ಚಿ ಕಾಣಲು ಸಿಗುತ್ತಿಲ್ಲ. ಆದರೆ ನಮ್ಮ ಬಾಲ್ಯವನ್ನು ನೆನಪಿಸಿಕೊಂಡರೆ ಗುಬ್ಬಚ್ಚಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ಆದರೆ ಇಂದು ಗುಬ್ಬಚ್ಚಿ ಸೇರಿದಂತೆ ಹಲವು ಪಕ್ಷಿ ಸಂಕುಲ ಅವಸಾನದಂಚಿನಲ್ಲಿದೆ ಎಂದರು.

ವಿಶೇಷವಾಗಿ ಮಕ್ಕಳಿಗೆ ವಿವಿಧ ಪಕ್ಷಿಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಕೃತಿ ಸಮತೋಲನಕ್ಕಾಗಿ ಗುಬ್ಬಚ್ಚಿಗಳನ್ನು ಉಳಿಸೋಣ. ಬೇಸಿಗೆಯ ಬಿಸಿಲಿನ ತಾಪದಿಂದ ಪ್ರಾಣಿ ಪಕ್ಷಿಗಳನ್ನು ರಕ್ಷಿಸೋಣ. ಅಳಿದು ಹೋಗುತ್ತಿರುವ ಗುಬ್ಬಚ್ಚಿ ಸಂಕುಲಗಳ ಉಳಿವಿಗಾಗಿ ಜನ ಜಾಗೃತಿ ಮೂಡಿಸೋಣ. ನಶಿಸಿ ಹೋಗುತ್ತಿರುವ ಗುಬ್ಬಚ್ಚಿ ಸಂಕುಲವನ್ನು ಸಂರಕ್ಷಿಸೋಣ ಎಂಬ ಘೋಷವಾಕ್ಯ ನಾಮಫಲಕದ ಮೂಲಕ ಪಕ್ಷಿಗಳ ಸಂರಕ್ಷಣೆಯ ಸಂದೇಶ ಸಾರಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಹಾಗೂ ಸಹ ಪ್ರಾಧ್ಯಾಪಕಿ ಡಾ.ಆರ್.ಎಚ್.ಪವಿತ್ರ, ಪರಿಸರ ಪ್ರೇಮಿ ಶ್ರೀನಿವಾಸ್ ಭಾಷ್ಯಂ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯ ಮೋಹನ್‌ಕುಮಾರ್, ಅಜಯ್ ಶಾಸ್ತ್ರಿ, ಬೈರತಿ ಲಿಂಗರಾಜು, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ದಿವ್ಯ ಹಾಗೂ ಇನ್ನಿತರರು ಭಾಗವಹಿಸಿದ್ದರು.

ಬಂದೂಕಿನಿಂದ ಮಿಸ್‌ಫೈರ್: ಕೊಡಗಿನ ಯುವಕ ಸಾವು



ಸಂತೋಷ್

ಬೈಲುಕುಪ್ಪೆ, ಮಾ.20– ರೈಫಲ್‌ನಿಂದ ಗುಂಡು ಹಾರಿ ಯುವಕನೋರ್ವ ಸಾವನ್ನಪ್ಪಿರುವ ಘಟನೆ ಪಿರಿಯಾಪಟ್ಟಣ ತಾಲೂಕು ಗಿರಿಗೂರು ಕಾವೇರಿ ನದಿ ದಂಡೆಯಲ್ಲಿ ಮಂಗಳವಾರ ಸಂಜೆ ಸಂಭವಿಸಿದೆ. ಕುಶಾಲನಗರದ ಜನತಾ ಕಾಲೋನಿ ನಿವಾಸಿ ಸಂತೋಷ್ (34) ಸಾವನ್ನಪ್ಪಿದವನಾಗಿದ್ದು, ಈತನ ಸಾವಿನ ಬಗ್ಗೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ.

ವಿವರ: ಸಂತೋಷ್ ಗಿರಿಗೂರು ಕಾವೇರಿ ನದಿ ಬಳಿ ಕ್ವಾಡ್ ಬೈಕ್ ಅಡ್ವೆಂಚರ್ ಕೇಂದ್ರ ಸ್ಥಾಪಿಸುವ ಕೆಲಸದಲ್ಲಿ ನಿರತನಾಗಿದ್ದ. ಇಂದು ತನ್ನ 7 ಮಂದಿ ಸ್ನೇಹಿತರೊಂದಿಗೆ ತನ್ನ ಅಡ್ವೆಂಚರ್ ಕೇಂದ್ರದ ಬಳಿಗೆ ಬಂದು ಪಾರ್ಟಿ ಮಾಡಿದ್ದ ಎನ್ನಲಾಗಿದೆ. ಸಂಜೆ ಪಾರ್ಟಿ ಮುಗಿಸಿ ಈತನ ನಾಲ್ವರು ಸ್ನೇಹಿತರು ಹಿಂತಿರುಗಿದ್ದರು ಎಂದು ಹೇಳಲಾಗಿದೆ. ಸಂತೋಷ್ ತನ್ನ ಸ್ನೇಹಿತರಾದ ಶರತ್, ನೂತನ್, ರವಿಕುಮಾರ್ ಅವರೊಂದಿಗೆ ಅಡ್ವೆಂಚರ್ ಕೇಂದ್ರದ ಬಳಿಯೇ ಇದ್ದ ಎಂದು ಹೇಳಲಾಗಿದೆ. ಸಂಜೆ 5.30ರ ಸುಮಾರಿನಲ್ಲಿ ಸಂತೋಷ್ ಸೇರಿದಂತೆ ನಾಲ್ವರು ಕಾವೇರಿ ನದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು ಎಂದು ಹೇಳಲಾಗಿದ್ದು, ಮೂವರು ಮುಂದೆ ಸಾಗಿದರೆ, ಸಂತೋಷ್ ತನ್ನ ಸ್ನೇಹಿತನ .22 ರೈಫಲ್‌ನೊಂದಿಗೆ ಒಂದೆಡೆ ಕುಳಿತಿದ್ದನಂತೆ. ಈ ಸಂದರ್ಭದಲ್ಲಿ ರೈಫಲ್ ಮಿಸ್‌ಫೈರ್ ಆಗಿ ಗುಂಡು ಈತನ ಕಣ್ಣಿನ ಮೂಲಕ ತಲೆಗೆ ಹೊಕ್ಕಿ ಸ್ಥಳದಲ್ಲೇ ಸಂತೋಷ್ ಸಾವನ್ನಪ್ಪಿದ್ದಾನೆ ಎಂದು ಈತನ ಸ್ನೇಹಿತರು ಪೊಲೀಸರಿಗೆ ತಿಳಿಸಿದ್ದಾರೆ. ಸಂತೋಷ್‌ನ ಸಹೋದರ ಜಯಪ್ರಕಾಶ್ ನೀಡಿದ ದೂರಿನ ಮೇರೆಗೆ ಭಾರತೀಯ ದಂಡ ಸಂಹಿತೆ 304ರಡಿ (ಉದ್ದೇಶವಲ್ಲದ ಕೊಲೆ) ಪ್ರಕರಣ ದಾಖಲಿಸಿಕೊಂಡಿರುವ ಬೈಲುಕುಪ್ಪೆ ಠಾಣೆ ಪೊಲೀಸರು, ಸಂತೋಷ್‌ನ ಮೂವರು ಸ್ನೇಹಿತರನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ. ಮತ್ತೊಂದೆಡೆ ಸಂತೋಷ್‌ನ ಸಹೋದರ ಜಯಪ್ರಕಾಶ್ ಅವರು ತನ್ನ ಸಹೋದರ ಮಿಸ್‌ಫೈರ್‌ನಿಂದ ಸತ್ತಿದ್ದಾನೆ ಎಂದು ಆತನ ಜೊತೆಗಿದ್ದ ಸ್ನೇಹಿತರು ಹೇಳುತ್ತಿದ್ದಾರೆ. ಆದರೆ ಅವರ ಹೇಳಿಕೆಗಳು ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಹೀಗಾಗಿ ಪೊಲೀಸರು ಸಮಗ್ರ ತನಿಖೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ. ಘಟನಾ ಸ್ಥಳಕ್ಕೆ ಮೈಸೂರು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ, ಹುಣಸೂರು ಡಿವೈಎಸ್ಪಿ ಗೋಪಾಲಕೃಷ್ಣ, ಬೈಲುಕುಪ್ಪೆ ಠಾಣೆ ಇನ್‌ಸ್ಪೆಕ್ಟರ್ ವೀಣಾ, ಸಬ್ ಇನ್‌ಸ್ಪೆಕ್ಟರ್ ಜಿತೇಂದ್ರ ಕುಮಾರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೂರನೇ ಪುಟದಿಂದ

ಕುಂಬಾರಕೊಪ್ಪಲಲ್ಲಿ ಮನೆಗೆ ಆಕಸ್ಮಿಕ ಬೆಂಕಿ

ಮನೆ ಆವರಣದಲ್ಲಿದ್ದ ಎಲೆಕ್ಟ್ರಿಕ್ ಸ್ಕೂಟರ್, ಬೈಕ್ ಹಾಗೂ 2 ತಿಂಗಳ ಹಿಂದಷ್ಟೇ ಖರೀದಿಸಿದ್ದ ಮಹೀಂದ್ರ ಎಕ್ಸ್‌ಯುವಿ ಕಾರು, ಮನೆಯ ನೆಲಮಹಡಿ ಪೋರ್ಟಿಕೋ, ಹಾಲ್‌ನಲ್ಲಿದ್ದ ಪೀಠೋಪಕರಣ, ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳು ಸೇರಿ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಸುಟ್ಟು ಕರಕಲಾಗಿದ್ದವು. ಕಾಂಪೌಂಡ್ ಒಳಗೆ ನಿಂತಿದ್ದ ಎಲೆಕ್ಟ್ರಿಕ್ ಸ್ಕೂಟರ್‌ಗೆ ಬೆಂಕಿ ತಗುಲಿ, ನಂತರ ಪಕ್ಕದಲ್ಲಿದ್ದ ಬೈಕ್ ಮತ್ತು ಕಾರಿಗೆ ಹರಡಿ ಸ್ಫೋಟಗೊಂಡ ಬಳಿಕ ಅಗ್ನಿ ಜ್ವಾಲೆ ಮನೆಯ ಹಾಲ್‌ಗೆ ಚಾಚಿದೆ. ನೋಡ ನೋಡುತ್ತಿದ್ದಂತೆಯೇ ಬೆಂಕಿ ಕೆನ್ನಾಲಿಗೆ ಮನೆಯ ಮೊದಲ ಮಹಡಿವರೆಗೂ ಹರಡಿದೆ.

ಸ್ಥಳೀಯ ನಿವಾಸಿಗಳು ನೀರು ಹಾಕಿ ಬೆಂಕಿ ಆರಿಸಲೆತ್ನಿಸಿದರಾದರೂ, ಪ್ರಯೋಜನವಾಗಲಿಲ್ಲ. ಅಷ್ಟರಲ್ಲಿ ಅಗ್ನಿ ಶಾಮಕ ಠಾಣೆ ಅಧಿಕಾರಿಗಳು, ಸಿಬ್ಬಂದಿ ಧಾವಿಸಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಮೇಟಗಳ್ಳಿ ಠಾಣೆ ಪೊಲೀಸರೂ ಘಟನಾ ಸ್ಥಳಕ್ಕೆ ಧಾವಿಸಿ ಮಹಜರು ನಡೆಸುವ ವೇಳೆ ಮನೆಯ ನೆಲಮಹಡಿಯ ಕಿಟಕಿ, ಬಾಗಿಲು, ಪೀಠೋಪಕರಣ ಸಂಪೂರ್ಣ ಸುಟ್ಟು ಹೋಗಿರುವುದು ತಿಳಿಯಿತು. ಒಂದು ವೇಳೆ ನೆರೆ ಹೊರೆಯವರು ಸಮಯಪ್ರಜ್ಞೆಯಿಂದ ನೆರವಿಗೆ ಧಾವಿಸಿ ರಕ್ಷಣೆಗೆ ಮುಂದಾಗದಿದ್ದರೆ ವಯಸ್ಸಾದ ಗುಂಡಪ್ಪಗೌಡರು ಮತ್ತು ಅವರ ಪತ್ನಿ ನಾಗಮ್ಮ, ಕುಟುಂಬದವರು ಅಪಾಯಕ್ಕೆ ಸಿಲುಕುತ್ತಿದ್ದರು.

ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಮೊದಲು ಬೆಂಕಿ ಕಾಣಿಸಿಕೊಂಡು, ನಂತರ ಪೆಟ್ರೋಲ್ ತುಂಬಿದ್ದ ಬೈಕ್‌ಗೆ ಹರಡಿ ಅದು ಸ್ಫೋಟಗೊಂಡ ನಂತರ ಡೀಸೆಲ್ ವಾಹನಕ್ಕೆ ಹರಡಿರಬಹುದೆಂದು ಪ್ರತ್ಯಕ್ಷದರ್ಶಿಗಳು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಘಟನೆಯಿಂದ 90 ವರ್ಷದ ಗುಂಡಪ್ಪಗೌಡರು, 85 ವರ್ಷದ ಅವರ ಪತ್ನಿ ಹಾಗೂ ಕುಟುಂಬದವರು ದಿಗ್ಭ್ರಾಂತರಾಗಿದ್ದಾರೆ. ನಂತರ ಅವರನ್ನು ಸಂತೈಸಿ, ಕುಂಬಾರಕೊಪ್ಪಲಿನಲ್ಲೇ ಇರುವ ಅವರ ಮತ್ತೊಂದು ಮನೆಗೆ ಸ್ಥಳಾಂತರಿಸಿ, ಬೆಂಕಿ ನಂದಿಸುವ ಕಾರ್ಯಾಚರಣೆಗೆ ಅಗ್ನಿಶಾಮಕ ದಳ ಮತ್ತು ಪೊಲೀಸರಿಗೆ ಗ್ರಾಮಸ್ಥರು ನೆರವಾದರು. ಪ್ರಕರಣ ದಾಖಲಿಸಿಕೊಂಡಿರುವ ಮೇಟಗಳ್ಳಿ ಠಾಣೆ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿರಬಹುದೆಂದು ಶಂಕಿಸಲಾಗಿದೆಯಾದರೂ, ತನಿಖೆಯಿಂದ ವಾಸ್ತವ ಕಾರಣ ಇನ್ನಷ್ಟೇ ತಿಳಿಯಬೇಕಾಗಿದೆ.

ತಮ್ಮವರಿಗೇ ಕಾಂಗ್ರೆಸ್ ಟಿಕೆಟ್

ಪಾಟೀಲ್, ಉಡುಪಿ–ಚಿಕ್ಕಮಗಳೂರಿನಿಂದ ಮಾಜಿ ಸಚಿವ ಜಯಪ್ರಕಾಶ್ ಹೆಗ್ಗಡೆ, ಕೊಪ್ಪಳದಿಂದ ರಾಜಶೇಖರ್ ಹಿಟ್ನಾಳ್ ಅವರಿಗೆ ಟಿಕೆಟ್ ದೊರೆತಿದೆ. ಚಿತ್ರದುರ್ಗದಿಂದ ಚಂದ್ರಪ್ಪ, ಹುಬ್ಬಳ್ಳಿ–ಧಾರವಾಡದಿಂದ ವಿನೋದ್ ಅಸುಟಿ, ರಾಯಚೂರಿನಿಂದ ಕುಮಾರ್ ನಾಯ್ಕ್ ಕಣಕ್ಕಿಳಿಯಲಿದ್ದಾರೆ. ಉಳಿದಂತೆ ಕ್ಷೇತ್ರಗಳಾದ ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ನಾಲ್ಕು ಕ್ಷೇತ್ರಗಳ ಆಯ್ಕೆ ಕಗ್ಗಂಟಾಗಿದೆ.

ನಾಳೆ ಅಭ್ಯರ್ಥಿ ಘೋಷಣೆ

ದೆಹಲಿಗೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಯಡಿಯೂರಪ್ಪ, ಬಾಕಿ ಇರುವ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಶುಕ್ರವಾರ ಹೊರಬೀಳಲಿದೆ ಎಂದರು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರೊಂದಿಗೆ ಚರ್ಚಿಸಿ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲಾಗುವುದು.

ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ನಮ್ಮಲ್ಲಿ ಗೊಂದಲವಿಲ್ಲ, ಪಟ್ಟಿ ಹೊರ ಬಂದ ನಂತರ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಮಾಡಲಾಗುವುದು. ಆಡಳಿತಾರೂಢ ಕಾಂಗ್ರೆಸ್‌ಗೆ ಕರ್ನಾಟಕದಲ್ಲಿ ಸಮರ್ಥ ಅಭ್ಯರ್ಥಿಗಳು ದೊರೆಯದೆ, ನಮ್ಮಲ್ಲಿರುವ ಕೆಲವು ಅಸಮಾಧಾನಿತರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ ಎಂದು ದೂರಿದರು. ಅಂತಹವರು ಪಕ್ಷ ಬಿಟ್ಟು ಹೋದರೆ ಏನು ಮಾಡಲು ಸಾಧ್ಯ ಎಂದು ಪ್ರಶ್ನಿಸಿದರು. ಜೆಡಿಎಸ್ ಮೈತ್ರಿ ಮತ್ತಷ್ಟು ಗಟ್ಟಿಯಾಗಿದೆ ಎಂದು ಈಗಾಗಲೇ ಕುಮಾರಸ್ವಾಮಿ ಅವರೇ ಹೇಳಿಕೆ ನೀಡಿದ್ದಾರೆ, ಮುಂದೆ ಜಂಟಿಯಾಗಿ ಹೋರಾಟ ನಡೆಸುತ್ತೇವೆ ಎಂದರು.

ಚುನಾವಣೆ; ನಾಮಪತ್ರ ಸಲ್ಲಿಕೆ ಆರಂಭ

ತಮಿಳುನಾಡಿನ ಎಲ್ಲಾ 39 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಅಂತೆಯೇ ರಾಜಸ್ತಾನದ 12 ಲೋಕಸಭಾ ಕ್ಷೇತ್ರ, ಉತ್ತರ ಪ್ರದೇಶದ 8 ಕ್ಷೇತ್ರ, ಮಧ್ಯ ಪ್ರದೇಶದ 6 ಕ್ಷೇತ್ರ, ಉತ್ತರಾಖಂಡ ಮತ್ತು ಮಹಾರಾಷ್ಟ್ರ, ಅಸ್ಸಾಂ ತಲಾ 5 ಕ್ಷೇತ್ರ, ಬಿಹಾರ 4 ಕ್ಷೇತ್ರ, ಪಶ್ಚಿಮ ಬಂಗಾಳ 3 ಕ್ಷೇತ್ರ, ಮಣಿಪುರ, ಅರುಣಾಚಲ ಪ್ರದೇಶ, ಮೇಘಾಲಯ ತಲಾ 2 ಕ್ಷೇತ್ರ, ಪುದುಚೆರಿ, ಅರುಣಾಚಲ ಪ್ರದೇಶ, ಛತ್ತೀಸ್ ಘಡ, ಜಮ್ಮು ಕಾಶ್ಮೀರ, ಲಡಾಕ್, ಲಕ್ಷದೀಪ, ಮಿಜೋರಾಮ್, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರ ಲೋಕಸಭೆಯ ತಲಾ 1 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ.

ಮೈಸೂರಲ್ಲಿ ಮತಯಂತ್ರ ವಿಂಗಡಣೆ

ಎಂದು ಖಚಿತಪಡಿಸಿಕೊಳ್ಳಲಾಯಿತು. ನಂತರ ಆಯಾ ತಾಲೂಕಿಗೆ ಕೊಂಡೊಯ್ಯಲು ಒಂದೆಡೆ ಪ್ರತ್ಯೇಕಿಸಿಡಲಾಯಿತು. ಮಧ್ಯಾಹ್ನ ಆರಂಭವಾದ ಪ್ರತ್ಯೇಕಿಸುವ ಕಾರ್ಯ, ಸಂಜೆ ವೇಳೆಗೆ ಪೂರ್ಣಗೊಂಡಿತು. ಆ ಬಳಿಕ ತಾಲೂಕುವಾರು ಕೊಂಡೊಯ್ಯಬೇಕಾದ ಮತಯಂತ್ರಗಳನ್ನು ಒಂದೆಡೆ ಜೋಡಿಸಲಾಯಿತು. ಪ್ರತ್ಯೇಕಿಸಿದ ಮತಯಂತ್ರಗಳನ್ನು ತಾಲೂಕು ಕೇಂದ್ರಗಳಲ್ಲಿ ತೆರೆದಿರುವ ಮಸ್ಟರಿಂಗ್ ಕೇಂದ್ರಕ್ಕೆ ಇಂದು ರಾತ್ರಿ ಇಲ್ಲವೆ ನಾಳೆ(ಮಾ.21) ಬೆಳಗ್ಗೆ ಬಿಗಿ ಭದ್ರತೆಯಲ್ಲಿ ರವಾನಿಸಲಾಗುತ್ತದೆ.

ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ ಒಟ್ಟು 2915 ಮತಗಟ್ಟೆ ಹಾಗೂ 10 ಆಕ್ಸಿಲರಿ ಮತಗಟ್ಟೆಗಳಿವೆ. ಅವುಗಳಲ್ಲಿ ಪಿರಿಯಾಪಟ್ಟಣದಲ್ಲಿ 235, ಕೆ.ಆರ್.ನಗರ ತಾಲೂಕಲ್ಲಿ 252, ಹುಣಸೂರು ತಾಲೂಕಲ್ಲಿ 274, ಹೆಚ್.ಡಿ.ಕೋಟೆ ತಾಲೂಕಲ್ಲಿ 282, ನಂಜನಗೂಡು ತಾಲೂಕಲ್ಲಿ 246, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 2 ಆಕ್ಸಿಲರಿ, 341 ಮತಗಟ್ಟೆ ಸೇರಿದಂತೆ 343, ಕೃಷ್ಣರಾಜ ಕ್ಷೇತ್ರದಲ್ಲಿ 265, ಚಾಮರಾಜ ಕ್ಷೇತ್ರದಲ್ಲಿ 248, ನರಸಿಂಹರಾಜ ಕ್ಷೇತ್ರದಲ್ಲಿ 8 ಆಕ್ಸಿಲರಿ, 283 ಮಗಟ್ಟೆ ಸೇರಿದಂತೆ 291 ಹಾಗೂ ವರುಣಕ್ಷೇತ್ರದಲ್ಲಿ 261 ಹಾಗೂ ಟಿ.ನರಸೀಪುರ ತಾಲೂಕಲ್ಲಿ 228 ಮತಗಟ್ಟೆಗಳಿವೆ.

ಈ ಎಲ್ಲಾ ಮತಗಟ್ಟೆಗಳಿಗೆ ಮೈಸೂರಿನಿಂದಲೇ ಮತಯಂತ್ರ ಪೂರೈಸಲಾಗುತ್ತದೆ. ಅವುಗಳಲ್ಲಿ ಕೆ.ಆರ್.ನಗರ ತಾಲೂಕು ಮಂಡ್ಯ ಕ್ಷೇತ್ರಕ್ಕೂ, ಹೆಚ್.ಡಿ.ಕೋಟೆ, ನಂಜನಗೂಡು, ಟಿ.ನರಸೀಪುರ, ವರುಣ ಕ್ಷೇತ್ರ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಬರುತ್ತದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಮೈಸೂರು ಜಿಲ್ಲೆಯ 5 ವಿಧಾನಸಭಾ ಕ್ಷೇತ್ರದೊಂದಿಗೆ ಮಡಿಕೇರಿ ಎರಡು ಕ್ಷೇತ್ರವಾದ ಮಡಿಕೇರಿ ಹಾಗೂ ವಿರಾಜಪೇಟೆ ಕ್ಷೇತ್ರ ಸೇರುತ್ತದೆ.

ಜಿಲ್ಲಾಧಿಕಾರಿ ಭೇಟಿ: ಮತಯಂತ್ರ ವಿಂಗಡಣಾ ಕಾರ್ಯ ಆರಂಭಕ್ಕೂ ಮುನ್ನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ವೇರ್‌ಹೌಸ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಮತಯಂತ್ರಗಳ ಉಸ್ತುವಾರಿ ಹಾಗೂ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಶಿವರಾಜ್, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್, ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಉತ್ತನಹಳ್ಳಿ ಶಿವಣ್ಣ, ಬಿಜೆಪಿ ಪ್ರತಿನಿಧಿ ಗೋಕುಲ್ ಗೋವರ್ಧನ್, ಜೆಡಿಎಸ್ ಪ್ರತಿನಿಧಿಯಾಗಿ ಬೋರೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಶೇ.75ಕ್ಕಿಂತಲೂ ಹೆಚ್ಚು ಮತದಾನ ಆಗಬೇಕೆಂಬ ಗುರಿ

ಆಸೆ–ಆಮಿಷಗಳಿಗೆ ಒಳಗಾಗದೇ ನೈತಿಕ ಮತದಾನ ಮಾಡಿ

ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮನವಿ

ಮೈಸೂರು, ಮಾ.20(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಏ.26ರಂದು ನಡೆಯುವ ಚುನಾವಣೆಯಲ್ಲಿ ಪ್ರತಿಯೊಬ್ಬ ಮತದಾರರು ತಪ್ಪದೇ ನೈತಿಕ ಮತದಾನ ಮಾಡಬೇಕು. ಯಾವುದೇ ಆಸೆ–ಆಮಿಷಗಳಿಗೆ ಒಳಗಾಗಬಾರದೆಂದು ಕೋರಿದ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಈ ಬಾರಿ ಕ್ಷೇತ್ರದಲ್ಲಿ ಶೇ.75ಕ್ಕಿಂತಲೂ ಹೆಚ್ಚು ಮತದಾನ ಆಗಬೇಕೆಂಬ ನಿಟ್ಟಿನಲ್ಲಿ ಜಾಗೃತಿ ಮೂಡಿಸಲಾಗುವುದು ಎಂದು ತಿಳಿಸಿದರು.

ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಮತ್ತು ಮೈಸೂರು ಮಹಾನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಲೋಕಸಭಾ ಚುನಾವಣೆ–2024ರ ಮತದಾನ ಜಾಗೃತಿಯ ಮೊದಲ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೈಸೂರು–ಕೊಡಗು ಕ್ಷೇತ್ರದಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಶೇ.70.50ರಷ್ಟು ಮತದಾನ ಆಗಿದೆ. ಈ ಬಾರಿ ಶೇ.75ಕ್ಕಿಂತಲೂ ಹೆಚ್ಚು ಮತದಾನ ಮಾಡಿಸಬೇಕೆಂಬ ಗುರಿ ಹೊಂದಿದ್ದೇವೆ ಎಂದು ಹೇಳಿದರು.



ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಬುಧವಾರ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಲೋಕಸಭಾ ಚುನಾವಣೆಗೆ ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಮತದಾರರ ಪಟ್ಟಿ, ಮತಗಟ್ಟೆಗಳು ಸಿದ್ಧಗೊಂಡಿವೆ. ಇವಿಎಂಗಳನ್ನು ಕೂಡ ಇಂದು ಫಸ್ಟ್ ರ‍್ಯಾಂಡೊಮೇಜೆಷನ್ ಮಾಡಲಾಗಿದೆ. ಮತದಾನದ ದಿನಾಂಕವನ್ನು ಸಾರ್ವಜನಿಕರಿಗೆ ತಿಳಿಸಿ, ಎಲ್ಲರೂ ಮತದಾನವೆಂಬ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಬೇಕೆಂದು ಜಾಗೃತಿ ಮೂಡಿಸಲಾಗುತ್ತಿದೆ. ವಿಶೇಷವಾಗಿ ನೈತಿಕ ಮತದಾನ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಯಾರೂ ಯಾವುದೇ ರೀತಿಯ ಆಸೆ ಆಮಿಷಗಳಿಗೆ ಒಳಗಾಗದೇ ತಮ್ಮ ಹಕ್ಕು ಚಲಾವಣೆ ಮಾಡಲು ಮತಗಟ್ಟೆಗಳಿಗೆ ಬರಬೇಕು ಎಂದು ಕೋರಿದರು.

ಈ ಹಿಂದೆ ಕಡಿಮೆ ಪ್ರಮಾಣದ ಮತದಾನ ಆಗಿರುವ ಮತಗಟ್ಟೆಗಳನ್ನು ಗುರುತಿಸಿ ಆ ವ್ಯಾಪ್ತಿಯಲ್ಲಿ ಸ್ವೀಪ್ ಸಮಿತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಹೆಚ್ಚು ನಡೆಸಲು ಒತ್ತು ನೀಡಲಾಗುವುದು. ಈ ಸಂಬಂಧ ರೂಪುರೇಷೆ ಸಿದ್ಧಪಡಿಸಿಕೊಂಡಿದ್ದೇವೆ. ಜನರನ್ನು ಆಕರ್ಷಣೆ ಮಾಡುವ ಸಲುವಾಗಿ ಇಂದಿಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಪೊಲೀಸ್ ಬ್ಯಾಂಡ್ ತಂಡದಿಂದ ಸಂಗೀತ ಕಾರ್ಯಕ್ರಮ, ಯದುಕುಮಾರ್ ಮತ್ತು ತಂಡದಿಂದ ಸ್ಯಾಕ್ಸೋಫೋನ್ ಕಾರ್ಯಕ್ರಮ ನಡೆಯಿತು. ಅಲ್ಲದೆ, ಪೋಸ್ಟರ್‌ಗಳು ಮತ್ತು ಫಲಕಗಳನ್ನು ಪ್ರದರ್ಶಿಸಿ ಮತದಾನದ ಮಹತ್ವ ಸಾರಲಾಯಿತು. ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು, ಡಿಸಿಪಿ ಮುತ್ತುರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಸೇರಿದಂತೆ ಮತ್ತಿತರರ ಅಧಿಕಾರಿಗಳು ಹಾಜರಿದ್ದರು.

ಮನೆ ಮುನ್ನಡೆಸುವ ಗೃಹಿಣಿಯರೇ ಮೊದಲ ಸಾಧಕರು

ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಒಕ್ಕಲಿಗ ಲೇಡೀಸ್ ಅಸೋಸಿಯೇಷನ್ ವತಿಯಿಂದ ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು. ಅಸೋಸಿಯೇಷನ್‌ನ ಪದಾಧಿಕಾರಿಗಳು ಹಾಗೂ ಸದಸ್ಯರು ಸನ್ಮಾನಿತರೊಂದಿಗೆ ಇದ್ದಾರೆ.

ಮೈಸೂರು,ಮಾ.20(ಪಿಎಂ)– ಮನೆ ಮುನ್ನಡೆಸುವ ಗೃಹಿಣಿಯರೇ ಮೊದಲ ಸಾಧಕರು. ಅವರಿಲ್ಲದೆ, ಯಾವುದೇ ಮನೆಯ ಯಾರೂ ಸಾಧನೆಗೈಯಲು ಸಾಧ್ಯವಿಲ್ಲ ಎಂದು ಮೈಸೂರು ವಿವಿ ಕುಲಸಚಿವರಾದ ವಿ.ಆರ್.ಶೈಲಜಾ ಅಭಿಪ್ರಾಯಪಟ್ಟರು.

ಮೈಸೂರಿನ ಹುಣಸೂರು ರಸ್ತೆಯ ಹೋಟೆಲ್ ಲೀ–ರುಚಿ ಸಭಾಂಗಣದಲ್ಲಿ ಒಕ್ಕಲಿಗ ಲೇಡೀಸ್ ಅಸೋಸಿಯೇಷನ್ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕುಟುಂಬ ಪೋಷಣೆ ಮಾಡುವ ಗೃಹಿಣಿಯರಿಂದ ಮನೆಯ ಹೆಣ್ಣಾಗಲಿ ಅಥವಾ ಗಂಡಾಗಲಿ ಸಾಧನೆ ಮಾಡಲು ಸಾಧ್ಯವಾಗುತ್ತಿದೆ. ಮನೆ ಮುನ್ನಡೆಸುವ ಗೃಹಿಣಿಯರಿಲ್ಲದೆ, ಯಾವುದೇ ಮನೆಯ ಯಾರೂ ಸಾಧನೆಗೈಯಲು ಸಾಧ್ಯವಿಲ್ಲ ಎಂದು ಹೇಳಿದರು.

ನಿಮ್ಮ ಮನೋಭಾವ ಧನಾತ್ಮಕವಾಗಿ ಇದ್ದರೆ ಯಾವುದೇ ಸಾಧನೆ ಸಾಧ್ಯವಿದ್ದು, ಇಲ್ಲಿ ವಯೋಮಾನ ಎಂಬುದು ನಗಣ್ಯ. ಗೃಹಿಣಿಯರೇ ಆಗಿರಲಿ, ಮನೆಯಿಂದ ಹೊರ ಹೋಗಿ ದುಡಿಯುವ ಮಹಿಳೆಯೇ ಆಗಿರಲಿ ಎಲ್ಲರೂ ಸಾಧಕಿಯರೇ. ದೇಶದ 140 ಕೋಟಿ ಜನಸಂಖ್ಯೆಯಲ್ಲಿ 72 ಕೋಟಿಗೂ ಅಧಿಕ ಸಂಖ್ಯೆಯಲ್ಲಿ ಮಹಿಳೆಯರಿದ್ದೇವೆ ಎಂದರು.

ಆರೋಗ್ಯ ಕ್ಷೇತ್ರದಲ್ಲಿ ಶೇ.84ರಷ್ಟು ಮಹಿಳೆಯರಿದ್ದೇವೆ. ಶಾಲೆಗಳಲ್ಲಿ ಶೇ.90ಕ್ಕಿಂತಲೂ ಮಹಿಳೆಯರೇ ಶಿಕ್ಷಕರು. ಶಾಸನಸಭೆ, ಲೋಕಸಭೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಇಂದಿಗೂ ಲಭಿಸಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸುವ ಮಹಿಳೆಯರು ಕಡಿಮೆಯೇ ಇದ್ದಾರೆ. ಆರೋಗ್ಯ ಕ್ಷೇತ್ರದಲ್ಲಿಯೂ ಮಹಿಳೆಯರ ಪಾತ್ರ ದೊಡ್ಡದಿದ್ದರೂ ಆರೋಗ್ಯ ಸಂಸ್ಥೆಗಳ ಮಾಲೀಕತ್ವ ಹೊಂದಿರುವ ಮಹಿಳೆಯರು ಕಡಿಮೆಯೇ ಎಂದು ಹೇಳಿದರು.

ಸಮತೆ ಸಾಧ್ಯವಾಗಿಲ್ಲ: 100 ಮಂದಿ ಪುರುಷರ ಪೈಕಿ 74 ಮಂದಿ ನೌಕರಿಯಲ್ಲಿದ್ದರೆ, 100 ಮಹಿಳೆಯರಲ್ಲಿ 34 ಮಂದಿ ಮಾತ್ರವೇ ನೌಕರಿ ಹೊಂದಿದ್ದಾರೆ. ಸರ್ಕಾರಿ, ಖಾಸಗಿ ಅಥವಾ ಸ್ವಯಂ ಉದ್ಯೋಗದಲ್ಲೂ ಮಹಿಳೆಯರಿಗೆ ಸಮತೆ ಸಾಧ್ಯವಾಗಿಲ್ಲ. ಸರ್ಕಾರಗಳು, ಸಮಾಜ, ಕುಟುಂಬ ಈ ಎಲ್ಲದರಲ್ಲೂ ಮಹಿಳಾ ಸಮುದಾಯ ಒಳಗೊಳ್ಳಬೇಕಿದೆ. ಅದಕ್ಕಾಗಿ ಯಾರಿಗೂ ಕಾಯದೇ 'ನಿನಗೆ ನೀನೇ ಬೆಳಕು' ಎಂದು ಬುದ್ಧ ಹೇಳುವಂತೆ ನಾವು ಆತ್ಮವಿಶ್ವಾಸದಿಂದ ಮುನ್ನಡೆಯಬೇಕಾಗುತ್ತದೆ ಎಂದರು.

ಅಸಮಾನತೆಯಲ್ಲಿ ದೇಶಕ್ಕೆ 127ನೇ ಸ್ಥಾನ: 2023ರ ಜಾಗತಿಕ ಲಿಂಗ ಅಸಮಾನತೆ ಸೂಚ್ಯಂಕದಲ್ಲಿ 147 ದೇಶಗಳ ಪೈಕಿ ಭಾರತವು 127ನೇ ಸ್ಥಾನದಲ್ಲಿದೆ. ಪಕ್ಕದ ಭೂತಾನ್ 103, ಬಾಂಗ್ಲಾದೇಶ 76ನೇ ಸ್ಥಾನದಲ್ಲಿವೆ. ಅಂದರೆ ನಮ್ಮ ದೇಶದ 72 ಕೋಟಿ ಮಹಿಳೆಯರ ಸ್ಥಿತಿಗತಿ ಏನಾಗಿದೆ ಎಂದು ಅರ್ಥಮಾಡಿಕೊಳ್ಳಬೇಕು. ಒಂದಿಷ್ಟು ಕಡಿಮೆ ಪ್ರಮಾಣದಲ್ಲಿಯಾದರೂ ನಾವು ಮಹಿಳೆಯರು ಸಬಲರಾಗಿದ್ದೇವೆ. ಉಳಿದ ಮಹಿಳೆಯರನ್ನು ಮುನ್ನಡೆಸಿ ಸಬಲರಾಗಿಸುವ ಹೊಣೆಗಾರಿಕೆಯನ್ನು ನಾವು ನಿಭಾಯಿಸಬೇಕಿದೆ. ಸಮಾಜದೊಂದಿಗೆ ನಾವು ಬೆಳವಣಿಗೆ ಕಾಣುವುದೇ ನಿಜವಾದ ಅಭಿವೃದ್ಧಿ ಎಂದು ವಿ.ಆರ್.ಶೈಲಜಾ ವಿಶ್ಲೇಷಿಸಿದರು.

ಇವರೊಂದಿಗೆ ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ರೋಗಶಾಸ್ತ್ರ ಪ್ರಾಧ್ಯಾಪಕಿ ಡಾ.ಸುಚಿತ್ರಾ ಮತ್ತು ನಗರಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಹದೇಶ್ ಅವರನ್ನೂ ಸನ್ಮಾನಿಸಲಾಯಿತು. ಅಲ್ಲದೆ, ಸಂಘಟನೆ ಸದಸ್ಯೆಯರಿಗೆ ಫ್ಯಾಷನ್ ಶೋ ನಡೆಸಲಾಯಿತು. ಸಾಹಿತಿ ಜಯಪ್ಪ ಹೊನ್ನಳ್ಳಿ, ಒಕ್ಕಲಿಗ ಲೇಡೀಸ್ ಅಸೋಸಿಯೇಷನ್ ಅಧ್ಯಕ್ಷೆ ಪದ್ಮಜಾ ಶ್ರೀನಿವಾಸ್, ಗೌರವಾಧ್ಯಕ್ಷೆ ಜಯಲಕ್ಷ್ಮಿ, ಉಪಾಧ್ಯಕ್ಷೆ ನಳಿನಾ, ಕಾರ್ಯದರ್ಶಿ ಶೋಭಾ, ಖಜಾಂಚಿಗಳಾದ ಭವ್ಯ, ಸುಮಾ, ನಿರ್ದೇಶಕರಾದ ವಿಜಯಾ, ನವೀನಾ, ನಮತಾ ಮತ್ತಿತರರು ಹಾಜರಿದ್ದರು.

ಸಾಲ ಕೊಟ್ಟವನ ಚಿತ್ರಹಿಂಸೆ ತಾಳಲಾರದೆ ಬೈಕ್ ಸಮೇತ ಅಂಗಡಿ ಮಾಲೀಕ ಅಗ್ನಿಗಾಹುತಿ

ಸಾಲಿಗ್ರಾಮ ಬಳಿ ದುರಂತ



ಹುಣಸೂರು, ಮಾ.20–ಸಾಲಗಾರ ಹೀನಾ–ಮಾನವಾಗಿ ನಿಂದಿಸಿದ್ದರಿಂದ ಮನನೊಂದ ಚಿಲ್ಲರೆ ಅಂಗಡಿ ಮಾಲೀಕ ವಾಟ್ಸಾಪ್ ಸ್ಟೇಟಸ್‌ನಲ್ಲಿ ವಾಯ್ಸ್ ಮೆಸೇಜ್ ಅಪ್‌ಲೋಡ್ ಮಾಡಿ, ಬೈಕ್ ಸಮೇತ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಸಾಲಿಗ್ರಾಮ ತಾಲೂಕು ಹೊಸಕೋಟೆ ಕೊಪ್ಪಲು ಗ್ರಾಮದ ಬಳಿ ಅರಣ್ಯ ಭೂಮಿಯಲ್ಲಿ ನಡೆದಿದೆ.

ಹುಣಸೂರು ತಾಲೂಕು ಗಾವಡಗೆರೆ ಹೋಬಳಿ ಹರವೆ ಗ್ರಾಮದ ಹೆಚ್.ಸಿ.ಹರೀಶ್(40) ಆತ್ಮಹತ್ಯೆಗೆ ಶರಣಾದವನಾಗಿದ್ದು, ಈತನಿಗೆ ಕಿರುಕುಳ ನೀಡಿ ಆತ್ಮಹತ್ಯೆಗೆ ಪ್ರಚೋದಿಸಿದ ಆರೋಪದ ಮೇರೆಗೆ ಹುಣಸೂರಿನ ರವಿ ಸಾಲಿಯಾನ ಅಲಿಯಾಸ್ ಓಲೆ ರವಿ ಮತ್ತು ಈತನ ಸಹೋದರ ಚಿನ್ನು ಅಲಿಯಾಸ್ ಚಿನ್ನಸ್ವಾಮಿ ವಿರುದ್ಧ ಪ್ರಕರಣ ದಾಖಲಾಗಿದೆ.

ಸಾಲಿಗ್ರಾಮ ತಾಲೂಕು ದೊಡ್ಡಕೊಪ್ಪಲು ಗ್ರಾಮದಲ್ಲಿ ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದ ಹರೀಶ್ ತನ್ನ ವ್ಯವಹಾರಕ್ಕಾಗಿ ಓಲೆ ರವಿ ಬಳಿ ವರ್ಷದ ಹಿಂದೆ ಲಕ್ಷ ರೂ. ಸಾಲ ಪಡೆದಿದ್ದ ಎನ್ನಲಾಗಿದ್ದು, ಪ್ರತೀ ತಿಂಗಳು ಬಡ್ಡಿ ಸಮೇತ ಸ್ವಲ್ಪ ಅಸಲನ್ನೂ ಕಟ್ಟುತ್ತಿದ್ದ. ಆದರೆ, ಸಮಸ್ಯೆ ಉಂಟಾದ ಕಾರಣದಿಂದ ಕಳೆದ ಮೂರು ತಿಂಗಳಿಂದ ಓಲೆ ರವಿಗೆ ಬಡ್ಡಿ ಹಾಗೂ ಅಸಲು ಕಟ್ಟಲು ಸಾಧ್ಯವಾಗಿರಲಿಲ್ಲ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ಓಲೆ ರವಿ ಮತ್ತು ಆತನ ಸಹೋದರ ಚಿನ್ನು ಅವರುಗಳು ಹರೀಶ ಸಿಕ್ಕಿದೆಡೆಯೆಲ್ಲಾ ಅಡ್ಡಗಟ್ಟಿ ಹೀನಾಮಾನವಾಗಿ ನಿಂದಿಸುತ್ತಿದ್ದರು ಎನ್ನಲಾಗಿದೆ. ಮಾ.12ರಂದೂ ಕೂಡ ಹರೀಶನನ್ನು ಹೀನಾಮಾನವಾಗಿ ಬೈದು ಕೊಲೆ ಬೆದರಿಕೆ ಹಾಕಿದ್ದರಂತೆ. ಮಾ.19ರಂದು ಹರವೆ ಗ್ರಾಮದ ತನ್ನ ಮನೆಯಿಂದ ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್‌ನಲ್ಲಿ (ಕೆಎ 45 ಆರ್ 5023) ದೊಡ್ಡಕೊಪ್ಪಲು ಗ್ರಾಮದ ಅಂಗಡಿಗೆ ತೆರಳಿದ್ದ ಹರೀಶ್, ರಾತ್ರಿ 9 ಗಂಟೆಯಾದರೂ ಬಾರದೇ ಇದ್ದಾಗ ಆತನ ಪತ್ನಿ ಸುನೀತಾ ಅವರು ಮೊಬೈಲ್‌ಗೆ ಕರೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಓಲೆ ರವಿ ಮತ್ತು ಆತನ ಕಡೆಯವರಿಂದ ನನಗೆ ಜೀವನ ಸಾಕಾಗಿದೆ. ಬದುಕುವುದಿಲ್ಲ ಎಂದು ಹರೀಶ್ ಪತ್ನಿಗೆ ತಿಳಿಸಿದ್ದಾನೆ. ಅಲ್ಲದೇ ಅಂದು ಆತ ಮನೆಗೂ ಹಿಂದಿರುಗಿಲ್ಲ.

ಮಾ.20ರಂದು ಬೆಳಗ್ಗೆ ಹರೀಶ್‌ನ ಸಂಬಂಧಿಕರೊಬ್ಬರು ಸುನೀತಾ ಅವರನ್ನು ಭೇಟಿ ಮಾಡಿ ನಿನ್ನ ಪತಿ ವಾಟ್ಸಾಪ್ ಸ್ಟೇಟಸ್‌ನಲ್ಲಿ ನನ್ನ ಸಾವಿಗೆ ಓಲೆ ರವಿಯೇ ಕಾರಣ ಎಂದು ವಾಯ್ಸ್ ರೆಕಾರ್ಡ್ ಅಪ್‌ಡೇಟ್ ಮಾಡಿದ್ದಾನೆ ಎಂದು ಹೇಳಿದ ಮೇರೆಗೆ ಹರೀಶ್ ಸಂಬಂಧಿಕರು ಹುಡುಕಾಟ ನಡೆಸಿದಾಗ ಹೊಸಕೋಟೆ ಕೊಪ್ಪಲು–ಮಳಲಿ ರಸ್ತೆಯಲ್ಲಿರುವ ಅರಣ್ಯ ಭೂಮಿ ಸರ್ವೆ ನಂ.202ರಲ್ಲಿ ಬೈಕ್ ಸಮೇತ ಹರೀಶ ಬೆಂಕಿ ಹಚ್ಚಿಕೊಂಡು ಸತ್ತಿರುವುದು ಕಂಡು ಬಂದಿದೆ.

ಈ ಸಂಬಂಧ ಹರೀಶ್‌ನ ಪತ್ನಿ ಸುನೀತಾ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಸಾಲಿಗ್ರಾಮ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ರಾಜಕೀಯ ಮಾಡಿದ್ರೆ ಮಂಡ್ಯದಿಂದಲೇ ಮಾಡ್ತೀನಿ: ನಡ್ಡಾ ಭೇಟಿ ನಂತರ ಸಂಸದೆ ಸುಮಲತಾ ಹೇಳಿಕೆ



ಬೆಂಗಳೂರು,ಮಾ.20 ಮಂಡ್ಯ ಕ್ಷೇತ್ರವನ್ನು ಬಿಟ್ಟು ನಾನು ಬೇರೆಲ್ಲೂ ಸ್ಪರ್ಧೆ ಮಾಡುವುದಿಲ್ಲ ಎಂದು ಮಂಡ್ಯ ಲೋಕಸಭಾ ಸದಸ್ಯೆ ಸುಮಲತಾ ಅಂಬರೀಶ್ ಸ್ಪಷ್ಟಪಡಿಸಿದ್ದಾರೆ. ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರನ್ನು ಭೇಟಿಯಾಗಿ ಚರ್ಚಿಸಿದ ನಂತರ ಬೆಂಗಳೂರಿಗೆ ಹಿಂತಿರುಗಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಮಂಡ್ಯದ ವಿಚಾರವಾಗಿ ದೆಹಲಿಯಲ್ಲಿ ಚರ್ಚೆ ಮಾಡಿದ್ದೀನಿ. ಮಂಡ್ಯ ಕ್ಷೇತ್ರದ ಅಭ್ಯರ್ಥಿ ಬಗ್ಗೆ ಇನ್ನೂ ಅಂತಿಮ ನಿರ್ಧಾರವಾಗಿಲ್ಲ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಅವರು ಸಹ 22ರವರೆಗೂ ಫೈನಲ್ ಆಗಲ್ಲ ಅಂದಿದ್ದಾರೆ. ಪ್ರಧಾನಿ ಹಾಗೂ ಗೃಹ ಸಚಿವರು ಕೂತು ಅಂತಿಮ ನಿರ್ಧಾರ ಮಾಡ್ತಾರೆ ಎಂದು ಹೇಳಿದರು.

ನಾನು ರಾಜಕೀಯ ಮಾಡಿದ್ರೆ ಮಂಡ್ಯದಿಂದಲೇ ಮಾಡ್ತೀನಿ ಅಂತ ಹೇಳಿದ್ದೆ ಈಗಲೂ ಅದನ್ನೇ ಹೇಳ್ತಿದ್ದೀನಿ. ಬೇರೆಯವರು ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ ಅಂತ ಹೇಳ್ತಿದ್ದಾರೆ. ಪ್ರಧಾನಿಯವರೇ ಕರೆಮಾಡಿ ನನ್ನನ್ನು ಕರೆಸಿ ಮಾತನಾಡಿ ಅಂತ ಹೇಳಿದ್ರು. ಹೀಗಾಗಿ ನನ್ನನ್ನು ಕರೆಸಿದ್ದಾಗಿ ನಡ್ಡಾ ಅವರು ಹೇಳಿದ್ದಾರೆ ಎಂದರು.

ಪಕ್ಷದಲ್ಲಿ ತುಂಬಾ ಗೌರವವಿದೆ: ಪಕ್ಷದಲ್ಲಿ ನನ್ನ ಬಗ್ಗೆ ತುಂಬಾ ಗೌರವವಿದ್ದು, ಬಿಜೆಪಿಯಲ್ಲಿಯೇ ಇರಬೇಕು ಅಂತ ಹೇಳಿದ್ದಾರೆ. ಪಾಸಿಟಿವ್ ಆಗಿ ರಿಸಲ್ಟ್ ಬರುತ್ತೆ ಅನ್ನೋ ವಿಶ್ವಾಸವಿದೆ. ವರಿಷ್ಠರು ಯಾವ ತೀರ್ಮಾನ ಮಾಡ್ತಾರೆ ಕಾದು ನೋಡೋಣ ಎಂದರು.

ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್‌ಗೆ ಮಂಡ್ಯವನ್ನು ಬಿಟ್ಟುಕೊಡಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ. ಮಂಡ್ಯ ತಮಗೆ ಸಿಗಲಿದೆ ಎಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಅಲ್ಲದೇ, ಅಲ್ಲಿಂದಲೇ ಸ್ಪರ್ಧಿಸುವ ಸುಳಿವನ್ನೂ ಕುಮಾರಸ್ವಾಮಿ ನೀಡಿದ್ದಾರೆ.

ಈ ಬೆಳವಣಿಗೆಗಳ ಮಧ್ಯೆಯೇ, ಸುಮಲತಾ ನೀಡಿರುವ ಹೇಳಿಕೆ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಮಹಿಳೆಯರ ಸಬಲೀಕರಣಕ್ಕೆ ಬಿಜೆಪಿ ಹೆಚ್ಚು ಒತ್ತು

ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಏರ್ಪಡಿಸಿದ್ದ 'ನಾರಿ ಶಕ್ತಿ' ಕಾರ್ಯಕ್ರಮದಲ್ಲಿ ರೇಣುಕಾ ರಾಜ್ ವಿವರಣೆ



ಮೈಸೂರು,ಮಾ.20–ದೇಶದ ಅಖಂಡತೆ ಮತ್ತು ಅಭಿವೃದ್ಧಿಗೆ ಬಿಜೆಪಿ ಒತ್ತು ನೀಡುತ್ತದೆ. ಕಾಂಗ್ರೆಸ್ ಪಕ್ಷದಂತೆ ಪುಕ್ಕಟ್ಟೆ ಭಾಗ್ಯಗಳನ್ನು ನೀಡಿ, ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡುವುದಕ್ಕೆ ಹೋಗುವುದಿಲ್ಲ ಎಂದು ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನದಲ್ಲಿ ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಏರ್ಪಡಿಸಲಾಗಿದ್ದ 'ನಾರಿ ಶಕ್ತಿ' ಕಾರ್ಯಕ್ರಮದಲ್ಲಿ ಶಕ್ತಿ ದೇವಿ ಪೂಜೆ ಮಾಡಿ, ನಾವು ಶಕ್ತಿ ಆರಾಧಕರು, ಮತ್ತೊಮ್ಮೆ ದೇಶಕ್ಕೆ ಪ್ರಧಾನಿ ಮೋದಿ, ಘೋಷಣೆ ಕೂಗಿದರು.

ಬಳಿಕ ಮಾತನಾಡಿದ ರೇಣುಕಾ ರಾಜ್, ಬಿಜೆಪಿಯು ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದೆ. ಚುನಾವಣೆಯಲ್ಲಿ ಸಾಮಾನ್ಯ ಮಹಿಳೆಯರಿಗೂ ಸ್ಪರ್ಧಿಸುವ ಅವಕಾಶ ಕಲ್ಪಿಸಿದೆ. ಪಕ್ಷದ ಹುದ್ದೆಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿದೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸುಳ್ಳು ಭರವಸೆಗಳಿಗೆ ಜನರು ಮಾರು ಹೋಗದಂತೆ ಜಾಗೃತಿ ಮೂಡಿಸಬೇಕಿದೆ. ದೇಶದ ಸುಭದ್ರತೆ, ರಕ್ಷಣೆ ಮತ್ತು ಆರ್ಥಿಕ ಬೆಳವಣಿಗೆಗೆ ಬಿಜೆಪಿಗೆ ಮತ ನೀಡುವಂತೆ ಜನರ ಮನವೊಲಿಸಬೇಕಿದೆ ಎಂದರು.

'ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಯದುವೀರ್ ಶ್ರೀ ಕೃಷ್ಣದತ್ತ ಚಾಮರಾಜ ಒಡೆಯರಿಗೆ ಸ್ಪರ್ಧಿಸಲು ಅವಕಾಶ ದೊರೆತಿದ್ದು, ಸಂತಸದ ವಿಚಾರ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಎರಡು ಲಕ್ಷಕ್ಕೂ ಅಧಿಕ ಮತಗಳಿಂದ ಅವರನ್ನು ನಾವು ಗೆಲ್ಲಿಸಬೇಕಿದೆ ಎಂದರು.

ನರೇಂದ್ರ ಮೋದಿ ಅವರು ಮುದ್ರಾ ಯೋಜನೆ, ಜನಧನ ಯೋಜನೆ, ಮಗಳನ್ನು ರಕ್ಷಿಸಿ ಮಗಳನ್ನು ಓದಿಸಿ, ಸ್ವಚ್ಛ ಭಾರತ, ಉಜ್ವಲ ಯೋಜನೆ ಹೀಗೆ ಹಲ ವಾರು ಯೋಜನೆಗಳ ಮೂಲಕ ಮಹಿಳೆಯರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಿದ್ದಾರೆ ಹಾಗೂ ಲೋಕಸಭೆ, ವಿಧಾನಸಭೆಗಳಲ್ಲಿ ಶೇ.33ರಷ್ಟು ಮೀಸಲಾತಿ ನೀಡಿ, ಕಾನೂನು ರೂಪಿಸುವಲ್ಲಿ ಮಹಿಳೆಯರಿಗೆ ಅವಕಾಶ ಕಲ್ಪಿಸಿದ್ದಾರೆ ಎಂದು ಹೇಳಿದರು.

ಈ ವೇಳೆ ಮಾಜಿ ಉಪ ಮೇಯರ್ ಡಾ.ರೂಪ, ನಗರಪಾಲಿಕೆ ಮಾಜಿ ಸದಸ್ಯೆ ಲಕ್ಷ್ಮಿ ಕಿರಣ್‌ಗೌಡ, ನಗರ ಪ್ರಧಾನ ಕಾರ್ಯದರ್ಶಿಗಳಾದ ಚಂದ್ರಕಲಾ, ಮಮತಾ ಶೆಟ್ಟಿ, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷೆ ಲಕ್ಷ್ಮಿ, ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷೆ ಸರ್ವಮಂಗಳ, ಚಾಮುಂಡೇಶ್ವರಿ ಗ್ರಾಮಾಂತರ ಮಮತಾ ಗೌಡ, ನರಸಿಂಹರಾಜ ಕ್ಷೇತ್ರದ ಮಾಲಿನಿ ಪಾಲಾಕ್ಷ ಹಾಗೂ ನೂರಾರು ಬಿಜೆಪಿ ಮಹಿಳಾ ಕಾರ್ಯಕರ್ತರು ಹಾಜರಿದ್ದರು.



ಮೈಸೂರು-ಕೊಡಗು ಹಾಲಿ ಸಂಸದ ಪ್ರತಾಪ್ ಸಿಂಹ ಬುಧವಾರ ಬೆಂಗಳೂರಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಹಿರಿಯ ಮುಖಂಡರಾದ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು. 2014ರಲ್ಲಿ ಅವರೊಂದಿಗೆ ಸಂಸತ್ತಿಗೆ ಕಾಲಿಟ್ಟಿದ್ದೆ. ಅಂದಿನಿಂದ ಇಲ್ಲಿಯವರೆಗೆ ಬಹಳ ಪ್ರೀತಿಯಿಂದ ನನ್ನನ್ನು ನೋಡಿಕೊಂಡರು. 2016ರಲ್ಲಿ ಅವರು ಪಕ್ಷದ ರಾಜ್ಯಾಧ್ಯಕ್ಷರಾದಾಗ ನನ್ನನ್ನು ಯುವ ಮೋರ್ಚಾ ಅಧ್ಯಕ್ಷರನ್ನಾಗಿ ಮಾಡಿ ಪ್ರೋತ್ಸಾಯಿಸಿ, ಬೆಳೆಸಿದ್ದರು ಎಂದು ಇದೇ ವೇಳೆ ಪ್ರತಾಪ್ ಸಿಂಹ ಸ್ಮರಿಸಿಕೊಂಡಿದ್ದಾರೆ.

ಲೋಕಸಭಾ ಚುನಾವಣೆ-2024

ಸಾಮಾಜಿಕ ಜಾಲತಾಣ; ಖರ್ಚು-ವೆಚ್ಚದ ಮೇಲೆ ನಿಗಾ


ಮೈಸೂರು, ಮಾ.20(ಎಂಟಿವೈ)- ಲೋಕಸಭಾ ಚುನಾವಣಾ ಪ್ರಚಾರದ ವೇಳೆ ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಪಕ್ಷಗಳು ನೀತಿ ಸಂಹಿತೆ ಉಲ್ಲಂಘಿಸುವುದರ ಪತ್ತೆ ಹಾಗೂ ಚುನಾವಣಾ ಖರ್ಚು-ವೆಚ್ಚದ ಮೇಲೆ ಕಣ್ಣಿಡಲು ಚುನಾವಣಾ ಆಯೋಗ ಸೋಶಿಯಲ್ ಮೀಡಿಯಾ ಘಟಕ ಹಾಗೂ ಚುನಾವಣಾ ವೆಚ್ಚದ ನಿರ್ವಹಣಾ ಕೋಶ ರಚಿಸಿದ್ದು, ಈ ಎರಡೂ ತಂಡಗಳು ಕಾರ್ಯಾರಂಭ ಮಾಡಿದೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಡಿಸಿ ಕಚೇರಿ ಆವರಣದಲ್ಲಿ ಪ್ರತ್ಯೇಕ ಕೊಠಡಿಯಲ್ಲಿ ಸೋಶಿಯಲ್ ಮೀಡಿಯಾ ಘಟಕ ಹಾಗೂ ಚುನಾವಣಾ ವೆಚ್ಚದ ನಿರ್ವಹಣಾ ಕೋಶ ಕಾರ್ಯ ನಿರ್ವಹಿಸುತ್ತಿವೆ. ಪ್ರತಿದಿನ ಈ ಎರಡೂ ತಂಡ ಪ್ರಮುಖ ರಾಜಕೀಯ ಪಕ್ಷಗಳ ನಿತ್ಯದ ಚಟುವಟಿಕೆಗಳ ಮೇಲೆ ನಿಗಾ ಇಟ್ಟು, ನೀತಿ ಸಂಹಿತೆ ಉಲ್ಲಂಘನೆ ಬಗ್ಗೆ ಪರಿಶೀಲಿಸಿ, ಜಿಲ್ಲಾ ಚುನಾವಣಾಧಿಕಾರಿಗಳಿಗೆ ವರದಿ ಸಲ್ಲಿಸುತ್ತಿವೆ.

ಸೋಶಿಯಲ್ ಮೀಡಿಯಾ ತಂಡ: ಸಾಮಾಜಿಕ ಜಾಲತಾಣಗಳಲ್ಲಿ ಚುನಾವಣೆ ವೇಳೆ ನೀತಿ ಸಂಹಿತೆ ಉಲ್ಲಂಘಿಸಿ ಸಂದೇಶ ರವಾನಿಸುವ ರಾಜಕೀಯ ಪಕ್ಷಗಳ ಮೇಲೆ ಹದ್ದಿನಕಣ್ಣಿಡಲು 10 ಮಂದಿ ಅಧಿಕಾರಿಗಳುಳ್ಳ ಸೋಶಿಯಲ್ ಮೀಡಿಯಾ ತಂಡ ರಚಿಸಲಾಗಿದೆ. ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಂಶೋಧನಾಧಿಕಾರಿ ಹೆಚ್.ಎಸ್.ಬಿಂದ್ಯಾ ನೋಡಲ್ ಅಧಿಕಾರಿಯಾಗಿ ನಿಯೋಜಿಸಿದ್ದು, ಸದಸ್ಯರಾಗಿ ಎಂ.ಪ್ರದೀಪ್, ವೀರಬಸಪ್ಪ, ಜಗದೀಶ್ ಕೋರಿ, ಯಶ್ವಂತ್, ಜಯಕುಮಾರ್, ಎಸ್.ಮಧುಸೂದನ್, ವೆಂಕಟೇಶ್ ಶೆಟ್ಟಿ, ಪ್ರಮೋದ್ ಹಾಗೂ ವೆಂಕಟೇಶ್ ಪ್ರಸಾದ್ ಕಾರ್ಯ ನಿರ್ವಹಿಸಲಿದ್ದಾರೆ. ನಾಮಪತ್ರ ಸಲ್ಲಿಕೆ ಇನ್ನೂ ಆರಂಭವಾಗಿಲ್ಲದ ಕಾರಣ, ಕೇವಲ ರಾಜಕೀಯ ಪಕ್ಷಗಳ ಸಾಮಾಜಿಕ ಜಾಲತಾಣದ ಖಾತೆಯನ್ನು ಗಮನಿಸುತ್ತಿದ್ದಾರೆ. ನಾಮಪತ್ರ ಸಲ್ಲಿಕೆ ಬಳಿಕ ಅಭ್ಯರ್ಥಿಗಳ ಸಾಮಾಜಿಕ ಜಾಲತಾಣಗಳನ್ನು ಜಾಲಾಡಲಿದ್ದಾರೆ.

ಚುನಾವಣಾ ವೆಚ್ಚ ನಿರ್ವಹಣಾ ಕೋಶ: ಚುನಾವಣೆಯ ವಿವಿಧ ಸಭೆ, ಸಮಾರಂಭ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಮಾಡುವ ಖರ್ಚು-ವೆಚ್ಚದ ಪಟ್ಟಿ ತಯಾರಿಕೆಯಲ್ಲಿ 'ಚುನಾವಣಾ ವೆಚ್ಚದ ನಿರ್ವಹಣಾ ಕೋಶ'ದ ಅಧಿಕಾರಿಗಳ ತಂಡ ಕೂಲಂಕಷವಾಗಿ ಪರಿಶೀಲಿಸುತ್ತಿದೆ. ಪ್ರತಿದಿನ ನಡೆಸುವ ಕಾರ್ಯಕರ್ತರ, ಮುಖಂಡರ ಸಭೆಗೆ ಆಗುವ ವೆಚ್ಚಗಳ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ಚುನಾವಣಾ ಆಯೋಗಕ್ಕೆ ನೀಡುತ್ತಿದೆ. ಫ್ಲೈಯಿಂಗ್ ಸ್ಕ್ವಾಡ್ ತಂಡ ನೀಡುವ ವಿಡಿಯೋ ದೃಶ್ಯವನ್ನು ಪರಿಶೀಲಿಸಿ ಸಮಾರಂಭದ ಖರ್ಚಿನ ವೆಚ್ಚವನ್ನು ಅಂದಾಜಿಸಿ, ರಾಜಕೀಯ ಪಕ್ಷಗಳ, ಅಭ್ಯರ್ಥಿಗಳ ವೆಚ್ಚದ ಖಾತೆಗೆ ಸೇರಿಸಲಿದ್ದಾರೆ.





ಸೋಶಿಯಲ್ ಮೀಡಿಯಾ ತಂಡದ ಅಧಿಕಾರಿಗಳು ರಾಜಕೀಯ ಪಕ್ಷಗಳ ಸಾಮಾಜಿಕ ಜಾಲತಾಣಗಳ ಖಾತೆ ಪರಿಶೀಲಿಸುತ್ತಿರುವುದು. ಚುನಾವಣಾ ವೆಚ್ಚದ ನಿರ್ವಹಣಾ ಕೋಶದ ಅಧಿಕಾರಿಗಳು ರಾಜಕೀಯ ಪಕ್ಷಗಳ ಸಭೆ, ಸಮಾರಂಭಗಳ ಖರ್ಚಿನ ಅಂದಾಜು ವೆಚ್ಚದ ಪಟ್ಟಿ ತಯಾರಿಕೆಯಲ್ಲಿ ತೊಡಗಿರುವುದು. (ಬಲಚಿತ್ರ)

ಮೈಸೂರು-ಕೊಡಗು ಕ್ಷೇತ್ರದಲ್ಲಿ ರೈತ ಸಂಘದ ಬಡಗಲಪುರ ನಾಗೇಂದ್ರ ಸ್ಪರ್ಧೆ; ನಿರ್ಧಾರ

ಮೈಸೂರು, ಮಾ.20 (ಜಿಎ) - ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಈ ಬಾರಿಯ ಚುನಾವಣೆ ವೇಳೆ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅವರನ್ನು ಕಣಕ್ಕಿಳಿಸಲು ಸಂಘ ನಿರ್ಧರಿಸಿದೆ. ಹೀಗಾಗಿ ಕಾಂಗ್ರೆಸ್ ಪಕ್ಷವು ಇವರನ್ನು ಬೆಂಬಲಿಸಬೇಕೆಂದು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮನವಿ ಮಾಡಿದರು.



ಬಡಗಲಪುರ ನಾಗೇಂದ್ರ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತ, ದಲಿತ ಚಳುವಳಿ ಸೇರಿದಂತೆ ಸಾಮಾಜಿಕ ಚಳುವಳಿಗಳೆಲ್ಲವೂ ಸಂಘಟಿತವಾಗಿ ವಿಧಾನಸಭಾ ಚುನಾವಣೆಯಲ್ಲಿ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಲು ಕೆಲಸ ಮಾಡಿದ್ದು ಕಾಂಗ್ರೆಸ್ ಅಧಿಕಾರಕ್ಕೆ ಬರಲು ಕಾರಣವಾಗಿದೆ. ಲೋಕಸಭಾ ಚುನಾವಣೆಯಲ್ಲೂ ಚಳುವಳಿಗಳು ಆ ಪ್ರಯತ್ನ ಮುಂದುವರೆಸುತ್ತಿವೆ ಎಂದರು.

ಚಳುವಳಿಗಾರರೊಬ್ಬರಿಗೆ ಇಂಡಿಯಾ ಒಕ್ಕೂಟ ಒಂದು ಸ್ಥಾನವನ್ನು ಬಿಟ್ಟು ಕೊಟ್ಟಲ್ಲಿ ಅದು ಉತ್ತಮ ಬೆಳವಣಿಗೆಯಾಗುತ್ತದೆ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರರ ಅವರನ್ನು ಕಣಕ್ಕಿಳಿಸಲು ಚಿಂತನೆ ನಡೆಸಿದೆ. ಅವರು ಮೈಸೂರು ಜಿಲ್ಲೆಯವರಾಗಿ ವಿದ್ಯಾರ್ಥಿ ಜೀವನದಲ್ಲಿ ಜನಮುಖಿ ಚಳುವಳಿಯಲ್ಲಿ ಗುರುತಿಸಿಕೊಂಡು ವೃತ್ತಿಯಲ್ಲಿ ವಕೀಲರಾಗಿಯೂ ಹೆಸರು ಗಳಿಸಿದ್ದಾರೆ. ಜಾತ್ಯಾತೀತ ಮನೋಭಾವವುಳ್ಳ ಒಬ್ಬ ಪ್ರಭಾವಿ ಹೋರಾಟಗಾರರಾದ ಬಡಗಲಪುರ ನಾಗೇಂದ್ರ ಅವರನ್ನು ಕಾಂಗ್ರೆಸ್ ಪಕ್ಷವು ಬೆಂಬಲಿಸಿದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜಯಬೇರಿ ಸಾಧಿಸುವುದು ನಿಶ್ಚಿತ. ಇದು ಒಂದು ಹೊಸ ಮಾದರಿ ರಾಜಕಾರಣಕ್ಕೆ ನಾಂದಿಯಾಗುತ್ತದೆ. ಇತರೆ ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಖಂಡಿತ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ, ಸಚಿವ ಕೆ.ವೆಂಕಟೇಶ್ ಮತ್ತು ಕೊಡಗು ಜಿಲ್ಲೆಯ ಉಸ್ತುವಾರಿ ಸಚಿವರು ಎರಡೂ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಹಾಲಿ ಮತ್ತು ಮಾಜಿ ಶಾಸಕರು ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್, ನಾಗನಹಳ್ಳಿ ವಿಜೇಂದ್ರ, ನೇತ್ರಾವತಿ ಉಪಸ್ಥಿತರಿದ್ದರು.



ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನೂತನ ಅಧ್ಯಕ್ಷರಾಗಿ ನೇಮಕಗೊಂಡ ಮಾನಸ ಅವರನ್ನು ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ. ಮಹೇಶ ಚಿಕ್ಕಲ್ಲೂರು, ಸಂಘಟನಾ ಕಾರ್ಯದರ್ಶಿ ಮಹೇಂದ್ರ ಕಾಗಿನೆಲೆ, ಶಂಕರ್ ಅಭಿನಂದಿಸಿದರು.

ಕಿವುಡ ಕ್ರೀಡಾಪಟುಗಳಿಗೆ ವಿಮಾನಯಾನ ಭಾಗ್ಯ



ಮೈಸೂರು, ಮಾ. 20- ಪಾಟ್ನಾದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸುತ್ತಿರುವ ಮೈಸೂರಿನ ಮರ್ಸಿ ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆಯ ಇಬ್ಬರು ಚೆಸ್ ಕ್ರೀಡಾಪಟುಗಳಿಗೆ ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಹಾಗೂ ಮೈಸೂರು ಡೆಫ್ ಅಸೋಸಿಯೇಷನ್ ವತಿಯಿಂದ ವಿಮಾನಯಾನ ಟಿಕೆಟ್ ಕಲ್ಪಿಸಿ, ನೆರವು ನೀಡಲಾಗಿದೆ.

ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಜಿ ಅಧ್ಯಕ್ಷ ಲಯನ್ ಎನ್. ಸುಬ್ರಹ್ಮಣ್ಯ, ಮೈಸೂರು ಡೆಫ್ ಅಸೋಸಿಯೇಷನ್ ಸಂಸ್ಥೆಯ ಅಧ್ಯಕ್ಷ ಎಸ್. ಮೂರ್ತಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕ್ರೀಡಾಪಟುಗಳಾದ ಸಂಜಯ್ ಹಾಗೂ ಪುಷ್ಪಕ್ ಅವರಿಗೆ ವಿಮಾನಯಾನದ ಟಿಕೆಟ್‌ಗಳನ್ನು ಹಸ್ತಾಂತರಿಸಿದರು. ಲ.ಜಯ ಕುಮಾರ್, ಲ.ಮಂಜುನಾಥ್, ಲ.ಸುಬ್ಬಣ್ಣ, ಮರ್ಸಿ ಶಾಲೆಯ ಮುಖ್ಯಸ್ಥರು, ಶಿಕ್ಷಕರು ಮಕ್ಕಳು ಉಪಸ್ಥಿತರಿದ್ದರು.

ಮೈಸೂರಲ್ಲಿ ಗೃಹರಕ್ಷಕರಿಗೆ ಬುನಾದಿ ತರಬೇತಿ



ಗೃಹರಕ್ಷಕರಿಗೆ ಏರ್ಪಡಿಸಿದ್ದ ಬುನಾದಿ ತರಬೇತಿ ಶಿಬಿರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಸಿ.ಶಿವರಾಜ್ ಉದ್ಘಾಟಿಸಿದರು.

ಮೈಸೂರು, ಮಾ. 20(ಆರ್‌ಕೆ)- ಮೈಸೂರಿನ ಜ್ಯೋತಿನಗರದ ಡಿಎಆರ್ ಸಭಾಂಗಣದಲ್ಲಿ ಬುಧವಾರ ಬೆಳಗ್ಗೆ ಗೃಹರಕ್ಷಕರಿಗೆ ಬುನಾದಿ ತರಬೇತಿ ಶಿಬಿರ ಆಯೋಜಿಸಲಾಗಿತ್ತು.

ಹೆಚ್ಚುವರಿ ಜಿಲ್ಲಾಧಿಕಾರಿ ಸಿ.ಶಿವರಾಜ್ ಶಿಬಿರ ಉದ್ಘಾಟಿಸಿ ಮಾತನಾಡಿದರು. ಸೇವಾ ಸಂಸ್ಥೆಯಾಗಿರುವ ಗೃಹರಕ್ಷಕ ದಳದಲ್ಲಿ ನೋಂದಾವಣೆಯಾಗಿರುವ ಹೋಂಗಾರ್ಡ್‌ಗಳು ತರಬೇತಿ ಪಡೆದು ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಸಲಹೆ ನೀಡಿದರು.

ಇತ್ತೀಚೆಗೆ ಪೊಲೀಸ್ ಕೊರತೆಯನ್ನು ನೀಗಿಸುತ್ತಿರುವ ಗೃಹರಕ್ಷಕರು, ಸಂಚಾರ ನಿಯಂತ್ರಣ, ಕಾನೂನು-ಸುವ್ಯವಸ್ಥೆಯಂತಹ ಸಂದರ್ಭಗಳಲ್ಲಿ ಪೊಲೀಸರೊಂದಿಗೆ ಸಮಾನರಾಗಿ ಕರ್ತವ್ಯದಲ್ಲಿ ತೊಡಗಿಸಿಕೊಳ್ಳುತ್ತಿರುವುದರಿಂದ ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಲು ಸುಲಭವಾಗುತ್ತದೆ ಎಂದು ತಿಳಿಸಿದರು.

ಜಿಲ್ಲಾ ಕಮಾಂಡೆಂಟ್ ಡಾ.ಎಂ. ಕಾಂತರಾಜು, ಸಹಾಯಕ ಆಡಳಿತಾಧಿಕಾರಿ ಎಂ.ಎನ್. ವಿಶ್ವನಾಥ್, ಬೋಧಕ ಚಂದನ, ಸಹಾಯಕ ಬೋಧಕ ಮಂಜುನಾಥ್, ಕ್ಯಾಂಪ್ ಕಮಾಂಡೆಂಟ್ ಸಂಪತ್ ಕುಮಾರ್, ವಿದ್ಯಾ ಹಾಗೂ ಇತರರು ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ; ಅರ್ಥಪೂರ್ಣ ವಿಷಯಗಳ ಸಂವಾದ





ಮೈಸೂರು,ಮಾ.20-ವಿಜ್ಞಾನ ವಿಭಾಗ, ಸ್ಪರ್ಶ್, ಮಹಿಳಾ ಸಬಲೀಕರಣ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ (ಸ್ವಾಯತ್ತ) ಪೌಷ್ಟಿಕತೆ ಮತ್ತು ನಿಮ್ಮ ಯಶಸ್ಸು ಮತ್ತು ಮಹಿಳಾ ಆರೋಗ್ಯ ಮತ್ತು ಹಾರ್ಮೋನ್ ನಿಯಂತ್ರಣ ವಿಷಯಗಳನ್ನು ಕುರಿತು ಸಂವಾದಾತ್ಮಕ ಚರ್ಚೆಯನ್ನು ಆಯೋಜಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಡಾ.ಸುಷ್ಮಾ ಅಪ್ಪಯ್ಯ, ಕೌನ್ಸಿಲರ್ ಮತ್ತು Golz - ನ್ಯೂಟ್ರಿಷನ್ ಮತ್ತು ಡಯಟ್ ಸಲ್ಯೂಷನ್ಸ್, ರೂಪನಗರ, ಮೈಸೂರು. ಅಧಿವೇಶನವನ್ನು ಎರಡು ಅವಧಿಗಳಲ್ಲಿ ನಡೆಸಲಾಯಿತು. ಪ್ರಾಂಶುಪಾಲರಾದ ಡಾ.ಬಿ.ಆರ್‌ಜಯಕುಮಾರಿ, ಐಕ್ಯೂಎಸಿ ಸಂಚಾಲಕರಾದ ಶ್ರೀಮತಿ ಡಿ.ಗೀತಾ ಉಪಸ್ಥಿತಿಯಲ್ಲಿ, ಕಾರ್ಯಾಗಾರವನ್ನು ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಪ್ರಿಯಾಂಕ ಶೆಣೈ ಪ್ರಾರ್ಥನೆ ಮೂಲಕ ಪ್ರಾರಂಭಿಸಿದರು.

ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸ್ಪಂದನಾ ಸ್ವಾಗತಿಸಿದರು.

ಜೈವಿಕ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ವಿ.ರಮ್ಯ, ಸಂಪನ್ಮೂಲ ವ್ಯಕ್ತಿಗಳ ಕಿರು ಪರಿಚಯವನ್ನು ನೀಡಿದರು. ಜೈವಿಕ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಪಿ.ರಾಧಿಕಾ ಸಂಪೂರ್ಣ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ನಾಳೆಯಿಂದ 31ರವರೆಗೆ ಕಲಾತ್ಮಕ ಛಾಯಾಚಿತ್ರಗಳ ಪ್ರದರ್ಶನ

ಮೈಸೂರು, ಮಾ.20(ಜಿಎ)-ವರ್ಣಚಿತ್ರ ಹಾಗೂ ಛಾಯಾಗ್ರಹಣ ಕಲಾವಿದರಾದ ತಾವು ಕುಕ್ಕರಹಳ್ಳಿ ಕೆರೆಯೊಡನೆ ಹೊಂದಿರುವ ಭಾವನಾತ್ಮಕ ಸಂಬಂಧ ಕುರಿತಂತೆ ಸೆರೆ ಹಿಡಿದಿರುವ ಕಲಾತ್ಮಕ ಛಾಯಾಚಿತ್ರಗಳ ಪ್ರದರ್ಶನವನ್ನು ಮಾ.22ರಿಂದ 31ರವರೆಗೆ ಸರಸ್ವತಿಪುರಂನ ರಮ್ಯ ರೆಸ್ಟೋರೆಂಟ್ ಎದುರಿನ ಹೆರಿಟೇಜ್ ಹೌಸ್‌ನಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸುನಿಲ್ ರಾಜು ತಿಳಿಸಿ, ಬೆಳಗ್ಗೆ 10.30 ರಿಂದ ಸಂಜೆ 7 ಗಂಟೆ ವರೆಗೆ ಪ್ರದರ್ಶನ ಇರಲಿದ್ದು, 21 ಛಾಯಾಚಿತ್ರಗಳು ಪ್ರತಿಯೊಂದೂ ತಮ್ಮದೇ ಆದ ವಿಶೇಷತೆಯಿಂದ ಕೂಡಿದ್ದು, ಗಾಳಿ, ಸೂರ್ಯನ ಬಿಂಬ, ಪಕ್ಷಿ ಮೊದಲಾದವುಗಳೊಡನೆ ಹೊಂದಿರುವ ವ್ಯಕ್ತಿಗತ ಅನುಭವವನ್ನು ಇಲ್ಲಿ ಅನುಭವಿಸಬಹುದಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಲಾ ವಿದ ಗಿರಿ ಶಿಲ್ಪಿ ಉಪಸ್ಥಿತರಿದ್ದರು.

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಮಾ.20- 2024-25ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿ ಮೌಲಾನಾ ಆಜಾದ್ ಮಾದರಿ (ಆಂಗ್ಲ ಮಾಧ್ಯಮ) ಶಾಲೆಗೆ ಉಚಿತ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.



ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ (ಆಂಗ್ಲ ಮಾಧ್ಯಮ) ಶಾಲೆಗಳಾದ ರಾಜೇಂದ್ರನಗರದ ಕೆಸರೆಯ ಮೌಲಾನಾ ಆಜಾದ್ ಮಾದರಿ ಶಾಲೆ, ಲಷ್ಕರ್ ಮೊಹಲ್ಲಾದ ಮೌಲಾನಾ ಆಜಾದ್ ಮಾದರಿ ಶಾಲೆ, ಭರತ್‌ನಗರದ ಮೌಲಾನಾ ಆಜಾದ್ ಭವನದ ಮೌಲಾನಾ ಆಜಾದ್ ಮಾದರಿ ಶಾಲೆ, ಹುಣಸೂರು ಟೌನ್‌ನ ಬಜಾರ್ ರಸ್ತೆಯಲ್ಲಿರುವ ಮೌಲಾನಾ ಆಜಾದ್ ಮಾದರಿ ಶಾಲೆ, ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿಯ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ 6ನೇ ತರಗತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯನ್ನು ಏಪ್ರಿಲ್ 14ರೊಳಗಾಗಿ https://dom.karnataka.eov.in ಮೂಲಕ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೈಸೂರಿನ ದಂಡಿನ ಮಾರಮ್ಮನ ದೇವಸ್ಥಾನದ ಎದುರಿನ ಶೋಭಾ ಗಾರ್ಡನ್ ಹತ್ತಿರದ ಮೌಲಾನ ಆಜಾದ್ ಭವನದ ದೂ.ಸಂ: 0821-2422088, ತಾಲೂಕು ಮಾಹಿತಿ ಕೇಂದ್ರಗಳಾದ ಮೈಸೂರಿನ ದೂ.ಸಂ: 8951087207, ತಿ.ನರಸೀಪುರದ ದೂ.ಸಂ: 9845210242, ನಂಜನಗೂಡಿನ ದೂ.ಸಂ: 9743567567, ಹೆಚ್.ಡಿ. ಕೋಟೆಯ ದೂ.ಸಂ: 9663157476, ಕೆ.ಆರ್.ನಗರದ ದೂ.ಸಂ: 99863 46893, ಹುಣಸೂರಿನ ದೂ.ಸಂ: 9620750935, ಪಿರಿಯಾಪಟ್ಟಣದ ದೂ.ಸಂ: 6362661474ಗಳನ್ನು, ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ನಾಮಫಲಕ ಅಳವಡಿಕೆ: ಮಾ.31 ಅಂತಿಮ ಗಡುವು

ಮೈಸೂರು: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ದಿಮೆದಾರರು ತಮ್ಮ ಉದ್ದಿಮೆಗಳಲ್ಲಿ ಅಳವಡಿಸುವ ನಾಮಫಲಕಗಳು ಕಡ್ಡಾಯವಾಗಿ ಶೇ.60ರಷ್ಟು ಕನ್ನಡ ಭಾಷೆಯನ್ನು ನಾಮಫಲಕದ ಮೇಲ್ಭಾಗದಲ್ಲಿ ಪ್ರದರ್ಶಿಸಲು ಮಾ.31ರ ಅಂತಿಮ ಗಡುವು ನೀಡಲಾಗಿದೆ.

ಮಾ.31ರ ನಂತರ ಅಳವಡಿಸಿರುವ ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ.60ರಷ್ಟು ಪ್ರದರ್ಶಿಸದೇ ಇದ್ದಲ್ಲಿ ಪ್ರಥಮ ಹಂತದಲ್ಲಿ 5000 ರೂ, ದ್ವಿತೀಯ ಹಂತದಲ್ಲಿ 10,000 ರೂ. ಹಾಗೂ ತೃತೀಯ ಹಂತದಲ್ಲಿ ರೂ. 20,000 ದಂಡ ವಿಧಿಸಿ, ಉದ್ದಿಮೆಗೆ ನೀಡಿರುವ ಉದ್ದಿಮೆ ರಹದಾರಿ ಪತ್ರವನ್ನು ರದ್ದುಗೊಳಿಸುವ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.



ಜೆಎಸ್‌ಎಸ್ ಕಾಲೇಜಲ್ಲಿ ಖಗೋಳ ವಿಜ್ಞಾನ-ಸಂವಾದ



ಮೈಸೂರು, ಮಾ.20- ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಸ್ನಾತಕ ಭೌತಶಾಸ್ತ್ರ ವಿಭಾಗದ ವತಿಯಿಂದ 'ಖಗೋಳಶಾಸ್ತ್ರ ಮತ್ತು ಖಗೋಳವಿಜ್ಞಾನ' ವಿಷಯ ಕುರಿತು ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಎಜ್ಯುಕೇಷನ್‌ನ ನಿವೃತ್ತ ಪ್ರಾಂಶುಪಾಲ ಡಾ.ಎಸ್.ಎನ್.ಪ್ರಸಾದ್ ಕಾರ್ಯ ಕ್ರಮ ಉದ್ಘಾಟಿಸಿ ಮಾತನಾಡಿ, ಖಗೋಳ ವಿಜ್ಞಾನವು ವೈಜ್ಞಾನಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ಸಪ್ತರ್ಷಿಗಳ ಉದ್ಭವ, ಆಕಾಶದ ವಿಚಿತ್ರ ಆಕೃತಿ ಮತ್ತು ನಕ್ಷತ್ರಗಳ ರಚನೆಯ ಬಗ್ಗೆ ವಿವರಿಸಿದರು. ಖಗೋಳವಿಜ್ಞಾನದ ಅಧ್ಯಯನದಲ್ಲಿ ಹೆಚ್ಚು ಸಂಶೋಧನೆಗಳು ನಡೆಯಬೇಕು. ಈ ತರಹದ ವಿಚಾರ ಸಂಕಿರಣಗಳು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಸಹಕರಿಸುತ್ತದೆ ಎಂದರು.

ಕಾಲೇಜಿನ ಮುಖ್ಯಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಖಗೋಳವಿಜ್ಞಾನವು ಹೆಚ್ಚು ಹೊರಹೊಮ್ಮುತ್ತಿದೆ, ಖಗೋಳಶಾಸ್ತ್ರವು ನಕ್ಷತ್ರಗಳ ಅಧ್ಯಯನ, ನಕ್ಷತ್ರಗಳ ಆಕಾರ ಮತ್ತು ಚಲನೆ, ಬೃಹತ್ ವಸ್ತುಗಳ ನಿಯಮಿತತೆ ಮತ್ತು ಸಂಶ್ಲೇಷಣೆ ಮತ್ತು ಕಪ್ಪುಕುಳಿಗಳ ಬಗ್ಗೆ ಅಧ್ಯಯನವಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪೂಜ ಪ್ರಾರ್ಥಿಸಿದರು. ವಿಚಾರ ಸಂಕಿರಣದ ಸಂಘಟನಾ ಕಾರ್ಯದರ್ಶಿ ಹಾಗೂ ಭೌತಶಾಸ್ತ್ರ ವಿಭಾಗದ ಅಧ್ಯಾಪಕ ಜಿ.ಕಾರ್ತಿಕ್ ಸ್ವಾಗತಿಸಿದರು. ಅಧ್ಯಾಪಕ ಜಗದೀಶ್ ವಂದಿಸಿದರು. ಭೌತಶಾಸ್ತ್ರ ವಿಭಾಗದ ಎಸ್.ಲಕ್ಷ್ಮಿ ನಿರೂಪಿಸಿದರು. ಪ್ರಾಚಾರ್ಯರಾದ ಡಾ. ಎಸ್. ಪ್ರತಿಭಾ, ಸಂಚಾಲಕ ಡಾ. ಎಲ್. ವಿನಯ್‌ಕುಮಾರ್ ಉಪಸ್ಥಿತರಿದ್ದರು.

ನಂತರ ನಡೆದ ಎರಡು ಗೋಷ್ಠಿಗಳಲ್ಲಿ ಹವ್ಯಾಸಿ ಖಗೋಳಶಾಸ್ತ್ರಜ್ಞ ಎಂ.ಕೃಷ್ಣಮೂರ್ತಿ, ಖಗೋಳ ಛಾಯಾಗ್ರಹಣದ ಬಗ್ಗೆ ಉಪನ್ಯಾಸ ನೀಡಿದರು. ಎರಡನೇ ಗೋಷ್ಠಿಯಲ್ಲಿ ಗ್ರಾವಿಟಿ ಸೈನ್ಸ್ ಫೌಂಡೇಶನ್‌ನ ಕಾರ್ಯದರ್ಶಿ ಎ.ಎಸ್.ಅಭಿಷೇಕ್ ಹವ್ಯಾಸಿ ಖಗೋಳಶಾಸ್ತ್ರದ ಮೇಲೆ ಪ್ರಭಾವ ಚಟುವಟಿಕೆಗಳು ಮತ್ತು HAM ರೇಡಿಯೊ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ವಿವಿಧ ಪದವಿ ಕಾಲೇಜುಗಳಿಂದ ಆಗಮಿಸಿದ್ದ ಸುಮಾರು 200 ಪ್ರತಿನಿಧಿಗಳು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು.

ಮೈಸೂರು ಮಿತ್ರ
ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು: ಪ್ರಸಾದ್, ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871
ಮಂಡ್ಯ: ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325
ಶ್ರೀರಂಗಪಟ್ಟಣ: ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
ಹುಣಸೂರು: ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು. 9448720626
ಚಾಮರಾಜನಗರ: ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657
ಟಿ. ನರಸೀಪುರ: ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
ಗುಂಡ್ಲುಪೇಟೆ: ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426
ಕೆ.ಆರ್. ನಗರ: ಕೆ.ಬಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. 9448021368
ಮಳವಳ್ಳಿ: ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್-571430 9632407806
ಕೊಳ್ಳೇಗಾಲ: ರಾಜು, ಮೈಸೂರು ಮಿತ್ರ ರಿಪೋರ್ಟರ್, #101, ಮರಳಿಕೇರಿ ಬೀದಿ, ಕೊಳ್ಳೇಗಾಲ 9916621007
ಹಾಸನ: ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175
ಕುಶಾಲನಗರ: ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಬಿ.ಬಿ.ರಸ್ತೆ, ಕುಶಾಲನಗರ 9845698401
ಜಯಪುರ: ಬಿಳಿಗಿರಿ, ಜಯಪುರ 9945479288
ಪಿರಿಯಾಪಟ್ಟಣ: ವೀರೇಶ್, ಪಿರಿಯಾಪಟ್ಟಣ 8660057128
ವಿರಾಜಪೇಟೆ: ಮಂಜುನಾಥ, ವಿರಾಜಪೇಟೆ 9900949353
ಕೆ.ಆರ್.ಪೇಟೆ: ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438
ಹೆಚ್.ಡಿ.ಕೋಟೆ: ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452
ಕೆ.ಎಂ.ದೊಡ್ಡಿ: ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338
ನಂಜನಗೂಡು: ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್-571301 9901602226
ಹುಣಸೂರು: ಹೆಚ್.ಆರ್. ಕೃಷ್ಣಕುಮಾರ್ (ಚಿಕ್ಕ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093
ಕೊಳ್ಳೇಗಾಲ: ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858

ಮೈಸೂರು ಮಿತ್ರ ಗುರುವಾರ 21 ಮಾರ್ಚ್ 2024

ಕೊಡಗಿನಲ್ಲಿ ಬೇಕಾಬಿಟ್ಟಿ ಭೂ ಪರಿವರ್ತನೆ

● ನದಿ ಜಲಮೂಲಗಳು ಬತ್ತಿ ಹೋಗಲು ಕಾರಣ ● ಕರ್ನಲ್ ಚೆಪ್ಪುಡಿರ ಮುತ್ತಣ್ಣ ಆರೋಪ



ಮಡಿಕೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರ್ನಲ್ ಚೆಪ್ಪುಡಿರ ಮುತ್ತಣ್ಣ ಮಾತನಾಡಿದರು. ಶಿವಶಂಕರ್, ಗೋಪಿನಾಥ್, ಶಾನ್ ಬೋಪಣ್ಣ ಇದ್ದರು.

ಮಡಿಕೇರಿ, ಮಾ.20–ಕೊಡಗು ಜಿಲ್ಲೆಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಬೇಕಾಬಿಟ್ಟಿಯಾಗಿ ಭೂ ಪರಿವರ್ತನೆ ನಡೆಸಲಾಗುತ್ತಿದೆ. ಇದರಿಂದ ನದಿ ಜಲಮೂಲಗಳು ಬತ್ತಿ ಹೋಗಲು ಕಾರಣವಾಗುತ್ತಿದೆ ಎಂದು ಕೊಡಗು ಮತ್ತು ಕಾವೇರಿ ಉಳಿಸಿ ಅಭಿಯಾನದ ಸಂಯೋಜಕ ಕರ್ನಲ್ ಚೆಪ್ಪುಡಿರ ಮುತ್ತಣ್ಣ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು, ಮೈಸೂರು, ಬೆಂಗಳೂರು ಸೇರಿದಂತೆ ತಮಿಳುನಾಡಿನ ಜನರು ಕಾವೇರಿ ನದಿ ನೀರನ್ನು ಅವಲಂಭಿಸಿದ್ದಾರೆ. ಪ್ರಸ್ತುತ ವರ್ಷ ಕಡಿಮೆ ಮಳೆಯಿಂದಾಗಿ ಕಾವೇರಿ ನದಿ ಸೇರಿದಂತೆ ಜಿಲ್ಲೆಯ ಜಲಮೂಲಗಳು ಬತ್ತಿ ಹೋಗುತ್ತಿವೆ. ಕೊಡಗು ಜಿಲ್ಲೆ ಕಾವೇರಿ ನದಿಯ ಜಲಮೂಲದ ತಾಣವಾಗಿದ್ದು, ಇಲ್ಲಿ ನಡೆಸಲಾಗುತ್ತಿರುವ ಭೂ ಪರಿವರ್ತನೆಗಳು ಜಲಮೂಲಗಳ ನಾಶಕ್ಕೆ ಕಾರಣವಾಗುತ್ತಿದೆ ಎಂದು ದೂರಿದರು.

ವಾಣಿಜ್ಯ ಉದ್ದೇಶಗಳಿಗೆ ಭತ್ತದ ಗದ್ದೆಗಳನ್ನು ಕೂಡ ಭೂ ಪರಿವರ್ತನೆ ಮಾಡಲಾಗುತ್ತಿದ್ದು, ಇದು 1951ರ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ವಿರುದ್ಧವಾಗಿದೆ. ಕಾವೇರಿ ನದಿ ನೀರನ್ನು ಅವಲಂಭಿಸಿರುವ ಬೆಂಗಳೂರಿನ ಜನತೆ ಶೌಚಾಲಯಕ್ಕಾಗಿ ಮಾಲ್‌ಗಳ ಕಡೆ ಮುಖ ಮಾಡುವ ಪರಿಸ್ಥಿತಿ ತಲೆದೋರಿದೆ ಎಂದು ಹೇಳಿದರು.


ರಿಯಲ್ ಎಸ್ಟೇಟ್ ಲಾಬಿ: ಜಿಲ್ಲೆಯ ಬೃಹತ್ ಕಾಫಿ ಉದ್ದಿಮೆದಾರರು, ವಾಣಿಜ್ಯೋದ್ಯಮಿಗಳು, ಚಿನ್ನ ವಹಿವಾಟು ನಡೆಸುವವರು ತಮ್ಮ ಲಾಭಾಂಶವನ್ನು ರಿಯಲ್ ಎಸ್ಟೇಟ್ ಮೇಲೆ ಹೂಡಿಕೆ ಮಾಡುತ್ತಿದ್ದಾರೆ. ಆ ಮೂಲಕ ವಿವಿಧ ಕಾಫಿ ತೋಟ ಹಾಗೂ ಭತ್ತದ ಗದ್ದೆಗಳನ್ನು ವಾಣಿಜ್ಯ ಉದ್ದೇಶಗಳಿಗೆ ಪರಿವರ್ತನೆ ಮಾಡಿಕೊಂಡು ಲೇಔಟ್‌ಗಳನ್ನು ನಿರ್ಮಿಸುತ್ತಿದ್ದಾರೆ. ಜಿಲ್ಲಾಡಳಿತದ ನಿರಾಕ್ಷೇಪಣಾ ಪತ್ರ ಇಲ್ಲದೆಯೇ ಪ್ರಕೃತಿ ವಿಕೋಪವಾದ ಊರಲ್ಲಿ ಸವೆನ್ ಸ್ಟಾರ್ ಹೋಟೆಲ್‌ವೊಂದು ತಲೆ ಎತ್ತಿದೆ. ಇಂತಹ ಹಲವು ಪ್ರಕರಣಗಳು ನಡೆಯುತ್ತಿದ್ದರೂ ಆಡಳಿತ ಮೌನವಾಗಿದೆ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಪತ್ರ ಬರೆದು ವಾಣಿಜ್ಯ ಉದ್ದೇಶಗಳಿಗೆ ಭೂ ಪರಿವರ್ತನೆಗೆ ಅವಕಾಶ ನೀಡಬಾರದು ಎಂದು ಮನವಿ ಮಾಡಲಾಗುವುದು. ಜಿಲ್ಲಾಡಳಿತಕ್ಕೂ ಮನವಿ ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು ಸಹಕಾರ ನೀಡುವುದಾಗಿ ಹೇಳಿದ್ದಾರೆ. ವಿರಾಜಪೇಟೆ ಶಾಸಕ ಪೊನ್ನಣ್ಣ ಕೂಡ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ ಎಂದರು.

ರಾಷ್ಟ್ರೀಯ ವಿಪತ್ತು ಕಾಯ್ದೆ: ಈ ಬಾರಿ ಕೊಡಗು ಜಿಲ್ಲೆ ಸೇರಿದಂತೆ ದೇಶದಲ್ಲೇ ನೀರಿನ ಕೊರತೆ ಕಂಡು ಬಂದಿದೆ. ಭವಿಷ್ಯದ ವರ್ಷಗಳಲ್ಲಿ ಇಲ್ಲಿನ ಜನಸಂಖ್ಯೆ ಮತ್ತು ನಗರೀಕರಣ ವಿಕೇಂದ್ರೀಕರಣದಿಂದ ಭವಿಷ್ಯದಲ್ಲಿ ಜಲ ಸಂಕಷ್ಟ ಎದುರಾಗುವ ಎಲ್ಲಾ ಸಾಧ್ಯತೆಗಳಿವೆ. ಹಾಗಾಗಿ ಕೊಡಗು ಜಿಲ್ಲೆಯಲ್ಲೂ ರಾಷ್ಟ್ರೀಯ ವಿಪತ್ತು ಕಾಯ್ದೆ ಜಾರಿಯಾಗಬೇಕು. ಸರ್ಕಾರವೇ ಎಲ್ಲಾ ನದಿ ಮತ್ತು ಜಲಮೂಲಗಳನ್ನು ವಶಕ್ಕೆ ಪಡೆಯುವ ಸಾಧ್ಯತೆ ಇದೆ. ಈ ಕಾಯ್ದೆ ಜಾರಿಯಾದಲ್ಲಿ ಸ್ವಂತ ಜಮೀನಿನಲ್ಲಿರುವ ಜಲಮೂಲಗಳಿಗೂ ಸರ್ಕಾರ ಕಡಿವಾಣ ಹಾಕುತ್ತದೆ. ಎಲ್ಲಾ ರೆಸಾರ್ಟ್‌ಗಳು, ಹೋಂ ಸ್ಟೇಗಳು ಕೂಡ ಬಂದ್ ಆಗುತ್ತವೆ ಎಂದು ಕರ್ನಲ್ ಮುತ್ತಣ್ಣ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಕೊಡಗು ಮತ್ತು ಕಾವೇರಿ ಉಳಿಸಿ ಅಭಿಯಾನದ ಪ್ರಮುಖರಾದ ಶಿವಶಂಕರ್, ಗೋಪಿನಾಥ್, ಶಾನ್ ಬೋಪಣ್ಣ ಉಪಸ್ಥಿತರಿದ್ದರು.

ನದಿಯಲ್ಲಿ ಈಜಲು ಹೋದ ಯುವಕ ನೀರು ಪಾಲು



ಕುಶಾಲನಗರ, ಮಾ.20– ಕಾವೇರಿ ನದಿಯಲ್ಲಿ ಈಜಲು ತೆರಳಿದ ಸಂದರ್ಭ ಮೀನು ಹಿಡಿಯಲು ಹಾಕಿದ್ದ ಬಲೆ ಮತ್ತು ಗಾಳದ ಹಗ್ಗ ಕುತ್ತಿಗೆಗೆ ಸಿಲುಕಿಕೊಂಡು ಯುವಕ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ಗುಡ್ಡೆಹೊಸೂರು ಗ್ರಾಮದ ಸಮೀಪದ ಬಾಳುಗೋಡು ರಸಲ್‌ಪುರದಲ್ಲಿ ಬುಧವಾರ ನಡೆದಿದೆ.

7ನೇ ಹೊಸಕೋಟೆ ತೊಂಡೂರು ಗ್ರಾಮದ ನಿವಾಸಿ ಸುರೇಶ್ ಅವರ ಪುತ್ರ ಪ್ರದೀಪ್(21) ಮೃತ ಯುವಕ.

ಪ್ರದೀಪ್ ತನ್ನ ಸ್ನೇಹಿತರೊಂದಿಗೆ ಗುಡ್ಡೆಹೊಸೂರು ಸಮೀಪದ ಬಾಳುಗೋಡು ರಸಲ್‌ಪುರದ ಕಾವೇರಿ ನದಿಗೆ ಈಜಲು ತೆರಳಿದ್ದಾನೆ. ಈ ಭಾಗದಲ್ಲಿ ಕಾವೇರಿ ನದಿ ಗುಡ್ಡೆಹೊಸೂರು ಮತ್ತು ಪಿರಿಯಾಪಟ್ಟಣದ ಗಡಿಗಳನ್ನು ವಿಂಗಡಿಸುತ್ತದೆ. ಗುಡ್ಡೆಹೊಸೂರು ಕಡೆಯಿಂದ ನೀರಿಗೆ ಇಳಿದ ಪ್ರದೀಪ್ ಈಜಿ ಬೈಲ್ ಕೊಪ್ಪದ ದಡಕ್ಕೆ ತೆರಳಿದ್ದಾನೆ. ಈ ವೇಳೆ ಮೀನು ಹಿಡಿಯಲು ನದಿಗೆ ಹಾಕಿದ್ದ ಗಾಳದ ಹಗ್ಗ ಮತ್ತು ಬಲೆ ಪ್ರದೀಪ್‌ಗೆ ಸಿಲುಕಿಕೊಂಡಿದೆ. ಇದರಿಂದ ಮೇಲೆ ಬರಲಾಗದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಕುಶಾಲನಗರ ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹವನ್ನು ಮೇಲೆತ್ತಿದ್ದಾರೆ. ಬೈಲುಕೊಪ್ಪ ಹಾಗೂ ಕುಶಾಲನಗರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿದರು. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಂಚ ಪಡೆಯುತ್ತಿದ್ದ ಮಧ್ಯವರ್ತಿ ಲೋಕಾಯುಕ್ತ ಬಲೆಗೆ

ಮಡಿಕೇರಿ: ಪೌತಿ ಖಾತೆ ವರ್ಗಾವಣೆ ಮಾಡಿಸಿಕೊಡುವುದಾಗಿ ವ್ಯಕ್ತಿಯೊಬ್ಬರಿಂದ 50 ಸಾವಿರ ರೂ. ಲಂಚ ಪಡೆಯುತ್ತಿದ್ದ ಮಧ್ಯವರ್ತಿಯನ್ನು ಬುಧವಾರ ಮಡಿಕೇರಿ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಉಪನೋಂದಣಾಧಿಕಾರಿ ಕಚೇರಿಯ ಸಮೀಪದ ಜೆರಾಕ್ಸ್ ಅಂಗಡಿ ಮಾಲೀಕ ಹರಿದತ್ ಬಂಧಿತ ಮಧ್ಯವರ್ತಿ. ಭಾಗಮಂಡಲ ಕೋರಂಗಾಲ ಗ್ರಾಮ ನಿವಾಸಿ ಎನ್.ಕುಮಾರ್ ಅವರು ಪೌತಿ ಖಾತೆ ವರ್ಗಾವಣೆಗೆ ಉಪನೋಂದಣಾಧಿಕಾರಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಈ ವೇಳೆ 50 ಸಾವಿರ ರೂ.



ಸಬ್‌ರಿಜಿಸ್ಟ್ರಾರ್ ಕಚೇರಿ

ಲಂಚದ ಬೇಡಿಕೆ ಇಡಲಾಗಿತ್ತು. ಇದರಿಂದ ಮನನೊಂದ ಕುಮಾರ್, ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಮಧ್ಯವರ್ತಿ ಹರಿದತ್ ಜೆರಾಕ್ಸ್ ಅಂಗಡಿಯಲ್ಲಿ ಬುಧವಾರ ಕುಮಾರ್ ಅವರಿಂದ ಹಣ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಹಣದ ಸಹಿತ ಬಂಧಿಸಿದ್ದಾರೆ. ಲೋಕಾಯುಕ್ತ ದಾಳಿ ವೇಳೆ ಸಬ್‌ರಿಜಿಸ್ಟ್ರಾರ್ ಸೌಮ್ಯಲತಾ ಕಚೇರಿಯಿಂದ ದಿಢೀರನೆ ತೆರಳಿರುವುದು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಲಂಚ ಪ್ರಕರಣದಲ್ಲಿ ಸಬ್‌ರಿಜಿಸ್ಟ್ರಾರ್ ಪಾತ್ರದ ಬಗ್ಗೆಯೂ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಲೋಕಾಯುಕ್ತ ಇನ್ಸ್‌ಪೆಕ್ಟರ್ ಲೋಕೇಶ್ ಮತ್ತು ರೂಪಾಶ್ರೀ ನೇತೃತ್ವದಲ್ಲಿ ಸಿಬ್ಬಂದಿ ದಾಳಿ ನಡೆಸಿದರು.

ಅಪ್ರಾಪ್ತೆಗೆ ಅತ್ಯಾಚಾರ: ಆರೋಪಿ ಬಂಧನ



ನಾಪೋಕ್ಲು: ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ನಾಪೋಕ್ಲು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಧ್ಯಪ್ರದೇಶದ ಸಜಾಪುರ್ ಮೂಲದ ಮನಿಶ್ ಮಾಲ್ವಿಯ(26) ಬಂಧಿತ ಆರೋಪಿ. ಈತ ಸಮೀಪದ ಕಕ್ಕಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೂಮಾಲೆ ಎಸ್ಟೇಟ್‌ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದ. ಈ ವೇಳೆ ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿ, ತಲೆಮರೆಸಿಕೊಂಡಿದ್ದ. ನಂತರ ಈಕೆಯ ಪೋಷಕರು ಈತನ ವಿರುದ್ಧ ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದರು. ಮಂಗಳವಾರ ಪೊಲೀಸರು ಆರೋಪಿಯನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಈ ಸಂಬಂಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಕಪ್ ವಾಹನ ಡಿಕ್ಕಿ: ಯುವಕನ ಕಾಲು ಮುರಿತ

ನಾಪೋಕ್ಲು: ಸ್ಕೂಟರ್‌ಗೆ ಪಿಕಪ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಯುವಕನ ಕಾಲು ಮುರಿದಿರುವ ಘಟನೆ ಮುತ್ತಪ್ಪ ದೇವಾಲಯ ಸಮೀಪ ಬುಧವಾರ ನಡೆದಿದೆ. ಅಯ್ಯಂಗೇರಿ ನಿವಾಸಿ ಅಬ್ದುಲ್ ಕರೀಂ ಅವರ ಮಗ ಹಕ್ಕಿಮ್(25) ಕಾಲು ಮುರಿದುಕೊಂಡಿರುವ ಯುವಕ.

ಈತ ಸ್ಕೂಟರ್‌ನಲ್ಲಿ ನಾಪೋಕ್ಲುನಿಂದ ಹಳೇ ತಾಲೂಕಿನ ಕಡೆಗೆ ಹೋಗುತ್ತಿದ್ದ. ಈ ವೇಳೆ ಎದುರು ಗಡೆಯಿಂದ ಬರುತ್ತಿದ್ದ ಪಿಕಪ್ ವಾಹನ ಡಿಕ್ಕಿ ಹೊಡೆದಿದೆ. ಪರಿಣಾಮ ಯುವಕನ ಕಾಲು ಮುರಿದಿದೆ. ಗಾಯಗೊಂಡ ಹಕೀಮ್‌ನನ್ನು ಮಡಿಕೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.23, ಇಗ್ಗುತಪ್ಪ ಕಲಾಡ್ಚ ಹಬ್ಬ

ನಾಪೋಕ್ಲು, ಮಾ.20–ಇಲ್ಲಿನ ನೆಲಜಿ ಶ್ರೀ ಇಗ್ಗುತಪ್ಪ ದೇವರ ಕಲಾಡ್ಚ ಹಬ್ಬ ಮಾ.23ರಂದು ನಡೆಯಲಿದೆ. ಹಬ್ಬದ ಪ್ರಯುಕ್ತ ದೇವಸ್ಥಾನದಲ್ಲಿ ಭಕ್ತರ ತುಲಾಭಾರ ಸೇವೆ, ಮಹಾಪೂಜೆ, ಎತ್ತು ಪೋರಾಟ, ದೇವರ ನೃತ್ಯ ಬಲಿ ಮತ್ತು ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ತಕ್ಕ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿಯ ಸದಸ್ಯರು ತಿಳಿಸಿದ್ದಾರೆ.

ಇಂದು ನಾಗದೇವರ ಮಹಾಪೂಜೆ

ಗುಡ್ಡೆಹೊಸೂರು: ಸಮೀಪದ ಬೆಟ್ಟಗೇರಿ ಗ್ರಾಮದ ಶ್ರೀ ಚೌಡೇಶ್ವರಿ ದೇವಸ್ಥಾನ ಆವರಣದ ನಾಗದೇವರ 4ನೇ ವರ್ಷದ ಮಹಾಪೂಜೆ ಗುರುವಾರ ನಡೆಯಲಿದೆ. ಬೆಳಗ್ಗೆ 8.30ಕ್ಕೆ ಗಣಪತಿಹೋಮ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ನಡೆಯಲಿದೆ.

ಎಂ.ಎಸ್.ಇಂದ್ರೇಶ್ ನಿಧನ



ಕುಶಾಲನಗರ: ಮುಳ್ಳುಸೋಗೆ ಗ್ರಾಮದ ನಿವಾಸಿ ಎಂ.ಎಸ್. ಇಂದ್ರೇಶ್ (52) ಅನಾರೋಗ್ಯದಿಂದ ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಗೊಂದಿಬಸವನಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಏ.1ರಂದು ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ನಾಮಪತ್ರ ಸಲ್ಲಿಕೆ



ಮಂಡ್ಯದ ಬಂದೀಗೌಡ ಬಡಾವಣೆಯಲ್ಲಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವೆಂಕಟರಮಣಗೌಡ ಅವರ ನಿವಾಸದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾತನಾಡಿದರು. ಈ ವೇಳೆ ಅಭ್ಯರ್ಥಿ ವೆಂಕಟರಮಣೇಗೌಡ, ಪಕ್ಷದ ಕಾರ್ಯಕರ್ತರು ಮುಖಂಡರು ಉಪಸ್ಥಿತರಿದ್ದರು.

ರಾಜ್ಯದಲ್ಲಿ 20 ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಗೆಲುವು; ಸಚಿವ ಚಲುವರಾಯಸ್ವಾಮಿ ವಿಶ್ವಾಸ

ಮಂಡ್ಯ,ಮಾ.20–ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವೆಂಕಟರಮಣಗೌಡ (ಸ್ಟಾರ್ ಚಂದ್ರು) ಏ.1ರಂದು ತಮ್ಮ ಉಮೇದುವಾರಿಕೆ ಸಲ್ಲಿಸಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ನಗರದ ಬಂದೀಗೌಡ ಬಡಾವಣೆಯಲ್ಲಿ ಪಕ್ಷದ ಅಭ್ಯರ್ಥಿ ವೆಂಕಟರಮಣಗೌಡ ಅವರ ನಿವಾಸದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ನಗರದ ಶಕ್ತಿದೇವತೆ ಕಾಳಿಕಾಂಭ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಮೆರವಣಿಗೆ ಮೂಲಕ ತೆರಳಿ 1.30 ರೊಳಗೆ ನಾಮಪತ್ರ ಸಲ್ಲಿಕೆ ಮಾಡಲಾಗುವುದು ಎಂದು ವಿವರಿಸಿದರು.

ಕಳೆದ ಒಂದು ತಿಂಗಳ ಹಿಂದೆಯೇ ವೆಂಕಟರಮಣಗೌಡ ಅವರನ್ನು ಪಕ್ಷದ ಅಭ್ಯರ್ಥಿ ಎಂದು ಘೋಷಿಸಿದ್ದು, ಪಕ್ಷದ ಅಭ್ಯರ್ಥಿ ಪರ ಪ್ರಚಾರಕ್ಕೆ ಅಧಿಕೃತವಾಗಿ ಇಂದಿನಿಂದ ಚಾಲನೆ ನೀಡಲಾಗಿದೆ. ಎಲ್ಲಾ ಕ್ಷೇತ್ರದ ಶಾಸಕರು ಈಗಾಗಲೇ ಪ್ರಚಾರ ಕಾರ್ಯ ನಡೆಸುತ್ತಿದ್ದು, ಪಕ್ಷದ ಅಭ್ಯರ್ಥಿ ಗೆಲ್ಲುವ ವಿಶ್ವಾಸವಿದೆ. ಕನಿಷ್ಠ 20 ಸ್ಥಾನ ಪಡೆಯುತ್ತೇವೆ: ಪ್ರಸ್ತುತ ನಡೆಯುವ ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನ ಗೆದ್ದೆ ಗೆಲ್ಲುತ್ತೇವೆ. ವಿಧಾನಸಭೆ ಚುನಾವಣೆಗೂ ಮೊದಲು ಘೋಷಣೆ ಮಾಡಿದ ಪಂಚ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದೇವೆ. ನುಡಿದಂತೆ ನಡೆದಿದ್ದೇವೆ. ಕಳೆದ 8 ತಿಂಗಳ ಅವಧಿಯಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳೇ ನಮ್ಮ ಗೆಲುವಿಗೆ ಶ್ರೀ ರಕ್ಷೆಯಾಗಲಿವೆ ಎಂದರು.

ಮೈತ್ರಿ ಅಭ್ಯರ್ಥಿ ಬಗ್ಗೆ ನಾನು ಟೀಕೆ ಮಾಡಲು ಹೋಗುವುದಿಲ್ಲ. ಯಾರಾದರೂ ಒಬ್ಬರೂ ಅಭ್ಯರ್ಥಿಯಾಗಲೇಬೇಕು. ಯಾರನ್ನಾದರೂ ಅಭ್ಯರ್ಥಿಯನ್ನಾಗಿ ಮಾಡಲಿ ಅದು ಅವರಿಗೆ ಬಿಟ್ಟಿದ್ದು, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರ ಗೆಲುವಿನಿಂದ ಹಿಡಿದು ಕಳೆದ ವಿಧಾನಸಭೆ ಚುನಾವಣೆಯಲ್ಲೂ ಜಿಲ್ಲೆಯ ಮತದಾರರು ನಮ್ಮ ಕೈ ಹಿಡಿದಿದ್ದಾರೆ. ಅದೇ ರೀತಿ ಲೋಕಸಭೆ ಚುನಾವಣೆಯಲ್ಲೂ ನಮ್ಮ ಕೈ ಹಿಡಿಯಲಿದ್ದಾರೆ ಎನ್ನುವ ವಿಶ್ವಾಸವಿದೆ ಎಂದು ತಿಳಿಸಿದರು.

ಜೆಡಿಎಸ್ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡ ಸಂದರ್ಭದಲ್ಲಿ ಮಾಜಿ ಪ್ರಧಾನಿ ದೇವೇಗೌಡರು ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕಾಂಗ್ರೆಸ್ ಪಕ್ಷ ಗೌರವಯುತವಾಗಿ ನಡೆಸಿಕೊಂಡಿದೆ. ಆದರೆ, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಪ್ರಾರಂಭದಲ್ಲೇ ಅಪಸ್ವರ ಉಂಟಾಗಿದೆ. ಬಿಜೆಪಿಯೊಂದಿಗೆ ಹೋಗಿ ತಪ್ಪು ಮಾಡಿರುವ ಬಗ್ಗೆ ಜೆಡಿಎಸ್ ವರಿಷ್ಠರಿಗೆ ಈಗ ಅರಿವಾಗಿದೆ. ಹಾಸನ ಹಾಗೂ ಮಂಡ್ಯದಲ್ಲೂ ಅಭ್ಯರ್ಥಿ ಘೋಷಣೆ ಮಾಡಲು ಸ್ವಾತಂತ್ರ್ಯ ಕಳೆದುಕೊಂಡಿದ್ದಾರೆ ಇದು ವಿಪರ್ಯಾಸ ಎಂದರು.

ದೇವೇಗೌಡರ ಸ್ವಂತ ಅಳಿಯ ಡಾ. ಮಂಜುನಾಥ್ ಅವರನ್ನು ಬೆಂಗಳೂರು ಗ್ರಾಮಾಂತರದಿಂದ ಬಿಜೆಪಿ ಪಕ್ಷದ ಚಿಹ್ನೆಯಲ್ಲಿ ಕಣಕ್ಕಿಳಿಸುತ್ತಿದ್ದಾರೆ. ಇಂತಹ ಕೆಟ್ಟ ಪರಿಸ್ಥಿತಿ ಜೆಡಿಎಸ್‌ಗೆ ಬರಬಾರದಿತ್ತು ಇದರಿಂದ ಅವರ ಆತ್ಮವಿಶ್ವಾಸ ಕುಗ್ಗಿದೆ ಎಂಬುದು ತಿಳಿಯುತ್ತದೆ. ಮಂಡ್ಯ ಕ್ಷೇತ್ರಕ್ಕೆ ಮೈತ್ರಿ ಅಭ್ಯರ್ಥಿಯಾಗಿ ಯಾರೆ ಸ್ಪರ್ಧಿಸಿದರೂ ಎದುರಿಸಲು ಸಿದ್ಧವಾಗಿದ್ದೇವೆ. ಯಾರನ್ನೂ ಟೀಕೆ ಮಾಡಲು ಹೋಗುವುದಿಲ್ಲ ಎಂದರು.

ಪಕ್ಷದ ಅಭ್ಯರ್ಥಿ ವೆಂಕಟರಮಣಗೌಡ ಮಾತನಾಡಿ, ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ನನ್ನನ್ನು ಆಯ್ಕೆ ಮಾಡಿದ ರಾಜ್ಯ ಹಾಗೂ ರಾಷ್ಟ್ರ ನಾಯಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಗೆಲುವಿಗೆ ಎಲ್ಲರ ಸಹಕಾರ ಅಗತ್ಯವಿದೆ. ಆದ್ದರಿಂದ ಎಲ್ಲರೂ ಸಹಕರಿಸಿ ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ರವಿಕುಮಾರ್ ಗೌಡ, ಕದಲೂರು ಉದಯ್, ರಮೇಶ್ ಬಾಬು ಬಂಡಿಸಿದ್ದೇಗೌಡ, ರವಿಶಂಕರ್, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮರಿತಿಬ್ಬೇಗೌಡ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಕಾರ್ಯಾಧ್ಯಕ್ಷ ಎಂ.ಎಸ್. ಚಿದಂಬರ್ ಹಾಜರಿದ್ದರು.

> ಬಿಜೆಪಿಯಲ್ಲೂ ಸಾಕಷ್ಟು ಗೊಂದಲಗಳಿವೆ. ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರನ್ನು ಕಡೆಗಣಿಸಲಾಗಿದೆ. ಶೋಭಾ ಕರಂದ್ಲಾಜೆ ಹೊರತುಪಡಿಸಿದರೆ ಒಕ್ಕಲಿಗ ನಾಯಕರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಹಾಲಿ ಸಂಸದ ಹಿರಿಯ ನಾಯಕ ಸದಾನಂದಗೌಡರನ್ನು ಕಡೆಗಣಿಸಲಾಗಿದ್ದು, ಅವರಿಗೆ ನೋವು ತರಿಸಿದೆ. ಅವರ ನಿಲುವನ್ನು ಕೆಲವೇ ದಿನಗಳಲ್ಲಿ ತಿಳಿಸಲಿದ್ದಾರೆ.
> –ಚಲುವರಾಯಸ್ವಾಮಿ, ಉಸ್ತುವಾರಿ ಸಚಿವರು

ಕೊಳೆತ ಸ್ಥಿತಿಯಲ್ಲಿ ಅಜ್ಜಿ–ಮೊಮ್ಮಗಳ ಶವ ಪತ್ತೆ

ನಾಗಮಂಗಲ: ಕೊಳೆತ ಸ್ಥಿತಿಯಲ್ಲಿ ಅಜ್ಜಿ ಹಾಗೂ ಮೊಮ್ಮಗಳ ಶವ ಪತ್ತೆಯಾಗಿದೆ. ದುಷ್ಕರ್ಮಿಗಳು ಅಜ್ಜಿ ಮತ್ತು ಮೊಮ್ಮಗಳನ್ನು ಕೊಲೆ ಮಾಡಿ ಮೂಟೆಯಲ್ಲಿ ಕಟ್ಟಿ ಕಟ್ಟೆಯಲ್ಲಿ ಎಸೆದಿರುವ ಅಮಾನುಷ ಘಟನೆ ತಾಲೂಕಿನ ಚುಂಚನಹಳ್ಳಿ ಗ್ರಾಮದ ಚಂದ್ರಶೇಖರನಾಥ ಬಡಾವಣೆ ಹಿಂಭಾಗದ ಕಟ್ಟೆಯಲ್ಲಿ ನಡೆದಿದೆ.

ಅಲೆಮಾರಿಯಾಗಿದ್ದ ಜಯಮ್ಮ(45) ತನ್ನ ಎರಡೂವರೆ ವರ್ಷದ ಮೊಮ್ಮಗಳು ರಿಷಿಕಾ ಜೊತೆಗೆ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಕಲ್ಕೆರೆ ಗ್ರಾಮದಿಂದ ಕಳೆದ 15 ದಿನಗಳ ಹಿಂದೆ ನಾಗಮಂಗಲಕ್ಕೆ ಬಂದಿದ್ದರು. ಬೆಳ್ಳೂರು ಠಾಣೆ ಪೊಲೀಸರು ಅಗ್ನಿಶಾಮಕ ದಳದ ಸಹಾಯದೊಂದಿಗೆ ಹೊರ ತೆಗೆದು ಆದಿಚುಂಚನಗಿರಿ ವೈದ್ಯಕೀಯ ಆಸ್ಪತ್ರೆಗೆ ರವಾನೆ ಮಾಡಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪವಿತ್ರ ಶಿವಲಿಂಗು ದೊಡ್ಡ ಬ್ಯಾಡರಹಳ್ಳಿ ಗ್ರಾಪಂ ಉಪಾಧ್ಯಕ್ಷೆ

ಪಾಂಡವಪುರ: ತಾಲೂಕಿನ ದೊಡ್ಡ ಬ್ಯಾಡರಹಳ್ಳಿ ಗ್ರಾಪಂ ಉಪಾಧ್ಯಕ್ಷೆಯಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಪವಿತ್ರ ಶಿವಲಿಂಗು ಅವಿರೋಧವಾಗಿ ಆಯ್ಕೆಯಾದರು.

ಗ್ರಾಪಂನ ಹಿಂದಿನ ಉಪಾಧ್ಯಕ್ಷೆ ಕುಮಾರಿ ಅವರ ರಾಜೀನಾಮೆಯಿಂದ ತೆರವಾದ ಉಪಾಧ್ಯಕ್ಷೆ ಸ್ಥಾನಕ್ಕೆ ಚುನಾವಣೆ ನಿಗಧಿಯಾಗಿತ್ತು. ಉಪಾಧ್ಯಕ್ಷ ಸ್ಥಾನಕ್ಕೆ ಪವಿತ್ರ ಶಿವಲಿಂಗು ಅವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರು ಸಹ ನಾಮಪತ್ರವನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಗ್ರಾಪಂನ ಉಪಾಧ್ಯಕ್ಷೆಯಾಗಿ ಪವಿತ್ರ ಶಿವಲಿಂಗು ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಪುಟ್ಟಮಾಯಿಗೌಡ ಘೋಷಿಸಿದರು.

ಗ್ರಾಪಂ ಅಧ್ಯಕ್ಷೆ ಕಾರಿಶಂಕರ, ಸದಸ್ಯರಾದ ಪ್ರಸನ್ನ, ಆನಂದ, ರವಿರಾಜ್, ಮನು, ಲಿಂಗರಾಜು, ಮಹದೇವಮ್ಮ ಕುಮಾರಿ, ಮಂಜುಳ, ಶಕುಂತಲ, ಶಿವಲಿಂಗು, ಮುಖಂಡರಾದ ಡಿ.ಎನ್.ರವಿ, ಡಿ.ಎಂ.ನಿಂಗೇಗೌಡ, ಡಿ.ಟಿ.ಧರ್ಮ, ಕಾಳೇಗೌಡ, ಎನ್.ಕೃಷ್ಣ, ರಂದ, ನಂಜುಂಡಪ್ಪ, ಇತರರು ಹಾಜರಿದ್ದರು.

ಇಂದು ವಿಶ್ವವಿಖ್ಯಾತ ಮೇಲುಕೋಟೆ ವೈರಮುಡಿ ಉತ್ಸವ

ಮಂಡ್ಯ,ಮಾ.20–ವಿಶ್ವವಿಖ್ಯಾತ ಮೇಲುಕೋಟೆ ಉತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿರುವ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲುಕೋಟೆಯ ಚಲುವನಾರಾಯಣನ ಸನ್ನಿಧಿಯಲ್ಲಿ ಗುರುವಾರ(ಮಾ.21) ರಾತ್ರಿ 9 ಗಂಟೆ ವೇಳೆಗೆ ವಜ್ರಖಚಿತನಾಗಿ ಶ್ರೀ ಚಲುವನಾರಾಯಣ ಮೇಲುಕೋಟೆಯ ತೇರಿನ ಬೀದಿಯಲ್ಲಿ ವಿರಾಜಮಾನನಾಗಲಿದ್ದಾನೆ.

ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಎಲ್ಲಾ ಸಿದ್ಧತೆ ನಡೆಸಿದ್ದು, ಮೇಲುಕೋಟೆ ದೇಗುಲದ ಆವರಣಕ್ಕೆ ಗುರುವಾರ ಮಂಡ್ಯ, ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ಮೂಲೆ ಮೂಲೆಗಳಿಂದ ಭಕ್ತರು ಆಗಮಿಸುವುದಲ್ಲದೇ ಆಂಧ್ರ, ತಮಿಳುನಾಡು, ಕೇರಳ, ತೆಲಂಗಾಣದಿಂದ ಲಕ್ಷಾಂತರ ಭಕ್ತರು ವಜ್ರಖಚಿತ ಚಲುವನಾರಾಯಣನ ದರ್ಶನಕ್ಕೆ ಆಗಮಿಸಲಿದ್ದಾರೆ. ವೈರಮುಡಿ ಉತ್ಸವದ ಹಿನ್ನೆಲೆಯಲ್ಲಿ ಗುರುವಾರ ಬೆಳಗ್ಗೆ 7 ಗಂಟೆಗೆ ಮಂಡ್ಯ ನಗರದ ಜಿಲ್ಲಾ ಖಜಾನೆಯಿಂದ ಜಿಲ್ಲಾಡಳಿತ ಹಾಗೂ ಮೇಲುಕೋಟೆ ಸ್ಥಾನಿಕ ಅರ್ಚಕರ ನೇತೃತ್ವದಲ್ಲಿ ವಜ್ರಖಚಿತ ವೈರಮುಡಿಯನ್ನು ಹೊರಗೆ ತೆಗೆಯಲಾಗುತ್ತದೆ. ಮಂಡ್ಯ ನಗರದ ಲಕ್ಷ್ಮಿ ಜನಾರ್ಧನ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಲ್ಲಿಂದ ಬಿಗಿ ಭದ್ರತೆಯಲ್ಲಿ ಮೇಲುಕೋಟೆ ದೇಗುಲಕ್ಕೆ ಒಡವೆಗಳನ್ನು ತೆಗೆದುಕೊಂಡು ಹೋಗಲಾಗುತ್ತದೆ. ಸಾಗುವ ದಾರಿಯಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಪೂಜೆ ನೆರವೇರಿಸಲಿದ್ದಾರೆ.

ಯುವಜನತೆ ಮಹಾತ್ಮ ಗಾಂಧಿ ವಿಚಾರಧಾರೆ ಅಳವಡಿಸಿಕೊಳ್ಳಬೇಕು



ಚಾಮರಾಜನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಗಾಂಧೀಜಿ ಮತ್ತು ಯುವಜನತೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಚಾಮರಾಜನಗರ, ಮಾ.20–ಯುವಜನತೆ ಮಹಾತ್ಮ ಗಾಂಧಿ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಚಿಂತಕ ಪ್ರೊ.ಜಿ.ಎಸ್.ಜಯದೇವ್ ತಿಳಿಸಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಇಲಾಖೆ, ಗಾಂಧಿ ಅಧ್ಯಯನ ಕೇಂದ್ರದ ಎನ್‌ಎಸ್‌ಎಸ್, ಐಕ್ಯೂಎಸಿ ಮತ್ತು ಸಾಂಸ್ಕೃತಿಕ ವೇದಿಕೆ, ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ಆಯೋಜಿಸಿದ್ದ ಗಾಂಧಿ ಅಧ್ಯಯನ ಕೇಂದ್ರ ಉದ್ಘಾಟನೆ ಹಾಗೂ ಗಾಂಧೀಜಿ ಮತ್ತು ಯುವಜನತೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧಿಯನ್ನು ಮರೆತು ಬೇರೆ ದಿಕ್ಕಿಗೆ ಹೋಗಲು ಸಾಧ್ಯವಿಲ್ಲ. ವಾಸ್ತವಕ್ಕೆ ದೂರವಾದ ಆಸೆಗಳು ಹಾಗೂ ಐಷಾರಾಮಿ ಬದುಕನ್ನು ವಿರೋಧಿಸಿದ ಗಾಂಧೀಜಿ ಸರಳ ಜೀವನದ ಸಂದೇಶ ಸಾರಿದ್ದಾರೆ ಎಂದು ಸ್ಮರಿಸಿದರು.

ಗಾಂಧಿಯನ್ನು ವಿರೋಧಿಸುವಂತೆ ಅವರನ್ನು ಇಷ್ಟಪಡುವವರು ಇದ್ದಾರೆ. ಗಾಂಧಿತನದ ಬಗ್ಗೆ ಕಳಕಳಿ ಇರುವ ಕಡೆ ಗಾಂಧಿ ಇದ್ದಾರೆ. ಅಹಿಂಸೆ ಬೇಕಾದರೆ ಐಷಾರಾಮಿ ಬದುಕಿನ ಅಗತ್ಯವಿಲ್ಲ. ಕೈಗಾರಿಕೆಗಳಲ್ಲಿ ಶೋಷಣೆ ಹಾಸುಹೊಕ್ಕಾಗಿದೆ. ಸಾಮಾಜೀಕರಣ ಮಾಡಿದರೂ ಕೈಗಾರೀಕಿಕರಣದ ಜಾಡ್ಯ ಅಂತರ್ಗತವಾಗಿದೆ. ಕೈಗಾರಿಕೆಗಳಲ್ಲಿ ಮಾಲಿನ್ಯ, ಶೋಷಣೆ, ಸಂಪನ್ಮೂಲ ನಾಶ, ಭ್ರಷ್ಟಾಚಾರ ಇದೆ ಸಾಂಸ್ಕೃತಿಕ ಗುಲಾಮಗಿರಿಯನ್ನು ಪೋಷಿಸಿಕೊಂಡು ಬಂದ ಪರಿಣಾಮ ಅಂತರಂಗದ ಸ್ವರಾಜ್ಯ ಕಳೆದುಕೊಂಡಿದ್ದೇವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ.ಕೃಷ್ಣ, ಗಾಂಧಿಜೀಯವರ ಒಳ್ಳೆಯ ಚಿಂತನೆಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಗಾಂಧೀಜಿಯವರು ಯಾರನ್ನು ದ್ವೇಷಿಸಲಿಲ್ಲ. ಶ್ರೀಮಂತಿಕೆಯನ್ನು ಬಯಸಲಿಲ್ಲ. ಅದರು ನಮ್ಮ ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದರು. ಕಾಲೇಜು ವಿದ್ಯಾರ್ಥಿಗಳು ಗಾಂಧೀಜಿಯವರ ವಿಚಾರ ಧಾರೆಗಳನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಗಾಂಧಿ ಅಧ್ಯಯನ ಕೇಂದ್ರಕ್ಕೆ ಮಹಾತ್ಮ ಗಾಂಧೀಜಿ ಅವರ ಜೀವನಾಧಾರಿತ ಪುಸ್ತಕಗಳನ್ನು ನೀಡಲಾಯಿತು. ಇಂದೋರ್‌ನ ಕಸ್ತೂರ ಬಾ ಟ್ರಸ್ಟಿ ಪ್ರೊ.ಜಿ.ಬಿ.ಶಿವರಾಜು, ಕಾಲೇಜಿನ ಪ್ರಾಂಶುಪಾಲೆ ಪ್ರೊ.ಎಸ್.ಚಂದ್ರಮ್ಮ, ಗಾಂಧಿ ಅಧ್ಯಯನ ಕೇಂದ್ರದ ಸಂಚಾಲಕ ಎ.ಎಂ.ಶಿವಸ್ವಾಮಿ ಇತರರಿದ್ದರು.

ಗ್ರಾಹಕರ ರಕ್ಷಣೆ, ಸಬಲೀಕರಣಕ್ಕೆ ಕಾಯ್ದೆ ಜಾರಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ಮಾಹಿತಿ



ಚಾಮರಾಜನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆಯನ್ನು ಜಿಪಂ ಉಪಕಾರ್ಯದರ್ಶಿ ಪಿ.ಲಕ್ಷ್ಮೀ ಉದ್ಘಾಟಿಸಿದರು.

ಚಾಮರಾಜನಗರ, ಮಾ.20–ಗ್ರಾಹಕರ ರಕ್ಷಣೆ ಹಾಗೂ ಸಬಲೀಕರಣಕ್ಕಾಗಿ ಗ್ರಾಹಕರ ಹಕ್ಕುಗಳ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಗ್ರಾಹಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಸರ್ಕಾರ 1986ರಲ್ಲಿ ಗ್ರಾಹಕ ಹಕ್ಕುಗಳ ಕಾಯ್ದೆ ಜಾರಿಗೊಳಿಸಿದೆ. ದೈನಂದಿನ ಜೀವನದಲ್ಲಿ ಪ್ರತಿಯೊಬ್ಬರು ಗ್ರಾಹಕರಾಗಿದ್ದಾರೆ. ಗ್ರಾಹಕರಿಗೆ ನ್ಯಾಯಯುತ, ಯೋಗ್ಯ ಹಾಗೂ ಗುಣಮಟ್ಟದ ಸರಕು ಮತ್ತು ಸೇವೆಗಳನ್ನು ನೀಡುವ ಜವಾಬ್ದಾರಿ ವ್ಯಾಪಾರಸ್ಥರದ್ದು. ಯಾವುದೇ ವಸ್ತುಗಳನ್ನು ಕೊಡುವವನ ತೃಪ್ತಿಗಾಗಿ ಕೊಳ್ಳುವುದಲ್ಲ. ಅಲ್ಲಿ ಗ್ರಾಹಕರ ಸಂತೃಪ್ತಿಯೇ ಪ್ರಮುಖವಾಗಿದೆ. ಸುರಕ್ಷತೆ, ಆಯ್ಕೆ ಹಾಗೂ ಆರೋಗ್ಯಪೂರ್ಣ ಪರಿಸರ ಹೊಂದುವ ಹಕ್ಕನ್ನು ಕಾಯ್ದೆ ಎಲ್ಲಾ ಗ್ರಾಹಕರಿಗೂ ನೀಡಿದೆ ಎಂದು ಹೇಳಿದರು.

ವ್ಯಾಪಾರಸ್ಥರು ವಸ್ತುಗಳಿಗೆ ನಿಗದಿತ ಬೆಲೆಗಿಂತ ಹೆಚ್ಚಿನ ದರ ಪಡೆಯುವಂತಿಲ್ಲ. ವಸ್ತುಗಳು ದೋಷದಿಂದ ಕೂಡಿದ್ದರೆ ಪ್ರಶ್ನೆ ಮಾಡುವ ಹಕ್ಕು ಗ್ರಾಹಕರಿಗಿದೆ. ಅವಧಿ ಮೀರಿದ ಉತ್ಪನ್ನಗಳನ್ನು ನೀಡಿದರೆ ಅಂತಹವರ ಮೇಲೆ ಗ್ರಾಹಕರ ಆಯೋಗದಲ್ಲಿ ಪ್ರಕರಣ ದಾಖಲಿಸಿ ಪರಿಹಾರ ಪಡೆಯಬಹುದು. ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದಲ್ಲಿ 50 ಲಕ್ಷ ರೂ.ವರೆಗೆ ಹಾಗೂ ರಾಜ್ಯ ಆಯೋಗದಲ್ಲಿ 1 ಕೋಟಿ ರೂ.ವರೆಗೆ ಪರಿಹಾರ ಪಡೆಯಬಹುದು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಗ್ರಾಹಕರ ಹಕ್ಕುಗಳನ್ನು ಅರಿಯಬೇಕು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ, ಲೋಕಸಭಾ ಚುನಾವಣೆಯ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಜಿಪಂ ಉಪಕಾರ್ಯದರ್ಶಿ ಪಿ.ಲಕ್ಷ್ಮೀ, ಗ್ರಾಹಕರ ಹಕ್ಕುಗಳ ಜಾಗೃತಿ ಎಲ್ಲರಿಗೂ ಅಗತ್ಯವಾಗಿದೆ. ಅದರಲ್ಲೂ ಕುಟುಂಬ ನಿರ್ವಹಿಸುವ ಮಹಿಳೆಯರಿಗೆ ಅತ್ಯಗತ್ಯವಾಗಿದೆ. ವಸ್ತುಗಳನ್ನು ಕೊಳ್ಳುವಾಗ ತೂಕ, ಅಳತೆ ಮತ್ತು ದರ ಕ್ರಮಬದ್ಧವಾಗಿರಬೇಕು. ಗ್ರಾಹಕರು ಅದನ್ನು ಪರೀಕ್ಷಿಸಿ, ಪಡೆದುಕೊಳ್ಳಬೇಕೇ ಹೊರತು ಮೋಸ ಹೋಗಬಾರದು ಎಂದರು.

ಲೋಕಸಭಾ ಚುನಾವಣೆಯಲ್ಲಿ ವಿಶೇಷವಾಗಿ ಜಿಲ್ಲೆಯಲ್ಲಿ ಮತದಾನರನ್ನು ಆಕರ್ಷಿಸುವ ಉದ್ದೇಶದಿಂದ ಮಹಿಳೆಯರಿಗಾಗಿ ಪ್ರತಿ ತಾಲೂಕಿಗೆ ತಲಾ 2 ಸಖಿ ಸೌರಭ ಮತಗಟ್ಟೆ, ಜಾನಪದ ಕಲಾ ಶೈಲಿಯ ಮತಗಟ್ಟೆ, ಅರಣ್ಯದ ಮಹತ್ವ ತಿಳಿಸುವ ಹಸಿರು ಮತಗಟ್ಟೆ ಹಾಗೂ ರೈತರನ್ನು ಸೆಳೆಯಲು ಅನ್ನದಾತರ ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದ ಸದಸ್ಯ ಕೆ.ಎಸ್.ರಾಜು ಮಾತನಾಡಿದರು. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕಿ ಪಿ.ಸವಿತಾ, ಕಾನೂನು ಮಾಪನ ಶಾಸ್ತ್ರ ಇಲಾಖೆಯ ಸಹಾಯಕ ನಿಯಂತ್ರಕ ಬಿ.ಎನ್.ರಾಜೀವ್, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಜಿಲ್ಲಾ ವ್ಯವಸ್ಥಾಪಕ ಬಾಲಕೃಷ್ಣ, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರ ಸಂಯೋಜಕರು ಹಾಗೂ ಶ್ರೀಗಂಧ ಮಹಿಳಾ ಅಭಿವೃದ್ಧಿ ಸಂಘದ ಶಿವರಾಜಮ್ಮ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ಇಂದಿನ ದಿನಗಳಲ್ಲಿ ಸಾಕಷ್ಟು ಜನರು ವ್ಯಾಪಾರಕ್ಕಾಗಿ ಆನ್‌ಲೈನ್ ಮೊರೆ ಹೋಗುತ್ತಿರುವುದನ್ನು ಕಾಣಬಹುದು. ಅಂಗಡಿಗಳಿಂದ ವಸ್ತುಗಳನ್ನು ಕೊಳ್ಳುವುದಷ್ಟೇ ಅಲ್ಲ. ಬ್ಯಾಂಕಿಂಗ್ ಹಾಗೂ ವಿಮಾ ಸೌಲಭ್ಯಗಳನ್ನು ಪಡೆಯುವಲ್ಲಿ ಮೋಸ ಹೋಗದಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ಈ ಬಾರಿಯ ಗ್ರಾಹಕರ ದಿನವನ್ನು ಗ್ರಾಹಕರಿಗಾಗಿ 'ನ್ಯಾಯ ಮತ್ತು ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆ' ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ.
> –ಎಂ.ವಿ.ಭಾರತಿ, ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗದ ಅಧ್ಯಕ್ಷೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆ: ನಿಷೇಧಾಜ್ಞೆ

